ಸಂಪುಟ: 04 ಸಂಚಿಕೆ: 319 ಪುಟಗಳು: 08 ಶುಕ್ರವಾರ 31 ಜನವರಿ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
9448225696 +91 8035841833 ₹5

ಮುಂಜಾನೆ ಮಾತು

ನೀವು ಅನಗತ್ಯವಾಗಿ ಚಿಂತಿಸುತ್ತಿರಿ? ಯಾರಿಗಾಗಿಯೋ ಏಕೆ ಹೆದರುತ್ತೀರಿ? ಯಾರು ನಿಮ್ಮನ್ನು ಕೊಲ್ಲಲು ಸಾಧ್ಯ? ಅಂತಿಮವಾಗಿ ಆತ್ಮವು ಹುಟ್ಟುತ್ತದೆ ಅಥವಾ ಸಾಯುತ್ತದೆ ಅಷ್ಟೇ ಅಲ್ಲವೇ. ಸ್ವಯಂ ವಿನಾಶ ಮತ್ತು ನರಕಕ್ಕೆ ಮೂರು ದಾರಿಗಳಿವೆ, ಅದುವೇ ಕಾಮ, ಕೋಪ ಮತ್ತು ದುರಾಸೆ.

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಹೆಬ್ಬಾಳ್ಕರ್‌ಗೆ ನಿಂದನೆ ಸಿಟಿ ರವಿಗೆ ತಾತ್ಕಾಲಿಕ ರಿಲೀಫ್

• ಉದಯವಾಹಿನಿ, ಬೆಂಗಳೂರು

ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ಅಶ್ಲೀಲ ಪದ ಬಳಕೆ ಪ್ರಕರಣದಲ್ಲಿ ಬಿಜೆಪಿ ಪರಿಷತ್ ಸದಸ್ಯ ಸಿಟಿ ರವಿ ಅವರಿಗೆ ಹೈಕೋರ್ಟ್ ತಾತ್ಕಾಲಿಕ ರಿಲೀಫ್ ನೀಡಿದೆ. ಎಫ್‌ಐಆರ್ ರದ್ದುಕೋರಿ ಸಿಟಿ ರವಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ಇಂದು ಹೈಕೋರ್ಟ್‌ನಲ್ಲಿ ನಡೆಯಿತು. ತನಿಖೆಯ ವ್ಯಾಪ್ತಿಯ ಪ್ರಶ್ನೆಯನ್ನು ತೀರ್ಮಾನಿಸಬೇಕಿದೆ ಎಂದು ಅಭಿಪ್ರಾಯಪಟ್ಟು ಫೆ.20 ರವರೆಗೆ ನ್ಯಾ.ಎಂ.ನಾಗಪ್ರಸನ್ನ ಅವರಿದ್ದ ಪೀಠ ಮಧ್ಯಂತರ ತಡೆ ನೀಡಿ ನೀಡಿ ದೂರುದಾರೆ ಲಕ್ಷ್ಮಿ ಹೆಬ್ಬಾಳ್ಕರ್ ನೋಟಿಸ್ ಜಾರಿ ಮಾಡಿದೆ. ಸಿಟಿ ರವಿ ಪರ ವಾದ ಮಂಡಿಸಿದ ಪ್ರಭುಲಿಂಗ ನಾವದಗಿ, ಸದನದೊಳಗೆ ಭೀತಿರಹಿತವಾಗಿ ಮಾತನಾಡಲು ಅವಕಾಶವಿದೆ. ಮಾನನಷ್ಟ ಪ್ರಕರಣದ ಭೀತಿಯಿಲ್ಲದೇ ಚರ್ಚೆ ನಡೆಸಬಹುದು. ಮಹಿಳೆ ಗೌರವಕ್ಕೆ ಧಕ್ಕೆಯಾಗುವ ಮಾತುಗಳಿದ್ದರೂ ಸಭಾಪತಿ ಕ್ರಮ ಕೈಗೊಳ್ಳಬಹುದು ಎಂದು ಹೇಳಿದರು. ಎಸ್‌ಪಿಪಿ ಬಿ.ಎ.ಬೆಳ್ಳಿಯಪ್ಪ ಅವರು,ರವಿ ಅವರ ಧ್ವನಿ ಮಾದರಿ ಪಡೆಯಲು ಅವಕಾಶ ನೀಡಬೇಕೆಂದು. ಸದನದ ವ್ಯಾಪ್ತಿಯ ಚರ್ಚೆಗೆ ಮಾತ್ರ ಕ್ರಮದಿಂದ ವಿನಾಯಿತಿ ಇದೆ. ಟೇಬಲ್ ಮುರಿದು ದಾಂಧಲೆ, ಅಶ್ಲೀಲ ಪದ ಬಳಕೆಗೆ ವಿನಾಯಿತಿ ಇಲ್ಲ ಎಂದು ವಾದಿಸಿದರು.

ಕುಂಭಮೇಳ: ನಾಪತ್ತೆಯಾದವರ ಬಗ್ಗೆ ಮಾಹಿತಿ ಸಿಕ್ಕಿಲ್ಲ : ಸಿಎಂ

• ಉದಯವಾಹಿನಿ, ಬೆಂಗಳೂರು

ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ನಡೆಯುತ್ತಿರುವ ಮಹಾಕುಂಭ ಮೇಳದಲ್ಲಿ ಕಾಲ್ತುಳಿತ ಸಂಭವಿಸಿ ಬೆಳಗಾವಿಯ ನಾಲ್ವರು ಸಾವನ್ನಪ್ಪಿದ್ದಾರೆ. ಮೃತದೇಹಗಳನ್ನು ಏರ್ ಲಿಫ್ಟ್ ಮಾಡಲಾಗುತ್ತಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಕಾಲ್ತುಳಿತ ದುರಂತದಲ್ಲಿ ಕೆಲವರು ನಾಪತ್ತೆಯಾಗಿದ್ದಾರೆ ಎಂಬ ಬಗ್ಗೆ ನಮಗೆ ಮಾಹಿತಿ ಸಿಕ್ಕಿಲ್ಲ. ಆದರೆ ನಾಲ್ವರು ಸಾವನ್ನಪ್ಪಿದ್ದಾರೆ. ಮೃತದೇಹವನ್ನು ಏರ್ ಲಿಫ್ಟ್ ಮೂಲಕ ತರಲಾಗುತ್ತಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಜವಾಬ್ದಾರಿ ವಹಿಸಲಾಗಿದೆ ಎಂದರು. ದುರಂತದಲ್ಲಿ ಮೃತಪಟ್ಟ ನಾಲ್ಕರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಲಗುವುದು. ಸರ್ಕಾರದ ವತಿಯಿಂದ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾ ಉಸ್ತುವಾರಿ ಸಚಿವರು ಈ ಬಗ್ಗೆ ಘೋಷಿಸಲಿದ್ದಾರೆ ಎಂದು ಹೇಳಿದರು.

ಮೈಕ್ರೋಫೈನಾನ್ಸ್ ಹಾವಳಿ ನಿಯಂತ್ರಣಕ್ಕೆ ಸುಗ್ರೀವಾಜ್ಞೆ

• ಉದಯವಾಹಿನಿ, ಶಿವಮೊಗ್ಗ

ಮೈಕ್ರೋ ಫೈನಾನ್ಸ್ ಹಾವಳಿ ನಿಯಂತ್ರಣಕ್ಕೆ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ. ನಿಶ್ಚಿತ ಈ ಸಂಬಂಧ ಸರ್ಕಾರ ಸುಗ್ರೀವಾಜ್ಞೆಯನ್ನು ನಿಶ್ಚಿತವಾಗಿ ಹೊರಡಿಸಬೇಕು. ಇದಕ್ಕೆ ಕೇಂದ್ರ ಸರ್ಕಾರ ಸಹ ಭಾಗಿಯಾಬೇಕು ಎಂದು ಕೈಗಾರಿಕಾ ಸಚಿವ ಎಂ.ಬಿ ಪಾಟೀಲ್ ಹೇಳಿದರು. ನಾನು ಗೃಹ ಸಚಿವನಾಗಿ ಕೆಲಸ ಮಾಡಿದ್ದೇನೆ. ಆಗಲೂ ಸಹ ಐಎಂಎ ಹಗರಣ ಆಗಿತ್ತು. ಈಗ ಮೈಕ್ರೋ ಫೈನಾನ್ಸ್ ಹಳ್ಳಿ ಎಲ್ಲಾ ಕಡೆಯಿದೆ. ಇದು ನಿರಂತರವಾಗಿ ನಡೆದುಕೊಂಡು ಬಂದಿದೆ. ಇದಕ್ಕೆ ನಾವು ಅಂತ್ಯ ಹಾಡಬೇಕು. ಸುಗ್ರೀವಾಜ್ಞೆ ಮೂಲಕ ಕಠಿಣ ಕಾನೂನನ್ನು ತರಬೇಕಿದೆ ಎಂದರು. ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಪಡಿಸಬೇಕಿದೆ. ದುಬಾರಿ ಬಡ್ಡಿಯಿಂದಾಗಿ ಜನರು ಅವಮಾನ ಸಹಿಸದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದೆಲ್ಲಾ ಆಗಬಾರದು ಅದಕ್ಕಾಗಿ ಆರ್‌ಬಿಐ ಸಹ ಸಹಮತ ವ್ಯಕ್ತಪಡಿಸಬೇಕು. ಅವರು ಸಹ ಸೂಕ್ತ ಕಾನೂನು ತರಬೇಕು. ಮೈಕ್ರೋ ಫೈನಾನ್ಸ್ ನ ಹಾವಳಿಗೆ ಇತಿಶ್ರೀ ಹಾಡಬೇಕು ಎಂದರು.

ನಾನು, ಯತ್ನಾಳ್, ಸುಧಾಕರ್ ಬಿಜೆಪಿ ಶುದ್ಧೀಕರಣ ಮಾಡುತ್ತಿದ್ದೇವೆ

• ಉದಯವಾಹಿನಿ, ಶಿವಮೊಗ್ಗ

ಬಿಜೆಪಿ ಶುದ್ದೀಕರಣ ಎಂದರೆ ಹಿಂದುತ್ವವನ್ನು ಪ್ರತಿಪಾದಿಸುವುದು. ಅದೇ ಕೆಲಸ ನಾನು ಮಾಡುತ್ತಿದ್ದೇನೆ. ನಾನು ಶುರು ಮಾಡಿದ ಮೇಲೆ ಯತ್ನಾಳ್ ಹೇಳಿದ್ದರು. ಸುಧಾಕರ್ ಸೇರಿ ಮೊದಲಾದವರು ಶುದ್ದೀಕರಣ ಪ್ರಯತ್ನ ಮಾಡುತ್ತಿದ್ದಾರೆ. ಎಲ್ಲಾರ ನಂಬಿಕೆ ಬಿಜೆಪಿ ಶುದ್ದೀಕರಣ ಆಗಬೇಕು ಎನ್ನುವುದು.ಅದು ಆಗುತ್ತದೆ ಎಂದು ಮಾಜಿ ಡಿಸಿಎಂ ಕೆ.ಎಸ್.ಈಶ್ವರಪ್ಪ ಹೇಳಿದರು. ರಾಜ್ಯದ ರಾಜಕಾರಣ ಗಬ್ಬೆದ್ದು ಹೋಗಿದೆ. ನಾವು ಕಟ್ಟಿದ ಪಕ್ಷವು ಹಾಳಾಗಿ ಹೋಗಿದೆ. ಕೆಲವು ಸ್ವಾರ್ಥ ರಾಜಕಾರಣಿಗಳ ಕೈಗೆ ಬಿಜೆಪಿ ಪಕ್ಷ ಸಿಕ್ಕಿದೆ. ತಾತ್ಕಾಲಿಕ ಸಮಸ್ಯೆ ಇದೆ. ದೊಡ್ಡವರು ಇದನ್ನು ಸರಿ ಮಾಡುತ್ತಾರೆ ಎಂದರು. ಧರ್ಮ ಉಳಿಸುವಂತ ಕೆಲಸ ನಿರಂತರ ರಾಜ್ಯದಲ್ಲಿ ಹಿಂದೂ ಸಮಾಜ ವಿವಿಧ ಜಾತಿಯ ಮಠಾಧೀಶರು ಸಾವಿರಾರು ಸಂಖ್ಯೆಯಲ್ಲಿದ್ದಾರೆ. ಎಲ್ಲಾ ಜಾತಿ ಒಂದಾಗಬೇಕೆಂಬ ಆಪೇಕ್ಷೆಯಿಂದ ನಮ್ಮನ್ನು ಕರೆದಿದ್ದರು. ತುಂಬಾ ಸಂತೋಷದಿಂದ ಕಾರ್ಯಕ್ರಮದಲ್ಲಿ ನಾನು ಭಾಗಿಯಾದೆ. ಕ್ರಾಂತಿವೀರ ಬ್ರಿಗೇಡ್ ಆರಂಭಿಸಬೇಕೆಂದು ಸ್ವಾಮೀಜಿಗಳು ಹೇಳಿದ್ದಾರೆ ಎಂದರು.

ತಟಸ್ಥ ಗುಂಪಿನ ಜೊತೆಗೂ ಮಾತುಕತೆ...!

ಎರಡು ಹಂತದಲ್ಲಿ ಸಭೆ ನಡೆಯದೆ. ತಟಸ್ಥ ಗುಂಪು ಪರಿವರ್ತನೆಯಾಗಿ ನಿಷ್ಠಾವಂತ ಗುಂಪಾಗುತ್ತಿದೆ. ಪಕ್ಷ ಉಳಿಸುವ ಗುಂಪು ದೊಡ್ಡದಾಗುತ್ತಿದೆ. ನಾಳೆ ಎಲ್ಲಾವೂ ಚರ್ಚೆ ಮಾಡ್ತೀವಿ ಎಂದರು. ಈ ಅಧ್ಯಕ್ಷತೆಯನ್ನ ನಾವು ಸುಕಾರಾಮ್ ಒಪ್ಪೋದಿಲ್ಲ. ಅಧ್ಯಕ್ಷ ಸ್ಥಾನದ ಸ್ಪರ್ಧೆ ವಿಚಾರ ಚರ್ಚೆ ಮಾಡ್ತೀವಿ ಇನ್ನೂ ಫೈನಲ್ ಮಾಡಿಲ್ಲ ಎಂದು ತಿಳಿಸಿದರು.

ಬಹಳ ದಿವಸ ಅನ್ಯಾಯ ಸರ್ವಾಧಿಕಾರಿ ಮನಸ್ಥಿತಿ ಯಾವ ನಾಯಕನಲ್ಲಿದೆಯೋ ಅವರ ಅಂತ್ಯ ಬೇಗ ಆಗುತ್ತೆ. ಇವರ ಅಂತ್ಯಯೂ ಬೇಗ ಆಗಲಿದೆ ಎಂದು ಭವಿಷ್ಯ ನುಡಿದ ಅವರು, ರೆಬಲ್ ಗೆ ಆಲ್ ದಿ ಬೆಸ್ಟ್ ಹೇಳಿದ ವಿಚಾರವಾಗಿ, ವಿಜಯೇಂದ್ರ ದುಡ್ಡು ಮಾತನಾಡುತ್ತಿದೆ. ರಾಜ್ಯ ಸರ್ಕಾರ ಸಹ ಅವರ ಜೊತೆಗೆ ಇರೋದು ದುರ್ದೈವ ಎಂದು ಕಿಡಿಕಾರಿದರು.

'ನನ್ನ ಸಮಾಧಾನದ ದಿನಗಳು ಮುಗಿದವು. ಇನ್ನು ಏನಿದ್ದರೂ ಯುದ್ಧ. ವರಿಷ್ಠರಿಗೆ ವಿಜಯೇಂದ್ರ ವಿರುದ್ಧ ದೂರು ನೀಡಿ, ಆ ಬಳಿಕ ಬೆಂಬಲಿಗರ ಜತೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳುವುದಾಗಿಯೂ ಎಚ್ಚರಿಕೆ ನೀಡಿದರು.'ತಮಗೆ ಬೇಕಾದವರನ್ನು ಜಿಲ್ಲಾ ಅಧ್ಯಕ್ಷ, ರಾಜ್ಯ ಕಾರ್ಯದರ್ಶಿ, ರಾಜ್ಯ ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯ ಉಪಾಧ್ಯಕ್ಷರನ್ನು ಮಾಡಿಕೊಂಡಿದ್ದಾರೆ. ವಿಜಯೇಂದ್ರ ಅವರ ಧೋರಣೆ ಬೇಸರ ಹುಟ್ಟಿಸಿದೆ.

-ಡಾ.ಕೆ.ಸುಧಾಕರ್ ಸಂಸದ

ಸುಧಾಕರ್ ರಾಜ್ಯಾಧ್ಯಕ್ಷ ವಿಜಯೇಂದ್ರ ಬಗ್ಗೆ ಬಹಳ ಕೇವಲವಾಗಿ ಮಾತಾಡಿದ್ದಾರೆ. ಅವರು ಮಾತಾಡಿರುವುದು ನಮಗೆ ಹಿಡಿಸಿಲ್ಲ. ಏನೇ ಇದ್ದರೂ ರಾಜ್ಯಾಧ್ಯಕ್ಷರ ಜೊತೆ ಮಾತಾಡಬಹುದಿತ್ತು. ಪರೋಕ್ಷವಾಗಿ ನನ್ನ ಕ್ಷೇತ್ರದ ಬಗ್ಗೆಯೂ ಮಾತಾಡಿದ್ದಾರೆ. ನಾನೇನು ದಡ್ಡ ಅಲ್ಲ. ಸುಧಾಕರ್ ನನ್ನಿಂದಲೇ ಸರ್ಕಾರ ರಚನೆ ಆಯಿತು ಎಂದು ಹೇಳಿದ್ದಾರೆ. 17 ಶಾಸಕರು ಬಂದಾಗ ಕೊನೆಯದಾಗಿ ಮೆಜಾರಿಟಿ ಆದ ಬಳಿಕ ಬಂದವರು ಸುಧಾಕರ್ ಎಂದು ತಿರುಗೇಟು ನೀಡಿದರು.

-ಎಸ್.ಆರ್. ವಿಶ್ವನಾಥ್ ಯಲಹಂಕ ಶಾಸಕ

• ವಿಜಯೇಂದ್ರ ನೈಜ ಬಣ್ಣ ಬಯಲಾಗುತ್ತಿದೆ • ಅವರ ದುಡ್ಡು ಮಾತನಾಡ್ತಿದೆ • ಅನ್ಯಾಯ, ಸರ್ವಾಧಿಕಾರಿ ಮನಸ್ಥಿತಿ ಬೇಗ ಅಂತ್ಯ • ವಿಜಯೇಂದ್ರ ವಿರುದ್ಧ ಯತ್ನಾಳ್ ವಾಗ್ದಾಳಿ • "ಯಡಿಯೂರಪ್ಪ ಒಬ್ಬರೇ ಪಕ್ಷ ಕಟ್ಟಿಲ್ಲ • ನಮ್ಮೆಲ್ಲರ ದುಡಿಮೆ ಇದೆ"

ಬಿಜೆಪಿ ಆಂತರಿಕ ಕಚ್ಚಾಟ ಪಟ್ಟಕ್ಕಾಗಿ ಕಿತ್ತಾಟ



• ಉದಯವಾಹಿನಿ, ಬೆಂಗಳೂರು

ವಿಜಯೇಂದ್ರಗೆ ದುಡ್ಡಿನ ದುರಹಂಕಾರವಿದೆ. ದುಡ್ಡು ಮಾತಾಡಿಸ್ತಿದೆ. ರಾಜ್ಯ ಸರ್ಕಾರವೂ ಸಹ ಅವರ ಜೊತೆಗೆ ಇರೋದು ದುರ್ದೈವ ಎಂದು ಬಸನಗೌಡ ಯತ್ನಾಳ್ ವಾಗ್ದಾಳಿ ನಡೆಸಿದರು.

ವಿಧಾನಸೌಧದಲ್ಲಿ ಮಾತನಾಡಿ, ಸರ್ವಾಧಿಕಾರ ಪತನ ಆಗಲೇಬೇಕು. ಬಹಳ ದಿವಸ ಅನ್ಯಾಯ, ಸರ್ವಾಧಿಕಾರಿ ಮನಸ್ಥಿತಿ ಯಾವ ನಾಯಕನಲ್ಲಿದೆಯೋ ಅವರ ಅಂತ್ಯ ಬೇಗ ಆಗುತ್ತದೆ. ಈಗ ಆ ಕಾಲ ಬಂದಿದೆ ಎಂದು ವಿಜಯೇಂದ್ರ ವಿರುದ್ಧ ಕಿಡಿಕಾರಿದರು. ಮುಡಾ ಪ್ರಕರಣದಲ್ಲಿ ಮೈಸೂರಿಗೆ ಪಾದಯಾತ್ರೆ ತಲುಪುವುದರೊಳಗೆ ರಾಜೀನಾಮೆ ಕೊಡಬೇಕು ಅಂತ ವಿಜಯೇಂದ್ರ ಹೇಳಿದ್ರು. ಆದರೆ, ವಿಜಯೇಂದ್ರ ಮೇಲಿರುವ ಆರೋಪ ಹೊರ ತೆಗೆದುಬಿಟ್ರೆ ಅವರ ಕಥೆ ಮುಗಿದೇ ಹೋಗುತ್ತದೆ. ಅದ್ಯಾಕೆ ಸಿದ್ದರಾಮಯ್ಯನವರು ಸುಮ್ಮನಿದ್ದಾರೋ... ಇಲ್ಲ, ಸಿದ್ದರಾಮಯ್ಯರದ್ದು ಏನಾದ್ರೂ ವಿಜಯೇಂದ್ರ ಹತ್ರ ಇದೆಯೋ ಗೊತ್ತಿಲ್ಲ. ಅದಕ್ಕೆ ಹೊಂದಾಣಿಕೆ ಮಾಡಿಕೊಂಡಂತೆ ಕಾಣ್ತಿದೆ ಎಂದು ಆರೋಪಿಸಿದರು. ವಿಜಯೇಂದ್ರ ಅವರ ನೈಜ ಬಣ್ಣ ಬಯಲಾಗುತ್ತಿದೆ, ವರಿಷ್ಠರಲ್ಲಿ ನಾನು ಒಂದು ಮನವಿ ಮಾಡ್ತೇನೆ. ಯಾಕೆ ಚುನಾವಣೆ ಸರ್ಕಸ್ ಮಾಡ್ತಿದ್ದೀರಾ... ನೇರವಾಗಿ ಅಧ್ಯಕ್ಷರನ್ನೇ ಘೋಷಣೆ ಮಾಡಿ ಕೈಬಿಟ್ಟುಬಿಡಿ. ಗೋವಿಂದ ಕಾರಜೋಳರನ್ನು ಹೊಡೆಯಲು ಮುಂದಾದವರನ್ನು ಜಿಲ್ಲಾಧ್ಯಕ್ಷರನ್ನಾಗಿ ಮಾಡಿದ್ದೀರಾ... ಯಾವ ದಿಕ್ಕಿನಲ್ಲಿ ಪಕ್ಷ ಹೋಗುತ್ತಿದೆ... ಇವರ ಉದ್ದೇಶ ಪಕ್ಷ ಕಟ್ಟಬೇಕೋ ಅಂಥಾನೋ, ಕಂಪೆನಿ ಕಟ್ಟಬೇಕು ಅಂಥಾನೋ.... ಅಣ್ಣಾ ಕೇಂದ್ರ ಮಂತ್ರಿಯಾಗಲಿ, ಅಪ್ಪ ಉಪರಾಷ್ಟ್ರಪತಿಯಾಗಲಿ. ಈ ರೀತಿ ಪಕ್ಷ ನಡೆಸಲು ಆಗೋದಿಲ್ಲ. ವಿಜಯೇಂದ್ರ ಅವರನ್ನೇ ರಾಜ್ಯಾಧ್ಯಕ್ಷ ಮಾಡುವುದಾದ್ರೆ ಮಾಡಿಬಿಡಿ. ಚುನಾವಣಾ ಪ್ರಕ್ರಿಯೆಗಳು ಬೇಡ, ನಿಮಗೆ ಬೇಕಾದವರನ್ನು ಮತದಾರರನ್ನಾಗಿ ಮಾಡೋದಾದ್ರೆ ಮತದಾನ ಯಾಕೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇವರು ಚಡ್ಡಿ ಹಾಕೋಕಿಂತ ಮುಂಚೆ ನಾನು ಜಿಲ್ಲಾಧ್ಯಕ್ಷ ಮತ್ತು ರಾಜ್ಯದ ಉಪಾಧ್ಯಕ್ಷನಾಗಿದ್ದೆ. ಯಡಿಯೂರಪ್ಪ ಒಬ್ಬರೇ ಪಕ್ಷ ಕಟ್ಟಿಲ್ಲ. ನಮ್ಮೆಲ್ಲರ ದುಡಿಮೆ ಇದೆ. ವಿಜಯೇಂದ್ರನಿಂದ ಏನೂ ಕಲಿಯಬೇಕಾಗಿಲ್ಲ. ಏನು ಮಾಡ್ತಾರೆ... ಪಕ್ಷದಿಂದ ಹೊರಗಡೆ ಹಾಕ್ತೀರಾ.... ಅಪ್ಪನನ್ನು ಹೆದರಿಸಿರಬಹುದು. ಎಲ್ಲಾರನ್ನೂ ಹೆದರಿಸಲು ಆಗುವುದಿಲ್ಲ, ನಾವು ಸತ್ಯದ ಪರವಾಗಿ ನಿಲ್ಲುತ್ತೇವೆ ಎಂದರು. ಅರುಣ್ ಸಿಂಗ್ ಎಂಬ ರಾಜ್ಯ ಉಸ್ತುವಾರಿ ಇದ್ದರು. ಅವರು ವಿಜಯೇಂದ್ರರನ್ನು ಹೊಗಳಿ ಹೊಗಳಿ ಸಾಕಷ್ಟು ಅನುಕೂಲ ಮಾಡಿಕೊಂಡು ಹೋದ್ರು. ಪಕ್ಷ ಕಟ್ಟಲು ಎಲ್ಲಾರ ಸಲಹೆ ಬೇಕು. ಆದರೆ ನಿಮಗೆ ಬೇಕಾದ ನಾಲ್ವರ ಸಲಹೆಗಳಲ್ಲ, ಮಾಜಿ ಕೆಜೆಪಿಯಲ್ಲಿನ ನಿಷ್ಠರಿಗೆ ಮಾತ್ರ ಆದ್ಯತೆ. ಹೊಂದಾಣಿಕೆಯಿಂದ ಪಕ್ಷವನ್ನು ಬಲಿಕೊಟ್ಟಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಹೈಕಮಾಂಡ್‌ಗೆ ದೂರು

ತಟಸ್ಥ ಗುಂಪು ಸಹ ಸಭೆಯಲ್ಲಿ ಭಾಗಿಯಾಗುವ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಎರಡು ಹಂತದ ಸಭೆ ನಡೆಯಲಿದೆ. ಅವರ ಜೊತೆ ಮಾತುಕತೆ ಮಾಡಿದ್ದೇವೆ. ಒಟ್ಟಾಗಿ ಹೈಕಮಾಂಡ್‌ಗೆ ದೂರು ಕೊಡುತ್ತೇವೆ. ಸಭೆಯಲ್ಲಿ ಏನು ಚರ್ಚೆ ಮಾಡಬೇಕೋ ಮಾಡುತ್ತೇವೆ. ಈ ಅಧ್ಯಕ್ಷನನ್ನು ಅಂತೂ ಒಪ್ಪಲು ಸಾಧ್ಯವಿಲ್ಲ ಎಂದರು.

ಸರ್ವಾಧಿಕಾರಿ ನಾಯಕನ ಅಂತ್ಯ ಬೇಗ ಆಗಲಿದೆ

ಎರಡು ಹಂತದಲ್ಲಿ ಸಭೆ ನಡೆಯಲಿದೆ. ತಟಸ್ಥ ಗುಂಪು ಪರಿವರ್ತನೆಯಾಗಿ ನಿಷ್ಠಾವಂತ ಗುಂಪಾಗುತ್ತಿದೆ. ಪಕ್ಷ ಉಳಿಸುವ ಗುಂಪು ದೊಡ್ಡದಾಗುತ್ತಿದೆ. ನಾಳೆ ಎಲ್ಲವೂ ಚರ್ಚೆ ಮಾಡುತ್ತೇವೆ. ಈ ಅಧ್ಯಕ್ಷತೆಯನ್ನು ನಾವು ಒಪ್ಪುವುದಿಲ್ಲ. ಅಧ್ಯಕ್ಷ ಸ್ಥಾನದ ಸ್ಪರ್ಧೆ ವಿಚಾರ ಚರ್ಚೆ ಮಾಡುತ್ತೇವೆ. ಇನ್ನೂ ಫೈನಲ್ ಮಾಡಿಲ್ಲ, ಬಹಳ ದಿವಸ ಅನ್ಯಾಯ, ಸರ್ವಾಧಿಕಾರಿ ಮನಸ್ಥಿತಿ ಯಾವ ನಾಯಕನಲ್ಲಿದೆಯೋ ಅವರ ಅಂತ್ಯ ಬೇಗ ಆಗುತ್ತದೆ. ಹಾಗೆಯೇ ಈಗ ಅಂತ್ಯದ ಕಾಲ ಬಂದಿದೆ ಎಂದು ಕಿಡಿಕಾರಿದರು.

1 ಯಾಕೆ ಚುನಾವಣೆ ಸರ್ಕಸ್ ಮಾಡ್ತಿದ್ದೀರಾ... ನೇರವಾಗಿ ಅಧ್ಯಕ್ಷರನ್ನೇ ಘೋಷಣೆ ಮಾಡಿ ಕೈಬಿಟ್ಟುಬಿಡಿ ಎಂದು ಕಿಡಿಕಾರಿದರು.

2 ಅಣ್ಣಾ ಕೇಂದ್ರ ಮಂತ್ರಿಯಾಗಲಿ ಅಪ್ಪ ಉಪರಾಷ್ಟ್ರಪತಿಯಾಗಲಿ ಈ ರೀತಿ ಪಕ್ಷ ನಡೆಸಲು ಆಗೋದಿಲ್ಲ.

3 ವಿಜಯೇಂದ್ರ ಹೇಳಿಕೆಗೆ ಯತ್ನಾಳ್ ತಿರುಗೇಟು ನೀಡಿ, ಇವರು ಚಡ್ಡಿ ಹಾಕೋಕಿಂತ ಮುಂಚೆ ನಾನು ಜಿಲ್ಲಾಧ್ಯಕ್ಷ ಮತ್ತು ರಾಜ್ಯದ ಉಪಾಧ್ಯಕ್ಷನಾಗಿದ್ದೆ

ಸುಧಾಕರ್ ಅವ್ರು ಚಿಕ್ಕಬಳ್ಳಾಪುರ ಸಂಸದರಾಗಿದ್ದಾರೆ ಅಂತ ಅವರಿಗೆ ಬರೆದು ಕೊಟ್ಟಿಲ್ಲ. ಇಡೀ ಪಕ್ಷ ತಾವು ಹೇಳಿದಂತೆ ಕೇಳಬೇಕು ಅನ್ನೋ ಮನಸ್ಥಿತಿಯಿಂದ ಸುಧಾಕರ್ ಹೊರಗೆ ಬರಬೇಕು. ಅವ್ರು ಶಾಸಕರಾಗಿ, ಮಂತ್ರಿಯಾಗಿ, ಸಂಸದರಾಗಿದ್ದಾರೆ. ಅವರಿಗೆ ರಾಜ್ಯಾಧ್ಯಕ್ಷನಾಗಿ, ಸಿಎಂ ಆಗುವ ಲೆಕ್ಕಾಚಾರ ಇರಬಹುದು, ಅದು ನನಗೆ ಗೊತ್ತಿಲ್ಲ.

-ಪ್ರೀತಂ ಗೌಡ, ಮಾಜಿ ಶಾಸಕ

ಹಿಂದಿನ ಬಜೆಟ್‌ನಲ್ಲಿ ಘೋಷಿಸಿದ ಅನುದಾನ ಕೊಡಲಿ ಸಾಕು

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರದ ಹಿಂದಿನ ಬಜೆಟ್‌ನಲ್ಲಿ ರಾಜ್ಯಕ್ಕೆ ಘೋಷಿಸಿರುವ ಅನುದಾನ ಬಿಡುಗಡೆ ಮಾಡಬೇಕು ಎಂದು ಒತ್ತಾಯ ಮಾಡಿದ್ದೇವೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದ್ದಾರೆ. ರಾಜ್ಯ ಸರ್ಕಾರ ಈಗಾಗಲೇ ಕೇಂದ್ರಕ್ಕೆ ನಮ್ಮ ಬೇಡಿಕೆಗಳನ್ನು ಲಿಖಿತವಾಗಿ ಮತ್ತು ಮನವಿ ರೂಪದಲ್ಲಿ ಸಲ್ಲಿಸಿದ್ದೇವೆ. ಈ ಹಿಂದಿನ ವರ್ಷಗಳಲ್ಲಿ ಕೇಂದ್ರ, ರಾಜ್ಯಕ್ಕೆ ಮಲತಾಯಿ ಧೋರಣೆ ಮಾಡಿದೆ. ಆದರೂ ಜನರ ಪರವಾಗಿ ನಮ್ಮ ಹಕ್ಕು ಪ್ರತಿಪಾದನೆ ಮಾಡುವ ಕೆಲಸ ಮಾಡಿದ್ದೇವೆ. ನಮಗೆ ಹೊಸ ನುದಾನ ಕೊಡದೇ ಹೋದರೂ ಹಿಂದಿನ ವರ್ಷಗಳಲ್ಲಿ ಘೋಷಣೆ ಮಾಡಿರುವ ಅನುದಾನ ಕೊಟ್ಟರೆ ಸಾಕಾಗಿದೆ ಎಂದರು.

ರಾಜ್ಯಕ್ಕೆ ಹಿಂದಿನ ಹಣಕಾಸು ಆಯೋಗ 11,495 ಸಾವಿರ ಕೋಟಿ ರೂ. ವಿಶೇಷ ಅನುದಾನ ಕೊಡಲು ಶಿಫಾರಸು ಮಾಡಿತ್ತು. ಅದನ್ನ ಕೊಡಲಿಲ್ಲ. ಈ ಅನುದಾನ ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡಿದ್ದೇವೆ. ಭದ್ರಾ ಮೇಲ್ದಂಡೆ ಯೋಜನೆಗೆ ಘೋಷಣೆ ಮಾಡಿದ್ದ 5 ಸಾವಿರ ಕೋಟಿ ರೂ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ದೈವಂ ಮಾನುಷರೂಪೇಣ ಭವತಿ

ಜನವರಿ 26 ರಂದು ಡಾ. ಬಿ. ಆರ್ ಅಂಬೇಡ್ಕರ್ ಪ್ರತಿಷ್ಠಾನದ ವತಿಯಿಂದ ಎಂ. ಮುನಿನಾರಾಯಣ ಸಂಗಡಿಗರು ಏರ್ಪಡಿಸಿದ್ದ 76ನೇ ಗಣರಾಜ್ಯೋತ್ಸವ, ಸಿದ್ಧಗಂಗೆಯ ಶಿವಕುಮಾರ ಸ್ವಾಮಿಗಳ, ವಿಜಯಪುರದ ಸಿದ್ಧೇಶ್ವರ ಸ್ವಾಮಿಗಳ ಪುಣ್ಯಸ್ಮರಣೆಯಲ್ಲಿ ಭಾಗವಹಿಸಿ ಆಡಿದ ಮಾತು: ದೇವರೆಂದರೆ ನಮ್ಮ ಬುದ್ಧಿಗೆ ನಿಲುಕದ ಅಗೋಚರ ಅದ್ಭುತ ಶಕ್ತಿ. ಕಾಣುವುದೆಲ್ಲ ದೇವರು. ನಾವೂ ದೇವರು. ಇಲ್ಲದಿದ್ದಲ್ಲಿ ಸಣ್ಣ ಕಣ್ಣಿನಿಂದ ದೊಡ್ಡ ಜಗತ್ತನ್ನು ನೋಡಲು ಆಗುತ್ತಿರಲಿಲ್ಲ. ಆದ್ದರಿಂದಲೇ ಹಿರಿಯರು ದೈವಂ ಮಾನುಷರೂಪೇಣ ಭವತಿ = ದೈವ ದೇವರು ಮನುಷ್ಯನ ರೂಪದಲ್ಲಿ ತೋರುತ್ತಾನೆ ಎಂದಿದ್ದಾರೆ. ಅಂಬೇಡ್ಕರ್ ಹಾಗೂ ತಂಡ ಭಾರತೀಯ ಸಂವಿಧಾನವನ್ನು ರಚಿಸದಿದ್ದಲ್ಲಿ, ಚಾತುರ್ವರ್ಣ್ಯ ಮೇಲು ಕೀಳು ವ್ಯವಸ್ಥೆ ಮುಂದುವರೆದಿದ್ದಲ್ಲಿ ಇಂದು ನಾವೆಲ್ಲ ಯಾವುದೇ ಭೇದವಿಲ್ಲದೇ ಸಮಾನತೆಯಿಂದ ವಿದ್ಯೆ ಉದ್ಯೋಗ ಪಡೆಯುವಂತಿರಲಿಲ್ಲ. ಶಿವಕುಮಾರ ಸ್ವಾಮಿಗಳು ನಿತ್ಯ ಹತ್ತಾರು ಸಾವಿರ ಬಡ ವಿದ್ಯಾರ್ಥಿಗಳಿಗೆ ಆಶ್ರಯ ಅನ್ನ ವಿದ್ಯೆ ಕರುಣಿಸಿದ ಮಹಾನುಭಾವರು. ಸಿದ್ಧೇಶ್ವರ ಸ್ವಾಮಿಗಳು ಬಿಳಿ ಬಟ್ಟೆಯ ಜೇಬಿಲ್ಲದ ಸರಳ ಸಂತ. ಜ್ಞಾನ ಸಂಸ್ಕಾರ ಬಿತ್ತಿದ ಮಹಾನ್ ಯೋಗಿ. ಇವರೆಲ್ಲ ಜಗದ ಉದ್ಧಾರಕ್ಕಾಗಿ ಅವತರಿಸಿದ ಭಗವಂತನ ಪ್ರತಿರೂಪ.

ಪತಿ ಇಲ್ಲ ಅಂತ ಹೇಳಿ ಹೈಫೈ ಮನೆ ಬಾಡಿಗೆ ಪಡೆದು ವೇಶ್ಯಾವಾಟಿಕೆ: ಇಬ್ಬರು ಅರೆಸ್ಟ್

• ಉದಯವಾಹಿನಿ, ಬೆಂಗಳೂರು

ಉದ್ಯೋಗದಾಸೆ ತೋರಿಸಿ ಯುವತಿಯರನ್ನು ವೇಶ್ಯಾವಟಿಕೆಗೆ ಬಳಕೆ ಮಾಡುತ್ತಿದ್ದ ಇಬ್ಬರು ಮಹಿಳೆಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಉಮಾ, ಪುಷ್ಪಲತಾ ಬಂಧಿತ ಆರೋಪಿಗಳು. ಬ್ಯಾಡರಹಳ್ಳಿ ಠಾಣಾ ವ್ಯಾಪ್ತಿಯ ಬಿಇಎಲ್ ಬಡವಾಣೆಯಲ್ಲಿ ಹೈ ಫೈ ಮನೆ ಬಾಡಿಗೆ ಪಡೆದಿದ್ದ ಆರೋಪಿಗಳು ಈ ಕೃತ್ಯ ನಡೆಸುತ್ತಿದ್ದರು. ಮನೆ ಮಾಲೀಕರ ಬಳಿ ಪತಿ ಇಲ್ಲಎಂದು ಮನೆಯನ್ನು ಬಾಡಿಗೆಗೆ ಪಡೆಯುತ್ತಿದ್ದ ಇವರು ಹೊರ ರಾಜ್ಯದಿಂದ ಬರುವ ಯುವತಿಯರಿಗೆ ಉದ್ಯೋಗದ ಆಸೆ ತೋರಿಸಿ ವೇಶ್ಯವಾಟಿಕೆ ದಂಧೆಗೆ ದೂಡುತ್ತಿದ್ದರು. ಗಿರಾಕಿಗಳನ್ನ ಫೋನ್ ಮೂಲಕ ಸಂಪರ್ಕ ಮಾಡಿ ಫೋಟೋಗಳನ್ನು ಕಳುಹಿಸಿ ಡೀಲ್ ಮಾಡುತ್ತಿದ್ದರು. ಖಚಿತ ಮಾಹಿತಿ ಪಡೆದ ಸಿಸಿಬಿ ಮಹಿಳಾ ಸಂರಕ್ಷಣಾ ಘಟಕದ ಅಧಿಕಾರಿಗಳು ದಾಳಿ ನಡೆಸಿ ಓರ್ವ ಯುವತಿಯನ್ನು ರಕ್ಷಿಸಿ ಇಬ್ಬರು ಮಹಿಳೆಯರನ್ನು ಬಂಧಿಸಿದ್ದಾರೆ. ಬೆಂಗಳೂರಿನ ಅನೇಕ ಭಾಗಗಳಲ್ಲಿ ವೇಶ್ಯಾವಾಟಿಕೆ ಅಡ್ಡೆ ಮೇಲೆ ಸಿಸಿಬಿ ದಾಳಿ ನಡೆಸಿದೆ. ಸಂಪಿಗೇಹಳ್ಳಿ, ಕೆಆರ್ ಪುರಂ, ರಾಮಮೂರ್ತಿ ನಗರ, ಹನುಮಂತ ನಗರ ಠಾಣಾ ವ್ಯಾಪ್ತಿಯ ಐಷಾರಾಮಿ ಹೋಟೆಲ್, ಅಪಾರ್ಟ್‌ಮೆಂಟ್ ಮನೆಗಳಲ್ಲಿ ದಂಧೆ ನಡೆಸುತ್ತಿದ್ದ 4 ಆರೋಪಿಗಳನ್ನು ಬಂಧಿಸಿ 9 ಮಹಿಳೆಯರನ್ನು ರಕ್ಷಿಸಿದ್ದಾರೆ.

ನಾಮಫಲಕದಲ್ಲಿ 60% ಕನ್ನಡ: ಕಠಿಣ ನಿಯಮ ರೂಪಿಸಲು ಸಚಿವ ಸೂಚನೆ

• ಉದಯವಾಹಿನಿ, ಬೆಂಗಳೂರು

ರಾಜ್ಯಾದ್ಯಂತ ಎಲ್ಲಾ ವ್ಯಾಪಾರ ಉದ್ದಿಮೆ, ಶಿಕ್ಷಣ ಸಂಸ್ಥೆ, ಅಂಗಡಿ ಮುಂಗಟ್ಟುಗಳ ನಾಮಫಲಕದಲ್ಲಿ ಶೇ. 60ರಷ್ಟು ಕನ್ನಡ ಅಳವಡಿಕೆಗೆ ಕಠಿಣವಾದ ಅಂತಿಮ ಕರಡು ನಿಯಮ ರೂಪಿಸುವಂತೆ ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ವಿಕಾಸ ಸೌಧದ ತಮ್ಮ ಕಚೇರಿಯಲ್ಲಿ ಗುರುವಾರ ಸಚಿವರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೈಗಾರಿಕೆ ಇಲಾಖೆ, ಗೃಹ ಇಲಾಖೆ ಹಾಗೂ ಕಾನೂನು, ಶಾಲಾ ಶಿಕ್ಷಣ, ಗ್ರಾಮೀಣಾಭಿವೃದ್ಧಿ ಇಲಾಖೆಯ ಅಧಿಕಾರಗಳ ಜತೆ ಸಭೆ ನಡೆಸಿ ಈ ಸೂಚನೆ ನೀಡಿದರು. ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ ಸಮರ್ಪಕವಾಗಿ ಅನುಷ್ಠಾನ ಆಗಲೇ ಬೇಕು. ಕೆಲವೆಡೆ ನಾಮಫಲಕದಲ್ಲಿ ಶೇ. 60ರಷ್ಟು ಕನ್ನಡ ಬಳಕೆ ಆಗಿಲ್ಲ. ಹೀಗಾಗಿ ಕಠಿಣವಾದ ಕ್ರಮ ಆಗಬೇಕು. ಶೀಘ್ರವೇ ನಿಯಮಗಳ ಬಿಡುಗಡೆ ಮಾಡಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಪೊಲೀಸರನ್ನೊಳಗೊಂಡ ಟಾಸ್ಕ್ ಫೋರ್ಸ್ ರಚನೆ, ಬಿಬಿಎಂಪಿ ವಲಯಗಳಲ್ಲಿ ಜಾಗೃತ ವಾಹನಗಳ ಬಳಕೆ, ರಾಜ್ಯಾದ್ಯಂತ ಸಾರ್ವಜನಿಕರಲ್ಲಿ ನಾಮ ಫಲಕದಲ್ಲಿ ಶೇ. 60ರಷ್ಟು ಕನ್ನಡ ಬಳಕೆ ಬಗ್ಗೆ ಜಾಗೃತಿ ಮೂಡಿಸಬೇಕು. ವಿಧೇಯಕ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಮಿತಿ ರಚನೆ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು.

ಜಮೀನು ದಾಖಲೆ ತಿರುಚುವಿಕೆ ತಪ್ಪಿಸಲು ಭೂ ಸುರಕ್ಷಾ ಯೋಜನೆ ಜಾರಿ

• ಉದಯವಾಹಿನಿ, ಬೆಂಗಳೂರು

ಭೂ ಸುರಕ್ಷಾ ಪರಿಣಾಮಕಾರಿ ಜಾರಿಗೆ ಸಿಎಂ ಸಿದ್ದರಾಮಯ್ಯ ಮಹತ್ವದ ಸೂಚನೆ ನೀಡಿದ್ದಾರೆ. ಜತೆಗೆ ತಹಶೀಲ್ದಾರ್ ಕೋರ್ಟ್‌ನಲ್ಲಿ 3 ತಿಂಗಳಲ್ಲಿ ಪ್ರಕರಣ ವಿಲೇವಾರಿಗೆ ನಿರ್ದೇಶನ ನೀಡಲಾಗಿದೆ. ಈ ಮೂಲಕ ಮಾಲೀಕರ ಹೆಸರಿಗೆ ಭೂಮಿ ನೋಂದಣಿ ಕಾರ್ಯಕ್ಕೆ ವೇಗ ಸಿಗಲಿದೆ. ಭೂ ದಾಖಲೆಗಳ ರಕ್ಷಣೆ ಸಂಬಂಧ ಭೂ ಸುರಕ್ಷಾ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಸೂಚಿಸಿದ್ದಾರೆ. ಗೃಹ ಕಚೇರಿ ಕೃಷ್ಣಾದಲ್ಲಿ ಕಂದಾಯ ಇಲಾಖೆ ಪ್ರಗತಿ ಪರಿಶೀಲನೆ ಸಭೆ ನಡೆಸಿದ ಅವರು, ಈ ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡು ಕಂದಾಯ ವ್ಯವಸ್ಥೆಯಲ್ಲಿನ ಸುಧಾರಣೆಗೆ ಒತ್ತು ನೀಡಬೇಕು. 21 ಜಿಲ್ಲೆಗಳಲ್ಲಿ ಆರಂಭಿಸಿರುವ ಡ್ರೋನ್ ಮೂಲಕ ಸರ್ವೆ ಕಾರ್ಯವನ್ನು ಉಳಿದ ಜಿಲ್ಲೆಗಳಲ್ಲಿ ಆರಂಭಿಸಬೇಕು ಎಂದು ಹೇಳಿದರು. ಈ ಬಗ್ಗೆ ಸಭೆಗೆ ಮಾಹಿತಿ ನೀಡಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಭೂ ಸುರಕ್ಷಾ ಮೂಲಕ ಈಗಾಗಲೇ 8 ಕೋಟಿ ಮೂಲ ದಾಖಲೆಗಳ ಕಂಪ್ಯೂಟರೀಕರಣ ಪ್ರಕ್ರಿಯೆ ಪೂರ್ಣಗೊಂಡಿದೆ. ವಂಚಕರು ದಾಖಲೆಗಳನ್ನು ತಿದ್ದಲು ಅವಕಾಶ ಆಗದಂತೆ ದಾಖಲೆಗಳಿಗೆ ಡಿಜಿಟಲ್ ಭದ್ರತೆ ಕಲ್ಪಿಸಲಾಗುತ್ತಿದೆ. ನಕ್ಷಾ ಯೋಜನೆಯಿಂದ ನಗರ ಪ್ರದೇಶದಲ್ಲಿ ಡ್ರೋನ್ ಸರ್ವೆ ನಡೆಸಿ ಪ್ರಾಪರ್ಟಿ ಕಾರ್ಡ್ ನೀಡಲಾಗುತ್ತಿದೆ ಎಂದರು. ಕಂದಾಯ ನ್ಯಾಯಾಲಯಗಳಲ್ಲಿ ಪ್ರಕರಣಗಳನ್ನು ಆದ್ಯತೆ ಮೇರೆಗೆ ವಿಲೇ ಮಾಡಬೇಕು. ತಹಶೀಲ್ದಾರ್ ಕೋರ್ಟ್‌ನಲ್ಲಿ 3 ತಿಂಗಳ ಒಳಗಾಗಿ ಪ್ರಕರಣಗಳ ವಿಲೇ ಮಾಡಬೇಕು ಎಂದು ಸಿಎಂ ಸೂಚಿಸಿದರು.

ಸ್ವಿಗ್ಗಿ ಕಂಪನಿಯ 7 ಕೋಟಿ ಹಣ ಬೆಟ್ಟಿಂಗ್‌ಗೆ ಹಾಕಿ ವಂಚಿಸಿದ್ದವ ಅರೆಸ್ಟ್

• ಉದಯವಾಹಿನಿ, ಬೆಂಗಳೂರು

ಸ್ವಿಗ್ಗಿ ಕಂಪನಿಯ ಹಣದಲ್ಲಿ ಆನ್‌ಲೈನ್ ಬೆಟ್ಟಿಂಗ್ ಆಡಿ, ಸುಮಾರು 7 ಕೋಟಿ ರೂ. ವಂಚಿಸಿದ ಉದ್ಯೋಗಿಯನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿಯನ್ನು ಶ್ರೀಕಾಂತ್ (23) ಎಂದು ಗುರುತಿಸಲಾಗಿದೆ. ಒಂದು ವರ್ಷದಿಂದ ಆರೋಪಿ ಕಂಪನಿಯ ಹಣಕಾಸು ವ್ಯವಹಾರ ನೋಡಿಕೊಳ್ಳುತ್ತಿದ್ದ ಅರ್ನಸ್ಟ್ ಅಂಡ್ ಯಂಗ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಆತ ಪ್ರತಿ ತಿಂಗಳು ಸ್ವಿಗ್ಗಿ ಖಾತೆಯಿಂದ 1 ರಿಂದ 2 ಕೋಟಿ ರೂ. ಹಣವನ್ನು ಎಗರಿಸುತ್ತಿದ್ದ ಎಂದು ತಿಳಿದು ಬಂದಿದೆ. ಕಂಪನಿಯ ಹಿರಿಯ ಅಧಿಕಾರಿ ಶೋರಿ ರಾಜನ್ ನೀಡಿದ ದೂರಿನ ಪ್ರಕಾರ, ಅರ್ನಸ್ಟ್ ಅಂಡ್ ಯಂಗ್ ಕಂಪನಿ ಸ್ವಿಗ್ಗಿ ಸೇರಿದಂತೆ ಅನೇಕ ಕಂಪನಿಗಳಿಗೆ ಲೆಕ್ಕಪತ್ರ ನಿರ್ವಹಣೆ ಸೇವೆ ಒದಗಿಸುತ್ತಿದೆ. ಅದರಂತೆ ಕಂಪನಿಯ ಸಹಾಯಕ ಲೆಕ್ಕಧಿಕಾರಿ ಶ್ರೀಕಾಂತ್ ಅವರನ್ನ ಸ್ವಿಗ್ಗಿ ಕಂಪನಿಯ ಕಚೇರಿಯ ವಿದ್ಯುತ್ ಬಿಲ್ ಕಟ್ಟಲು ನೇಮಕ ಮಾಡಿಕೊಳ್ಳಲಾಗಿತ್ತು. ಆದ್ರೆ ಶ್ರೀಕಾಂತ್ ಪ್ರತಿ ತಿಂಗಳು ಸ್ವಿಗ್ಗಿ ಬ್ಯಾಂಕ್ ಖಾತೆಯಿಂದ 1 ಕೋಟಿ ರೂ. ನಿಂದ 2 ಕೋಟಿ ರೂ. ವಂಚಿಸಿದ್ದಾನೆ ಎಂದು ತಿಳಿಸಿದ್ದಾರೆ. ಬಳಿಕ ಈ ಬಗ್ಗೆ ಶ್ರೀಕಾಂತ್ ಅವರನ್ನು ವಿಚಾರಿಸಿದಾಗ, ಬಿಟಿಎನ್ ಕಂಪನಿಯು ಈ ಹಣವನ್ನು ಬೆಟ್ಟಿಂಗ್ ಆ್ಯಪ್‌ನಲ್ಲಿ ಠೇವಣಿ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ನಮ್ಮ ಕಂಪನಿಗೆ ನಂಬಿಕೆ ದ್ರೋಹ ಮಾಡಿ, 7 ಕೋಟಿ ರೂ. ವಂಚನೆ ಮಾಡಿರುವ ಶ್ರೀಕಾಂತ್ ಹಾಗೂ ಇತರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಗಾಂಧೀಜಿಯವರ ಆದರ್ಶ, ತತ್ವಗಳನ್ನು ಉಳಿಸಲು ಪ್ರಯತ್ನ

▸▸ ಬಿಜೆಪಿಯವರು ಗಾಂಧಿ ಹೆಜ್ಜೆ ಗುರುತುಗಳನ್ನು ಅಳಿಸುವ ಕೆಲಸದಲ್ಲಿ ನಿರತರಾಗಿದ್ದಾರೆ: ಡಿಸಿಎಂ

• ಉದಯವಾಹಿನಿ, ಬೆಂಗಳೂರು

ಬಿಜೆಪಿಯವರು ಗಾಂಧಿಯವರ ಹೆಜ್ಜೆ ಗುರುತುಗಳನ್ನು ಅಳಿಸುವ ಕೆಲಸ ಮಾಡುತ್ತಿದ್ದಾರೆ. ನಾವು ಅದನ್ನು ಉಳಿಸುವ ಕೆಲಸ ಮಾಡ ಬೇಕು. ಮಹಾತ್ಮ ಗಾಂಧಿ ಅವರ ತತ್ವಗಳನ್ನು ಒಪ್ಪದ ಬಿಜೆಪಿಯವರು ಅವರ ಪ್ರತಿಮೆ ಕೆಳಗೆ ಕುಳಿತು ಪ್ರತಿಭಟನೆ ಮಾಡುತ್ತಾರೆ, ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಉದಯವಾಹಿನಿ ಚಿತ್ರ

ನನ್ನ ಜೀವನವೇ ನನ್ನ ಸಂದೇಶ

ಹುತಾತ್ಮ ದಿನಾಚರಣೆ ಅಂಗವಾಗಿ ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಶಿವ ಕುಮಾರ್ ಅವರು ಮಾಧ್ಯಮಗೋಷ್ಠಿಯನ್ನು ಉದ್ದೇಶಿಸಿ ಗುರು ವಾರ ಮಾತನಾಡಿದರು. ಬಿಜೆಪಿಯವರು ಗಾಂಧಿ ಅವರ ತತ್ವಗಳನ್ನು ಬಾಯಲ್ಲಿ ಹೇಳದೇ ಇರಬಹುದು ಆದರೆ ಆಡಳಿತ ಪಕ್ಷವನ್ನು ವಿರೋಧಿಸಲು ಗಾಂಧಿ ಅವರ ಪ್ರತಿಮೆಯನ್ನೇ ಆಶ್ರಯಿಸಬೇಕು. ಧರಣಿ ಮಾಡಬೇಕು ಎಂದು ಹೇಳಿಕೊಟ್ಟವರೇ ಗಾಂಧಿ. ಗಾಂಧಿ ಅವರ ಮೌನ, ಧ್ಯಾನದ ಹಿಂದೆ ದೊಡ್ಡ ಸಂದೇಶ ವಿದೆ. ಸ್ವದೇಶಿ ಆಲೋಚನೆ ಹೇಳಿ ಕೊಟ್ಟವರು ಗಾಂಧಿ. ಪ್ರಧಾನಿ ಅವರು ಇದನ್ನೇ ಮೇಕ್ ಇನ್ ಇಂಡಿಯಾ ಎಂದು ಹೇಳುತ್ತಿದ್ದಾರೆ ಎಂದರು. ಗಾಂಧೀಜಿ ಅವರು ಕಾಂಗ್ರೇಸ್ ಪಕ್ಷದ ಅಧ್ಯಕ್ಷರಾಗಿದ್ದವರು. ಪಕ್ಷದ ಅಧ್ಯಕ್ಷರಾಗಿ ಸ್ವಾತಂತ್ರ್ಯ ತಂದುಕೊಟ್ಟರಲ್ಲ ಎನ್ನುವ ಅಸಹನೆ ಬಿಜೆಪಿಯವರಿಗಿದೆ. ಈ ದೇಶದ ಸ್ವಾತಂತ್ರ್ಯಕ್ಕೆ ಬಿಜೆಪಿಯವರ ಕೊಡುಗೆ ಏನಿಲ್ಲ. ಬಿಜೆಪಿ ಬಗ್ಗೆ ಮಾತನಾಡಿ ಸಮಯ ವ್ಯರ್ಥ ಮಾಡಿಕೊಳ್ಳುವುದು ಬೇಡ, ಎಂದು ತಿಳಿಸಿದರು.

ಗಾಂಧಿ ಅವರ ಸಂದೇಶಗಳನ್ನು ಪ್ರಚಾರ ಮಾಡಲು ರಾಜ್ಯ ದಾದ್ಯಂತ ವರ್ಷಪೂರ್ತಿ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಕಾರ್ಯ ಕ್ರಮವನ್ನು ಮಾಡಬೇಕು ಎನ್ನುವ ಆಲೋಚನೆ ಸರ್ಕಾರದ ಮುಂದಿದೆ. ಗಾಂಧಿ ಭಾರತ ಕಾರ್ಯ ಕ್ರಮ ಆಚರಣಾ ಸಮಿತಿ ನೀಡಿರುವ ವರದಿ ಅನುಷ್ಠಾನದ ಬಗ್ಗೆ ಮುಖ್ಯಮಂತ್ರಿಗಳು ಬಜೆಟ್ ವೇಳೆ ತಿಳಿಸಬಹುದು. ಇದರ ಬಗ್ಗೆ ಎಐಸಿಸಿ ಅಧ್ಯಕ್ಷರ ಜೊತೆ ಮಾತನಾಡಿದ್ದೇನೆ ಎಂದು ಹೇಳಿದರು. ಮಹಾತ್ಮ ಗಾಂಧಿ ಅವರ ಆದರ್ಶಗಳನ್ನು ನಾವುಗಳು ಮನೆಯಲ್ಲಿ, ಕುಟುಂಬದಲ್ಲಿ ಪಾಲಿಸಬೇಕಾಗಿದೆ. ನನ್ನ ಜೀವನವೇ ನನ್ನ ಸಂದೇಶ ಎನ್ನುವ ಗಾಂಧಿಜಿ ಅವರ ತತ್ವವನ್ನು ಇಡೀ ಪ್ರಪಂಚದ ಉನ್ನತ ನಾಯಕರೆಲ್ಲ ಒಪ್ಪಿಕೊಂಡಿದ್ದಾರೆ.

ಕಾಂಗ್ರೇಸ್ ಪಕ್ಷವೊಂದಕ್ಕೆ ಸ್ವಾತಂತ್ರ್ಯ ಸಿಕ್ಕಿಲ್ಲ, ನಮಗೆ ಮಾತ್ರ ಸಂವಿಧಾನ, ಪ್ರಜಾಪ್ರಭುತ್ವ ಬಂದಿಲ್ಲ. ಎಲ್ಲಾರಿಗೂ ಇದರ ಅನು ಕೂಲತೆ ಸಿಕ್ಕಿದೆ. ಎಲ್ಲಾರಿಗೂ ಸ್ವಾತಂತ್ರ್ಯ ಬಂದಿದೆ. ಎಲ್ಲಾರೂ ಸಂವಿ ಧಾನವನ್ನು ಬಳಸಿಕೊಂಡು ಅದರ ಫಲವನ್ನು ಕಾಣುತ್ತಿದ್ದಾರೆ, ಎಂದು ಡಿಸಿಎಂ ಅಭಿಪ್ರಾಯಪಟ್ಟರು. ಶಿವನ ಧ್ಯಾನ, ರಾಮನ ತ್ಯಾಗ, ಬುದ್ಧನ ಪ್ರೀತಿ, ಏಸು ವಿನ ಸಹನೆ, ಮಹಮದ್ ಪೈಗಂಬರ್ ಅವರ ಮಾನ ವೀಯತೆಯನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು ಎಂದರು.

ಇದರ ಪ್ರತಿರೂಪವಾಗಿ ಬದುಕಿದವರು ಮಹಾತ್ಮ ಗಾಂಧಿ. ಗಾಂಧೀಜಿ ಅವರು 77 ವರ್ಷದ ಹಿಂದೆ ಹುತಾತ್ಮರಾದರು. ಅವರ ಸಲುವಾಗಿ ಮೌನಾಚರಣೆ ಮಾಡುತ್ತಿದ್ದೇವೆ. ಬೆಳಗಾವಿಯಲ್ಲಿ ಎರಡು ದಿನಗಳ ಕಾಲ ನಡೆಸಿದ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಸಮಾವೇಶ ಭಾರತದ ಇತಿಹಾಸ ದಲ್ಲಿಯೇ ಮಹಾತ್ಮ ಗಾಂಧೀಜಿ ಅವರು ಆದರ್ಶ, ತತ್ವಗಳನ್ನು ಉಳಿಸಲು ಮೂಲಕ ಪ್ರಯತ್ನ ಮಾಡಿದ್ದೇವೆ. ಈ ದೇಶಕ್ಕೆ ಕಾಂಗ್ರೇಸ್ ಪಕ್ಷವೇ ಭವಿಷ್ಯ, ಎಂದು ಹೇಳಿದರು.

ಶಕ್ತಿ ಯಾರಿಗೂ ಇಲ್ಲ

ಮಹಾತ್ಮ ಗಾಂಧಿ ಅವರ ಉಸಿರು ನಮ್ಮ ಸುತ್ತಲೇ ಇದೇ ಎನ್ನುವ ಭಾವನೆ ನನ್ನದು. ಅವರ ಪ್ರತಿಯೊಂದು ನಡೆ ನುಡಿ, ಆದರ್ಶ, ಆಶಯಗಳನ್ನು ಉಳಿಸುವ ಕೆಲಸ ನಾವು ಮಾಡುತ್ತಿದ್ದೇವೆ. ನಾವೆಲ್ಲರೂ ಕಾಂಗ್ರೇಸ್ ಕಾರ್ಯ ಕರ್ತರು. ನಮಗೆ ಇರುವ ಶಕ್ತಿ ಯಾರಿಗೂ ಇಲ್ಲ. ತ್ರಿವರ್ಣ ಧ್ವಜವನ್ನು ಬಿಜೆಪಿಯವರು ಹಾಕಿಕೊಳ್ಳಲು ಸಾಧ್ಯವಿಲ್ಲ.

ನಿಮ್ಮನ್ನು ನೀವು ನಿಯಂತ್ರಣ ಮಾಡಿಕೊಳ್ಳಬೇಕಾದರೆ ಮೆದುಳನ್ನು ಉಪಯೋಗಿಸಿ, ಬೇರೆಯವರನ್ನು ನಿಯಂತ್ರಣ ಮಾಡಬೇಕಾದರೆ ಹೃದಯನ್ನು ಬಳಸು ಎಂದಿದ್ದಾರೆ. ಅಂದರೆ ಪ್ರೀತಿಯಿಂದ ಗೆಲ್ಲಬೇಕು ಎಂದು ಹೇಳಿದ್ದಾರೆ. ಜಗತ್ತನ್ನು ಬದಲಾವಣೆ ಮಾಡಬೇಕು ಎಂದು ಮೊದಲು ನಾವು ಬದಲಾವಣೆ ಆಗಬೇಕು

-ಡಿ.ಕೆ. ಶಿವಕುಮಾರ್, ಡಿಸಿಎಂ

ಪೊಲೀಸ್ ನೇರ ನೇಮಕಾತಿ: ಮೀಸಲಾತಿ ಶೇ.2ರಿಂದ 3ಕ್ಕೆ ಹೆಚ್ಚಳ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಕ್ರೀಡಾಪಟುಗಳಿಗೆ ಭರ್ಜರಿ ಸಿಹಿಸುದ್ದಿ ಎನ್ನುವಂತೆ ಪೊಲೀಸ್ ಇಲಾಖೆಯ ವಿವಿಧ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ ನೀಡಲಾಗುತ್ತಿದ್ದಂತ ಮೀಸಲಾತಿ ಪ್ರಮಾಣವನ್ನು ಶೇ.2ರಿಂದ 3ಕ್ಕೆ ಹೆಚ್ಚಳ ಮಾಡುವಂತ ನಿರ್ಧಾರವನ್ನು ಸಚಿವ ಸಂಪುಟ ಸಭೆಯಲ್ಲಿ ಅನುಮೋದಿಸಲಾಗಿದೆ.

ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದಂತ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪೊಲೀಸ್ ಇಲಾಖೆಯ ನೇರ ನೇಮಕಾತಿಯಲ್ಲಿ ಕಾನ್ಸಟೇಬಲ್‌ನಿಂದ ಡಿವೈಎಸ್ಪಿ ವರೆಗೆ ಪ್ರಶಂಸನೀಯ ಕ್ರೀಡಾಪಟುಗಳ ಮೀಸಲಾತಿ ಪ್ರಮಾಣವನ್ನು ಶೇ.2 ರಿಂದ ಶೇ.3ಕ್ಕೆ ಹೆಚ್ಚಿಸಲು ರಾಜ್ಯ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಈಗ ಈ ಮೀಸಲಾತಿ ಪ್ರಮಾಣ ಶೇ.2 ರಷ್ಟಿದ್ದು ಇದನ್ನು ಶೇ.3ಕ್ಕೆ ಹೆಚ್ಚಿಸಲು ಪ್ರಸ್ತಾಪಿಸಿದೆ. 2023ರಲ್ಲಿನ ಅನುಸೂಚಿಯ ಕ್ರಮ ಸಂಖ್ಯೆ (3) ರಲ್ಲಿ ಡಿ.ವೈ.ಎಸ್.ಪಿ ಹುದ್ದೆಯ ವಯೋಮಿತಿ ಕಾಲಂನಲ್ಲಿ ಎಸ್‌ಸಿ/ಎಸ್‌ಟಿ ಹಾಗೂ ಕೆಟಗರಿ-1 ರ ಅಭ್ಯರ್ಥಿಗಳ ಗರಿಷ್ಠ ವಯೋಮಿತಿಯನ್ನು 45 ವರ್ಷಗಳಿಗೆ ಹೆಚ್ಚಿಸಲು ನಿಯಮಗಳಿಗೆ ತಿದ್ದು ಪಡಿ ತರಲಾಗುತ್ತದೆ. ಕರ್ನಾಟಕ ರಾಜ್ಯ ಪೊಲೀಸ್ ಸೇವೆಗಳು (ಪೊಲೀಸ್ ಕಾನ್ಸ್ಟೇಬಲ್, ಪೊಲೀಸ್ ಸಬ್-ಇನ್ಸ್ಪೆಕ

ಮೈಸೂರು: 'ಮುದುಡಿದ' ಮುಡುಕುತೊರೆ ಕ್ಷೇತ್ರ!

ಭಕ್ತರ ಬೇಡಿಕೆಯಂತೆ ಬಹಳಷ್ಟು ಭಕ್ತರನ್ನು ದೇಗುಲ ಹೊಂದಿದ್ದು ಅವರ ಬಹುದಿನಗಳ ಬೇಡಿಕೆಯಂತೆ ಪುನರ್ ನಿರ್ಮಾಣಕ್ಕೆ ಚಾಲನೆ

• ಉದಯವಾಹಿನಿ, ಮೈಸೂರು

ಇತಿಹಾಸ ಪ್ರಸಿದ್ಧ ತಲಕಾಡಿನ ಪಂಚಲಿಂಗಗಳಲ್ಲಿ ಒಂದಾಗಿರುವ, ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ಮುಡುಕುತೊರೆ ಭ್ರಮರಾಂಬಾ ಸಮೇತ ಮಲ್ಲಿಕಾರ್ಜುನಸ್ವಾಮಿ ದೇವಸ್ಥಾನದ ಪುನರ್ ನಿರ್ಮಾಣ ಕಾರ್ಯ ಕುಂಟುತ್ತಾ ಸಾಗಿದ್ದು, ಭಕ್ತರ ಅಸಮಾಧಾನಕ್ಕೆ ಕಾರಣವಾಗಿದೆ. ದೇವರ ದರ್ಶನಕ್ಕೆಂದು ಬರುವವರು ಸರ್ಕಸ್' ಮಾಡಬೇಕಾದ ಅನಿವಾರ್ಯತೆ ಇದೆ!ತಿ.ನರಸೀಪುರ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳವರ ಜೊತೆಗೆ ಮೈಸೂರು ಜಿಲ್ಲೆ, ಚಾಮರಾಜನಗರ, ಮಂಡ್ಯ, ಹಾಸನ, ಬೆಂಗಳೂರು ಸೇರಿದಂತೆ ಹಲವು ಕಡೆಗಳಿಂದ ಅಪಾರ ಭಕ್ತರು ಮುಡುಕುತೊರೆಗೆ ಬರುತ್ತಾರೆ.

ಶಾಲೆಗಳವರು ವಿದ್ಯಾರ್ಥಿಗಳನ್ನು ಪಿಕ್ನಿಕ್‌ಗೆಂದು ಕರೆ ತರುವುದೂ ಉಂಟು. ಜಾತ್ರೆಗೆ ಸಜ್ಜಾಗುತ್ತಿರುವ ಈ ಸುಕ್ಷೇತ್ರದಲ್ಲಿ ಭಕ್ತರಿಗೆ ಮೂಲಸೌಕರ್ಯಗಳ ಕೊರತೆ ಎದ್ದು ಕಾಣುತ್ತಿದೆ. ಕಾಮಗಾರಿಯು ವಿಳಂಬವಾಗಿರುವುದರಿಂದ ಕ್ಷೇತ್ರ ಮುದುಡಿದೆ.ಅನುದಾನ ಲಭ್ಯತೆಯಲ್ಲಿ ಆದ ವಿಳಂಬ, ಸರಿಯಾಗಿ ಯೋಜನೆ ರೂಪಿಸದಿರುವುದು, ಮೇಲ್ಚಿಚಾರಣೆ ಕೊರತೆ ಕಾರಣಗಳಿಂದ 'ಕಾಣಿಸುವಂತಹ ಕೆಲಸ ವೇನೂ ಈವರೆಗೂ ಆಗಿಲ್ಲ' ಎಂಬುದನ್ನು ಅಧಿಕಾರಿಗಳೇ ಒಪ್ಪಿಕೊಳ್ಳುತ್ತಾರೆ! 'ಹಲವು ವಿಘ್ನಗಳು ಎದುರಾದರಿಂದ ವಿಳಂಬವಾಗಿತ್ತು. ಅದೆಲ್ಲವನ್ನೂ ಬಗೆಹರಿಸಲಾಗಿದ್ದು, ಕೆಲವು ತಿಂಗಳಿಂದ ಕಾಮಗಾರಿ ಚುರುಕು ಪಡೆದುಕೊಂಡಿದೆ' ಎನ್ನುತ್ತಾರೆ ಅವರು.

ಉದಯವಾಹಿನಿ ಚಿತ್ರ

ಭಕ್ತರಿಗೆ ಮೂಲಸೌಕರ್ಯಗಳ ಕೊರತೆ

ಭಕ್ತರ ಬೇಡಿಕೆಯಂತೆ ಬಹಳಷ್ಟು ಭಕ್ತರನ್ನು ಈ ದೇಗುಲ ಹೊಂದಿದ್ದುಅವರ ಬಹುದಿನಗಳ ಬೇಡಿಕೆಯಂತೆ ಪುನರ್‌ನಿರ್ಮಾಣಕ್ಕೆ ಚಾಲನೆ ದೊರೆತಿದೆ. ಚಾಲುಕ್ಯ ಶೈಲಿಯಲ್ಲಿ ನಿರ್ಮಾಣಕ್ಕೆ ಯೋಜಿಸಲಾಗಿದೆ. ಕಾಮಗಾರಿ ಕಾರಣದಿಂದ ದೇವರ ಮೂರ್ತಿಯನ್ನು ತಗಡು ಮೊದಲಾದವುಗಳಿಂದ ಮಾಡಿದ ಚಿಕ್ಕ 'ಗುಡಿ'ಯಲ್ಲಿಡಲಾಗಿದೆ. ಅಲ್ಲೇ ಭಕ್ತರು 'ದರ್ಶನ' ಪಡೆಯಲೆಂದು ಚಿಕ್ಕಸೇತುವೆಯನ್ನು ನಿರ್ಮಿಸಲಾಗಿದೆ.ಜಾತ್ರೆಯ ವೇಳೆ, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಾರೆ. ದರ್ಶನ ಪಡೆಯುವ ಸ್ಥಳದಲ್ಲಿ ಅವರನ್ನು ನಿರ್ವಹಿಸುವುದು ಹೇಗೆ ಎಂಬ ತಲೆನೋವು ಅಧಿಕಾರಿಗಳದ್ದು!2020ರ ನ.25ರಂದು ದೇವಸ್ಥಾನದ ಸಂಕೀರ್ಣದ ಪುನರ್ ನಿರ್ಮಾಣಕ್ಕೆ ಅಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶಂಕುಸ್ಥಾಪನೆ ನೆರವೇರಿಸಿದ್ದರು. 'ಕ್ಷೇತ್ರವನ್ನು ಅಭಿನವ ಶ್ರೀಶೈಲ ಎಂದೇ ಕರೆಯುತ್ತಾರೆ. ನನಗೆ ಇನ್ನೂ ಎರಡೂವರೆ ವರ್ಷ ಅಧಿಕಾರದ ಅವಧಿ ಇದೆ. ಅಷ್ಟರೊಳಗೆ ಕೆಲಸಗಳನ್ನು ಮುಗಿಸಬೇಕು' ಎಂದು ಸೂಚಿಸಿದ್ದರು.' ಅನುಷ್ಠಾನದ ಏಜೆನ್ಸಿಯ ಹೊಣೆಯನ್ನು ಲೋಕೋಪಯೋಗಿ ಇಲಾಖೆಯಿಂದ ಬಿಡಿಸಿ, ಸಮಿತಿಗೇ ಕೊಟ್ಟು ಕೆಲಸವನ್ನು ಮತ್ತಷ್ಟು ಚುರುಕುಗೊಳಿಸಲು ಅನುವು ಮಾಡಬೇಕು ಎಂದೂ ಸಮಿತಿ ಸರ್ಕಾರಕ್ಕೆ ಮನವಿ ಮಾಡಿದೆ' ಎಂದು ತಿಳಿದುಬಂದಿದೆ.'ಸಚಿವರು, ಸರ್ಕಾರ ಹೆಚ್ಚಿನ ಗಮನಹರಿಸಿ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಅನುಕೂಲ ಮಾಡಿಕೊಡಬೇಕು' ಎಂಬುದು ಭಕ್ತರ ಬೇಡಿಕೆ.-ಸುರೇಶ್ ಆಚಾರ್, ತಹಶೀಲ್ದಾರ್ ತಿ.ನರಸೀಪುರಈ ವರ್ಷದಿಂದ ಕೆಲಸ ಚುರುಕು ಪಡೆದುಕೊಂಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರು ಪ್ರವಾಸೋದ್ಯಮ ಇಲಾಖೆಯಿಂದ ರೂ. 2 ಕೋಟಿ ಕೊಡಿಸಿದ್ದಾರೆ. ಈಗ ಅನುದಾನದ ಕೊರತೆ ಇಲ್ಲ-ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾಧಿಕಾರಿಜಾತ್ರೆಗೆ ಅಪಾರ ಸಂಖ್ಯೆಯ ಭಕ್ತರು ಬರುತ್ತಾರೆ. ಅವರಿಗೆ ತೊಂದರೆ ಆಗದಂತೆ ನೋಡಿಕೊಳ್ಳಲು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ 'ಯೋಜನೆಯ ಅನುಷ್ಠಾನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಮಹದೇವಪ್ಪ ಬಹಳ ಸಹಕಾರ ಕೊಡುತ್ತಿದ್ದಾರೆ. ಸಮಿತಿಯನ್ನು ಪುನರ್‌ರಚಿಸಿ ಅನುಕೂಲ ಮಾಡಿಕೊಟ್ಟಿದ್ದಾರೆ' ಎಂದರು.

> ಭಕ್ತರಿಂದ ದೇಣಿಗೆ ರೂಪದಲ್ಲಿ ಸಂಗ್ರಹವಾದ ಹಣ ಜಿಲ್ಲಾಧಿಕಾರಿ ಖಾತೆಯಲ್ಲಿದೆ. ಬದಲಾದ ವಿದ್ಯಮಾನದಲ್ಲಿ ಪುನರ್‌ನಿರ್ಮಾಣವನ್ನು ನಾವೇ ಮಾಡಿ ಸರ್ಕಾರಕ್ಕೆ ದೇಗುಲವನ್ನು ವಾಪಸ್ ಕೊಡುತ್ತೇವೆ ಸಮಿತಿ ಹೇಳಿದೆ. ಅದಕ್ಕೆ ಸರ್ಕಾರದಿಂದ ತಾತ್ವಿಕ ಒಪ್ಪಿಗೆಯೂ ದೊರೆತಿದೆ.

> ಇತ್ತೀಚೆಗೆ ಚುರುಕು ಪಡೆದಿದೆ''ದೇವಾಲಯದ ಜೀರ್ಣೋದ್ಧಾರ ಕಾರ್ಯ ಈಗ ಚುರುಕು ಪಡೆದುಕೊಂಡಿದೆ. 40 ಮಂದಿ ನಿತ್ಯವೂ ಕೆಲಸ ಮಾಡುತ್ತಿದ್ದಾರೆ. ಎರಡೂ ದೇವಸ್ಥಾನಗಳನ್ನು ಅಕ್ಟೋಬರ್ ಅಥವಾ ನವೆಂಬರ್ ವೇಳೆಗೆ ಪೂರ್ಣಗೊಳಿಸಿ ಉದ್ಘಾಟಿಸಲು ಯೋಜಿಸಲಾಗಿದೆ. ಚಂದ್ರಶಾಲೆಯ ನಿರ್ಮಾಣಕ್ಕೆ ನಂತರ ಒಂದು ವರ್ಷ ಬೇಕಾಗುತ್ತದೆ' ಎಂದು ದೇವಾಲಯ ಅಭಿವೃದ್ಧಿ ಸಮಿತಿಯ ಪ್ರಧಾನ ಕಾರ್ಯದರ್ಶಿ ನಂದೀಶ್ ಹಂಚೆ ತಿಳಿಸಿದರು.

ಉದ್ಯೋಗ ಸೃಷ್ಟಿಸುವಲ್ಲಿ ಸರ್ಕಾರ ವಿಫಲ: ದಲಿತ ಸಂಘರ್ಷ ಸಮಿತಿ ಖಂಡನೆ

• ಉದಯವಾಹಿನಿ, ಮಂಡ್ಯ

ಭಾರತ ಸಂವಿಧಾನ ವಿರೋಧಿಯಾದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ 'ಮನುಸ್ಮೃತಿ' ಪ್ರೇರಿತ ನೀತಿಯನ್ನು ಖಂಡಿಸಿ, ವಿದ್ಯೆ, ಆರೋಗ್ಯ, ಅಧಿಕಾರ, ಸಂಪತ್ತು, ಭೂಮಿಯನ್ನು ಸರ್ವರಿಗೂ ಸಮಾನವಾಗಿ ಹಂಚಬೇಕು ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ಸದಸ್ಯರು ಆಗ್ರಹಿಸಿದರು.

ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ 'ಭಾರತ ಸಂವಿಧಾನ ಸಂಭ್ರಮ-75' ಅಂಗವಾಗಿ ಗುರುವಾರ ಅಂಬೇಡ್ಕರ್ ಪುತ್ತಳಿಗೆ ಪುಷ್ಪಾರ್ಚನೆ ನಡೆಸಿ ನಂತರ ಬಹಿರಂಗ ಸಭೆ ನಡೆಸಲಾಯಿತು.ಸಮಿತಿಯ ಮೈಸೂರು ವಿಭಾಗೀಯ ಸಂಚಾಲಕ ಅನಿಲ್‌ಕುಮಾರ್ ಮಾತನಾಡಿ, 'ಸರ್ಕಾರಗಳು ಉದ್ಯೋಗ ಸೃಷ್ಟಿಸುವಲ್ಲಿ ವಿಫಲವಾಗಿವೆ. ಸಂವಿಧಾನವು ಯುವಕರಿಗೆ ಉದ್ಯೋಗ ನೀಡಬೇಕೆಂದು ಹೇಳುತ್ತದೆ. ಆದರೆ ಒಂದೇ ಒಂದು ಕಾನೂನನ್ನು ಸಂವಿಧಾನದ ಆಶಯದಂತೆ ಜಾರಿಗೆ ತಂದಿಲ್ಲ' ಎಂದು ಆರೋಪಿಸಿದರು.ನೆಹರೂ ಅವರ ಹುಟ್ಟುಹಬ್ಬದಂದು ಮಕ್ಕಳ ದಿನಾಚರಣೆ ಎಂಬುದಾಗಿ ಆಚರಿಸುತ್ತಾರೆ. ಆದರೆ, ನಮಗೆ ಯಾರಿಗೂ ಮಕ್ಕಳು ಕಂಡರೆ ಇಷ್ಟವಿಲ್ಲವೇ, ಬೇರೆ ದಿನವನ್ನು ಮಕ್ಕಳ ದಿನಾಚರಣೆಯನ್ನಾಗಿ ಏಕ ಆಚರಿಸಲಿಲ್ಲ ಎಂದು ಪ್ರಶ್ನಿಸಿದರು. ಬಹಿರಂಗ ಸಭೆಗೂ ಮುನ್ನ ನಗರದ ಜೆ.ಸಿ. ವೃತ್ತದ ಬಳಿ ಜಮಾಯಿಸಿದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ)ಯ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿವರೆಗೆ ಮೆರವಣಿಗೆ ನಡೆಸಿದರು. ಕಾರ್ಯಕ್ರಮದಲ್ಲಿ ವಿಚಾರವಾದಿ ಕೃಷ್ಣಮೂರ್ತಿ, ಸಮಿತಿಯ ಜಿಲ್ಲಾ ಘಟಕದ ಅಧ್ಯಕ್ಷ ಬಿ.ಆನಂದ್, ಮಹಿಳಾ ಜಿಲ್ಲಾ ಘಟಕದ ಅಧ್ಯಕ್ಷೆ ಸುಶ್ಮಿತಾ ಆನಂದ್ ಭಾಗವಹಿಸಿದ್ದರು.

ಉದಯವಾಹಿನಿ ಚಿತ್ರ

> ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ವೆಂಕಟಗಿರಿಯಯ್ಯ ಮಾತನಾಡಿ, 'ಆಡಳಿತದಲ್ಲಿರುವ ಬಿಜೆಪಿ ಸಂಘ ಪರಿವಾರ ಸಂವಿಧಾನ ಬದಲಿಸುವ ಮಾತನಾಡಿ, ದೇಶ ದ್ರೋಹಿ ನೀತಿ ಅನುಸರಿಸುತ್ತಿದೆ ವಿರೋಧ ಪಕ್ಷವಾದ ಕಾಂಗ್ರೇಸ್ ಪಕ್ಷ ತನ್ನ ಅಧಿಕಾರಾವಧಿಯಲ್ಲಿ ಭಾರತ ಸಂವಿಧಾನವನ್ನೇ ಮೂಲೆಯಲ್ಲಿಟ್ಟು 95 ಬಾರಿ ತಿದ್ದುಪಡಿ ಮಾಡಿ ಸಂವಿಧಾನ ವಿರೋಧಿಯಾಗಿ ನಡೆದುಕೊಂಡು, ಈಗ ಸಂವಿಧಾನ ರಕ್ಷಣೆಯ ನಾಟಕ ಆಡುತ್ತಿರುವ ಕಾಂಗ್ರೇಸ್ ಬಣ್ಣ ಬಯಲಾಗಿದೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಲಗಿದ್ದವರ ಮೇಲೆ ಗುಂಪು ಓಡಿದ್ದೇ ಸಾವಿಗೆ ಕಾರಣ

• ಉದಯವಾಹಿನಿ, ಶ್ರೀರಂಗಪಟ್ಟಣ

ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮದ ಟೆಂಟ್‌ಗಳಲ್ಲಿ ಮಲಗಿದ್ದವರ ಮೇಲೆ ಬುಧವಾರ ನಸುಕಿನಲ್ಲಿ ಗುಂಪೊಂದು ದಿಢೀರ್ ಓಡಿದ್ದರಿಂದ ಸಾವು, ನೋವು ಸಂಭವಿಸಿದವು' ಎಂದು ಘಟನೆಯ ಪ್ರತ್ಯಕ್ಷದರ್ಶಿ, ಪಟ್ಟಣದ ಜ್ಯೋತಿಷಿ ವಿ. ಭಾನುಪ್ರಕಾಶ ಶರ್ಮಾ ಹೇಳಿದರು.

ಮೌನಿ ಅಮಾವಾಸ್ಯೆ ಪ್ರಯುಕ್ತ ಪುಣ್ಯ ಸ್ನಾನ ಮಾಡಲು ಬುಧವಾರ ತ್ರಿವೇಣಿ ಸಂಗಮದಲ್ಲೇ ಇದ್ದ ಶರ್ಮಾ, ತಾವು ಕಂಡ ದೃಶ್ಯವನ್ನು ವಿವರಿಸಿದರು.

ಸಹಸ್ರಾರು ಮಂದಿಯ ಗುಂಪು ತ್ರಿವೇಣಿ ಸಂಗಮದತ್ತ ಏಕಾಏಕಿ ದೌಡಾಯಿಸಿ ಬಂತು. ಆದರ ಬೆನ್ನಲ್ಲೇ ಜನರ ಚೀರಾಟ, ನರಳಾಟಗಳು ಕೇಳಿ ಬಂದವು. ಕೆಲವು ನಿಮಿಷಗಳ ಬಳಿಕ ಅಂಬ್ಯುಲೆನ್ಸ್‌ಗಳು ಸೈರನ್ ಮೊಳಗಿಸುತ್ತಾ ಬಂದವು. ಓಡುತ್ತಿದ್ದವರನ್ನು ರಕ್ಷಣಾ ಸಿಬ್ಬಂದಿ ತಡೆಯುವ ವಿಫಲ ಯತ್ನ ನಡೆಸಿದರು. ಬಿದ್ದಿದ್ದವರನ್ನು ಆಂಬ್ಯುಲೆನ್ಸ್‌ಗೆ ಹಾಕಿ ಸಾಗಿಸಿದರು' ಎಂದು ಸ್ಮರಿಸಿಕೊಂಡರು. 'ಶ್ರೀರಂಗಪಟ್ಟಣ, ಮೈಸೂರು ಇತರ ಊರುಗಳ ಏಳೆಂಟು ಮಂದಿ ಇದ್ದ ನಮ್ಮ ತಂಡ ಪುಣ್ಯ ಸ್ನಾನಕ್ಕಾಗಿ ಪ್ರಯಾಗ್‌ರಾಜ್‌ನ ತ್ರಿವೇಣಿ ಸಂಗಮಕ್ಕೆ ಬಂದಿದ್ದು, ಎಲ್ಲರೂ ಸುರಕ್ಷಿತವಾಗಿದ್ದೇವೆ. ನಾವಿದ್ದ ಬ್ಯಾರಕ್‌ಗೆ ಕೂಗಳತೆ ದೂರದ ಮತ್ತೊಂದು ಬ್ಯಾರಕ್‌ನಲ್ಲಿ ಅವಘಡ ಘಟಿಸಿದೆ. ಘಟನೆ ಬಳಿಕ ಬಂದೋಬಸ್ತ್ ಹೆಚ್ಚಿಸಲಾಗಿದೆ. ಗುರುವಾರ ಯಾವುದೇ ಸಮಸ್ಯೆ ಕಂಡು ಬಂದಿಲ್ಲ' ಎಂದು ಹೇಳಿದರು.

ಉದಯವಾಹಿನಿ ಚಿತ್ರ

ಶಿಕ್ಷಕರಿಗೆ ರೂ.1 ಲಕ್ಷ ಉಡುಗೊರೆ: ಶಾಸಕ ಸುಬ್ಬಾರೆಡ್ಡಿ ಹೆಜ್ಜೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ರಾಜ್ಯದ ಗಡಿಯಲ್ಲಿರುವ ಮತ್ತು ಅತಿ ಹಿಂದುಳಿದ ಕ್ಷೇತ್ರ ಎನಿಸಿರುವ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರವು ಶೈಕ್ಷಣಿಕ ಸಾಧನೆಯಲ್ಲಿಯೂ ಹಿಂದಿದೆ.ಇಂತಹ ಕಡೆ ಎಸ್‌ಎಸ್‌ಎಲ್‌ಸಿ ಫಲಿತಾಂಶವನ್ನು ಹೆಚ್ಚಿಸಿದರೆ ಶಿಕ್ಷಕರಿಗೆ ಉಡುಗೊರೆ ನೀಡುವುದಾಗಿ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಪ್ರಕಟಿಸಿದ್ದಾರೆ. ಬಾಗೇಪಲ್ಲಿ ಚೇಳೂರು ಮತ್ತು ಗುಡಿಬಂಡೆ ತಾಲ್ಲೂಕು ಒಳಗೊಂಡು ಈ ವಿಧಾನಸಭಾ ಕ್ಷೇತ್ರವಿದೆ. ಈ ಮೂರು ತಾಲ್ಲೂಕುಗಳ ಸರ್ಕಾರಿ ಪ್ರೌಢಶಾಲೆಗಳು ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ 100 ಫಲಿತಾಂಶ ಪಡೆದರೆ ಶಾಲೆಯ ಶಿಕ್ಷಕರಿಗೆ ರೂ. 1 ಲಕ್ಷ ಉಡುಗೊರೆ ನೀಡಲು ಸುಬ್ಬಾರೆಡ್ಡಿ ಮುಂದಾಗಿದ್ದಾರೆ.ವಸತಿಯುತ ಪ್ರೌಢಶಾಲೆಗಳನ್ನು ಹೊರತುಪಡಿಸಿ ಬಾಗೇಪಲ್ಲಿ ತಾಲ್ಲೂಕಿನಲ್ಲಿ 15, ಚೇಳೂರು ತಾಲ್ಲೂಕಿನಲ್ಲಿ 6 ಮತ್ತು ಗುಡಿಬಂಡೆ ತಾಲ್ಲೂಕಿನಲ್ಲಿ 12 ಸರ್ಕಾರಿ ಪ್ರೌಢಶಾಲೆಗಳು ಇವೆ. 2023-24ನೇ ಸಾಲಿನಲ್ಲಿ ಬಾಗೇಪಲ್ಲಿ ತಾಲ್ಲೂಕಿನ ಸರ್ಕಾರಿ ಪ್ರೌಢಶಾಲೆಗಳು ಶೇ 61.33 ಹಾಗೂ ಗುಡಿಬಂಡೆ ತಾಲ್ಲೂಕಿನಲ್ಲಿ ಶೇ 59.24 ರಷ್ಟು ಫಲಿತಾಂಶ ಪಡೆದಿವೆ. ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳಕ್ಕೆ ಗುಡಿಬಂಡೆ ತಾಲ್ಲೂಕಿಗೆ 'ಸ್ಫೂರ್ತಿ' ಮತ್ತು ಬಾಗೇಪಲ್ಲಿ ಮತ್ತು ಚೇಳೂರು ತಾಲ್ಲೂಕಿಗೆ 'ಪ್ರೇರಣಾ' ಹೆಸರಿನಲ್ಲಿ ತಾಲ್ಲೂಕು ಶಿಕ್ಷಣ ಇಲಾಖೆ ಮತ್ತು ಶಾಸಕರ ನೇತೃತ್ವದಲ್ಲಿ ಚಟುವಟಿಕೆಗಳು ನಡೆಯುತ್ತಿವೆ. ಪೋಷಕರು, ಶಿಕ್ಷಕರು ಹಾಗೂ ಇಲಾಖೆಯ ಅಧಿಕಾರಿಗಳ ಜೊತೆ ಶಾಸಕರು ಸಭೆಗಳನ್ನು ನಡೆಸಿದ್ದಾರೆ. ಪ್ರತಿ ಸರ್ಕಾರಿ ಪ್ರೌಢ ಶಾಲೆಗಳಿಗೂ ಭೇಟಿ ನೀಡಿದ್ದು ಈ ವೇಳೆ ಲಕ್ಷ ಉಡುಗೊರೆಯ ಬಗ್ಗೆ ಶಾಸಕರು ಒತ್ತಿ ಹೇಳಿದ್ದಾರೆ. ತಾಲ್ಲೂಕಿನ ಸರ್ಕಾರಿ ಪ್ರೌಢ ಶಾಲೆಗಳ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು.ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡು ಈ 'ಪ್ರೇರಣಾ' ಮತ್ತು 'ಸ್ಫೂರ್ತಿ' ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತಿದೆ.

ಈ ಕಾರ್ಯಕ್ರಮಗಳ ಮೂಲಕ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳನ್ನು ಸಹ ಗುರುತಿಸಲಾಗಿದೆ. ಈ ವಿದ್ಯಾರ್ಥಿಗಳನ್ನು ಪ್ರಮುಖವಾಗಿ ದೃಷ್ಟಿಯಲ್ಲಿ ಇಟ್ಟುಕೊಂಡು ಶಿಕ್ಷಕರು ಬೋಧನೆ ಮಾಡುತ್ತಿದ್ದಾರೆ. ವಿಶೇಷ ತರಗತಿಗಳನ್ನು ತೆಗೆದು ಕೊಳ್ಳುತ್ತಿದ್ದಾರೆ. ಅಲ್ಲದೆ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಅನುಕೂಲವಾಗಲಿ ಎಂದು ಕೈಪಿಡಿಗಳನ್ನು ಸಹ ರೂಪಿಸಲಾಗಿದೆ.

ಪ್ರತಿ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿ ಅಲ್ಲಿನ ಕಲಿಕೆಯ ಗುಣಮಟ್ಟವನ್ನು ಸಹ ಶಾಸಕರು ಪರಿಶೀಲಿಸುತ್ತಿದ್ದಾರೆ.'ಗರಿಷ್ಠ ಅಂಕ ಪಡೆಯುವ ವಿದ್ಯಾರ್ಥಿಗೂ ಬಹುಮಾನ' 'ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳವನ್ನು ಶಿಕ್ಷಕರು ಸವಾಲಾಗಿ ಸ್ವೀಕರಿಸಬೇಕು. ಅವರಿಗೆ ಸ್ಫೂರ್ತಿ ಬರಲಿ ಎನ್ನುವ ಕಾರಣಕ್ಕೆ ರೂ. 1 ಲಕ್ಷ ಉಡುಗೊರೆ ನೀಡಲಾಗುವುದು' ಎಂದು ಶಾಸಕ ಎಸ್.ಎನ್.ಸುಬ್ಬಾರೆಡ್ಡಿ, ತಿಳಿಸಿದರು.

ಅಧಿಕಾರಿಗಳ ಜೊತೆ ಶಾಸಕರು ಸಭೆ

> 'ತಾಲ್ಲೂಕಿನಲ್ಲಿ ಗರಿಷ್ಠ ಅಂಕ ಪಡೆಯುವ ವಿದ್ಯಾರ್ಥಿಗೂ ? 1 ಲಕ್ಷ ಬಹುಮಾನ ನೀಡಲಾಗುವುದು. ಈಗಾಗಲೇ ಮೂರು ತಾಲ್ಲೂಕಿನ ಎಲ್ಲ ಪ್ರೌಢಶಾಲೆಗೆ ಭೇಟಿ ನೀಡಿದ್ದೇನೆ. ಸರ್ಕಾರಿ ಪ್ರೌಢಶಾಲೆಗಳಲ್ಲಿ 2600 ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಇದ್ದಾರೆ. ಈ ಪೈಕಿ 800 ಮಕ್ಕಳು ಅನುತ್ತೀರ್ಣರಾಗುವ ಸಾಧ್ಯತೆ ಇದೆ ಎಂದು ನಾವು ಮಾಡಿರುವ ಪರೀಕ್ಷೆಯಲ್ಲಿ ಕಂಡು ಬಂದಿದೆ. ಆ ಮಕ್ಕಳನ್ನು ಕೇಂದ್ರೀಕರಿಸಿ ವಿಶೇಷ ತರಗತಿ ನಡೆಸಲಾಗುತ್ತಿದೆ' ಎಂದು ಹೇಳಿದರು.

ಪಾದಚಾರಿ ರಸ್ತೆ, ಮೇಲ್ಸೇತುವೆಗೆ ಆಗ್ರಹ

• ಉದಯವಾಹಿನಿ, ಮಳವಳ್ಳಿ

ರಾಷ್ಟ್ರೀಯ ಹೆದ್ದಾರಿ-209ರ ತಾಲ್ಲೂಕಿನ ಮುತ್ತತ್ತಿಗೆ ಸಾಗುವ ಮಾರ್ಗದ ಗೊಲ್ಲರಹಳ್ಳಿ ಹಾಗೂ ಬ್ಯಾಡರಹಳ್ಳಿ ಸಮೀಪ ಪಾದಚಾರಿ ರಸ್ತೆ ಅಥವಾ ಮೇಲ್ಸೇತುವೆ ನಿರ್ಮಿಸಲು ಆಗ್ರಹಿಸಿ ಇಲ್ಲಿನ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಉಪ ವಿಭಾಗದ ಕಚೇರಿ ಮುಂದೆ ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ನೇತೃತ್ವದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.ಕಚೇರಿಯ ಮುಂದೆ ಜಮಾಯಿಸಿದ ನೂರಾರು ಮಂದಿ ಕೂಡಲೇ ಪಾದಚಾರಿ ರಸ್ತೆ ಅಥವಾ ಮೇಲ್ಸೇತುವೆ ನಿರ್ಮಿಸಿ ಆಗುತ್ತಿರುವ ಅಪಘಾತಗಳನ್ನು ತಪ್ಪಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಂ.ಪುಟ್ಟಮಾಧು ಮಾತನಾಡಿ, ಬೆಂಗಳೂರು, ಕನಕಪುರ, ಹಲಗೂರು, ಮಳವಳ್ಳಿ ಮೂಲಕ ಕೊಳ್ಳೇಗಾಲ, ಕೇರಳ, ತಮಿಳುನಾಡು ಸಂಪರ್ಕಿಸಲು ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ವೇಳೆ ಎಚ್ಚರಿಕೆ ವಹಿಸಬೇಕಿತ್ತು.

ಪ್ರಾಧಿಕಾರದ ಅಧಿಕಾರಿಗಳ ನಿರ್ಲಕ್ಷದಿಂದ ಹಲಗೂರು ಮುತ್ತತ್ತಿ ರಸ್ತೆ, ಗೊಲ್ಲರಹಳ್ಳಿ ಹತ್ತಿರದ ಹೆದ್ದಾರಿಯಲ್ಲಿ 125ಕ್ಕೂ ಹೆಚ್ಚು ಅಪಘಾತಗಳು ಸಂಭವಿಸಿ 18ಕ್ಕೂ ಹೆಚ್ಚು ಮಂದಿ ಮೃತಪಟ್ಟಿದ್ದಾರೆ ಎಂದರು.

ಹಲಗೂರು ಸಮೀಪದ ಗೊಲ್ಲರಹಳ್ಳಿ ಬ್ಯಾಡರ

ಅಂತರಾಳದಿಂದ... EDITORIAL

ಐಐಟಿ-ಎಂ ನಿರ್ದೇಶಕರ ಅಭಿಪ್ರಾಯಕ್ಕೆ ವೈಜ್ಞಾನಿಕ ಆಧಾರ ಎಲ್ಲಿದೆ?

ಉದಯವಾಹಿನಿ ಚಿತ್ರ

ಐಐಟಿ-ಮದ್ರಾಸ್ ನಿರ್ದೇಶಕ ವಿ. ಕಾಮಕೋಟಿ ಅವರಿಗೆ ವೈಯಕ್ತಿಕ ನೆಲೆಯಲ್ಲಿ ಯಾವುದೇ ವಿಷಯದ ಬಗ್ಗೆ ಅಭಿಪ್ರಾಯ ಹೊಂದುವ ಹಕ್ಕು ಇದೆ. ಆದರೆ, ಅವರು ದೇಶದ ಮುಂಚೂಣಿ ತಾಂತ್ರಿಕ ಶಿಕ್ಷಣ ಸಂಸ್ಥೆಯೊಂದರ ಮುಖ್ಯಸ್ಥರೂ ಹೌದು. ಹೀಗಾಗಿ, ಅವರಿಗೆ ತಮ್ಮದೇ ಆದ ಕೆಲವು ಜವಾಬ್ದಾರಿಗಳು ಇವೆ. ಈ ಕಾರಣದಿಂದಾಗಿ ಅವರು ಯಾವುದೇ ವಿಷಯದ ಬಗ್ಗೆ ಅಭಿಪ್ರಾಯ ಮಂಡಿಸುವಾಗ ತಮ್ಮ ಮೇಲಿರುವ ಜವಾಬ್ದಾರಿಗಳ ಬಗ್ಗೆ ತುಸು ಆಲೋಚಿಸಬೇಕಾಗುತ್ತದೆ. ಗೋಮೂತ್ರವು ಜ್ವರ ಹಾಗೂ ಜೀರ್ಣಾಂಗ ವ್ಯವಸ್ಥೆಗೆ ಸಂಬಂಧಿಸಿದ ಒಂದು ಬಗೆಯ ಕಾಯಿಲೆಯನ್ನು ಗುಣಪಡಿಸಬಲ್ಲದು ಎಂದು ಕಾಮಕೋಟಿ ಅವರು ಈಚೆಗೆ ಹೇಳಿದ್ದರು. ಜನವರಿ 15ರಂದು ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಗೋಮೂತ್ರದಲ್ಲಿ ಬ್ಯಾಕ್ಟಿರಿಯಾ ಮತ್ತು ಶಿಲೀಂಧ್ರ ವಿರೋಧಿ ಗುಣಗಳು ಇವೆ, ಗೋಮೂತ್ರವು ಜೀರ್ಣಕ್ರಿಯೆಗೆ ಪೂರಕವಾಗುವ ಅಂಶಗಳನ್ನು ಹೊಂದಿದೆ ಎಂದು ಹೇಳಿದರು. ತೀವ್ರ ಜ್ವರದಿಂದ ಬಳಲುತ್ತಿದ್ದ ಸನ್ಯಾಸಿಯೊಬ್ಬರು ಗೋಮೂತ್ರ ಕುಡಿದ ನಂತರ ಜ್ವರದಿಂದ ಗುಣ ಹೊಂದಿದರು ಎಂಬ ಕಥೆಯೊಂದನ್ನು ಕೂಡ ಅವರು ಹೇಳಿದರು. ತಮ್ಮ ಅಭಿಪ್ರಾಯಕ್ಕೆ ಪೂರಕವಾಗಿ ವೈಜ್ಞಾನಿಕ ಸಾಕ್ಷ್ಯಗಳು ಇವೆ ಎಂದರು. ಗೋಮೂತ್ರ, ಸಗಣಿ, ಮೊಸರು, ತುಪ್ಪ ಮತ್ತು ಹಾಲಿನಿಂದ ಸಿದ್ಧಪಡಿಸುವ ಪಂಚಗವ್ಯವನ್ನು ತಾವು ಪ್ರತಿದಿನವೂ ಸೇವಿಸುವುದಾಗಿ ತಿಳಿಸಿದರು. ಆದರೆ ಕಾಮಕೋಟಿ ಅವರ ವಾದವನ್ನು ವಿಜ್ಞಾನಿಗಳು ಹಾಗೂ ವೈದ್ಯರು ಒಪ್ಪುತ್ತಿಲ್ಲ. ಗೋಮೂತ್ರದಲ್ಲಿ ಔಷಧೀಯ ಗುಣಗಳು ಇವೆ ಎಂಬ ಮಾತು ಬಹಳ ಹಳೆಯದು. ಈ ಮಾತಿಗೆ ವಿಜ್ಞಾನ ಲೋಕವು ಮಹತ್ವ ನೀಡುತ್ತಿಲ್ಲ.

ಗೋಮೂತ್ರದಲ್ಲಿ 14 ಬಗೆಯ ಬ್ಯಾಕ್ಟಿರಿಯಾಗಳು ಇರುತ್ತವೆ, ಇವು ಮನುಷ್ಯರಲ್ಲಿ ಸೋಂಕಿಗೆ ಕಾರಣವಾಗಬಹುದು ಎಂದು ಭಾರತೀಯ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆ ಹೇಳಿದೆ. 'ಸಾಮಾಜಿಕ ನ್ಯಾಯಕ್ಕಾಗಿ ವೈದ್ಯರ ಸಂಘಟನೆ'ಯು ಕಾಮಕೋಟಿ ಅವರ ಮಾತುಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ. ಗೋಮೂತ್ರವು ಯಾವ ಕಾಯಿಲೆಯನ್ನೂ ಗುಣಪಡಿಸುವುದಿಲ್ಲ ಎಂದು ಅದು ಹೇಳಿದೆ. ಕಾಮಕೋಟಿ ಅವರು ಹೇಳಿರುವ ಮಾತುಗಳು ಸಮಸ್ಯೆ ಸೃಷ್ಟಿಸ ಬಹುದು, ಜ್ವರ ಬಂದವರು ಗೋಮೂತ್ರ ಕುಡಿದರೆ ಸಾವು ಸಂಭವಿಸುವ ಸಾಧ್ಯತೆಯೂ ಇದೆ ಎಂದು ಅದು ಎಚ್ಚರಿಸಿದೆ. ಪಂಚಗವ್ಯ ಸೇವನೆಯಿಂದಲೂ ಕೆಟ್ಟ ಪರಿಣಾಮಗಳು ಉಂಟಾಗಬಹುದು ಎಂದು ವೈದ್ಯರ ಸಂಘಟನೆಯು ಹೇಳಿದೆ. ದೇಶಿ ಗೋವಿನ ತಳಿಗಳ ವೈಶಿಷ್ಟ್ಯಗಳ ಬಗ್ಗೆ ಸಂಶೋಧನೆ ನಡೆಸಲು ಮುಂದಾದ ಸರ್ಕಾರದ ಕ್ರಮವನ್ನು ವಿಜ್ಞಾನಿಗಳು ಕೆಲವು ವರ್ಷಗಳ ಹಿಂದೆ ಟೀಕಿಸಿದ್ದರು, ಗೋ ಉತ್ಪನ್ನಗಳಲ್ಲಿ ಔಷಧೀಯ ಮಹತ್ವ ಇದೆ ಎಂಬ ಮಾತುಗಳಿಗೆ ವೈಜ್ಞಾನಿಕ ಆಧಾರ ಇಲ್ಲ ಎಂದು ಹೇಳಿದ್ದರು. ಅಲ್ಲದೆ, ಇಂತಹ ಸಂಶೋಧನೆಗಳು ಜನರ ದುಡ್ಡನ್ನು ಹಾಳುಮಾಡುತ್ತವೆ ಎಂದು ಅವರು ಹೇಳಿದ್ದರು. ಕಾಮಕೋಟಿ ಅವರ ಮಾತುಗಳನ್ನು ಕೆಲವು ರಾಜಕೀಯ ಪಕ್ಷಗಳು ಟೀಕಿಸಿವೆ, ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಅಥವಾ ಅವರನ್ನು ಆ ಸ್ಥಾನದಿಂದ ವಜಾಗೊಳಿಸಬೇಕು ಎಂದು ಆಗ್ರಹಿಸಿವೆ.

ಆದರೆ ಕೆಲವು ವರ್ಗಗಳು ಕಾಮಕೋಟಿ ಅವರ ಮಾತಿಗೆ ಬೆಂಬಲ ವ್ಯಕ್ತಪಡಿಸಿವೆ. ಕೆಲವು ಪ್ರಮುಖ ವ್ಯಕ್ತಿಗಳು ಗೋಮೂತ್ರದ ವಿಚಾರವಾಗಿ ಇಂಥದ್ದೇ ಹೇಳಿಕೆಗಳನ್ನು ನೀಡಿದ್ದಾರೆ. ಗೋಮೂತ್ರ ಬಳಸುವಂತೆ ಶಿಫಾರಸು ಮಾಡಿದ್ದಾರೆ. ಆದರೆ, ಗೋಮೂತ್ರದ ವಿಚಾರವಾಗಿ ವೈದ್ಯಕೀಯ ಲೋಕ ನೀಡಿರುವ ಎಚ್ಚರಿಕೆಗಳನ್ನು ಅಲಕ್ಷಿಸುತ್ತಿರುವುದು, ಗೋಮೂತ್ರ ಸೇವನೆಯನ್ನು ಬೆಂಬಲಿಸುತ್ತಿರುವುದು ದುರದೃಷ್ಟಕರ ಸಂಗತಿ. ವೈಯಕ್ತಿಕ ನೆಲೆಯಲ್ಲಿ ಕಾಮಕೋಟಿ ಅವರು ಇಂಥದ್ದೊಂದು ಅಭಿಪ್ರಾಯ ಹೊಂದಿ, ಅದಕ್ಕೆ ಅನುಗುಣವಾಗಿ ನಡೆದುಕೊಳ್ಳುವುದಕ್ಕೆ ಸ್ವತಂತ್ರರು. ಆದರೆ, ಅವರು ಐಐಟಿ-ಮದ್ರಾಸ್‌ನ ನಿರ್ದೇಶಕ ಸ್ಥಾನದಿಂದ ಇಂತಹ ಮಾತುಗಳನ್ನು ಆಡಿದಾಗ, ಅವರ ಮಾತುಗಳಿಗೆ ವಿಶ್ವಾಸಾರ್ಹತೆ ದೊರಕುತ್ತದೆ. ವಿಜ್ಞಾನ ಮತ್ತು ತಂತ್ರಜ್ಞಾನ ವಲಯದಲ್ಲಿ ಮಹತ್ವದ ಹುದ್ದೆಯನ್ನು ಹೊಂದಿರುವ ಅವರು ವೈಜ್ಞಾನಿಕ ಮನೋಭಾವವನ್ನು ಹರಡುವ ಕೆಲಸ ಮಾಡಬೇಕು. ಧಾರ್ಮಿಕ ನಂಬಿಕೆಗಳನ್ನು ಆಧರಿಸಿದ ಚಿಂತನೆಗಳಿಗೆ, ಮೂಢನಂಬಿಕೆಗಳಿಗೆ ಮತ್ತು ವೈಜ್ಞಾನಿಕ ಆಧಾರವಿಲ್ಲದ ಮಾತುಗಳಿಗೆ ಮಹತ್ವ ನೀಡುವ ವ್ಯವಸ್ಥೆ ದೇಶದಲ್ಲಿ ಇರುವುದು ವಿಷಾದಕರ. ಸಾರ್ವಜನಿಕ ಜೀವನದಲ್ಲಿ ನಂಬಿಕೆ, ಧರ್ಮ ಮತ್ತು ರಾಜಕೀಯವನ್ನು ಪರಸ್ಪರ ಬೆರೆಸಲು ಮುಂದಾಗಬಾರದು. ಕಾಮಕೋಟಿ ಅವರು ಕಂಪ್ಯೂಟರ್ ವಿಜ್ಞಾನದಲ್ಲಿ ಡಾಕ್ಟರೇಟ್ ಪದವಿ ಪಡೆದವರು, ಅವರು ವೈದ್ಯನ ಕೆಲಸ ಮಾಡಲು ಯತ್ನಿಸಬಾರದು.

ರಾಮಾಯಣ

ಶ್ರೀರಾಮನು ಪಟ್ಟಾಭಿಷೇಕಕ್ಕಾಗಿ ತಂಜಡೆತಾಯಿಗಳಿಂದ ಆಶೀರ್ವಾದವನ್ನು ಪಡೆದದ್ದು

ಹಿಂದಿನ ಸಂಚಿಕೆಯಿಂದ

77ನೆಯ ಅಧ್ಯಾಯ

ಅನಂತರ ಸಕಲಶುಸ್ತನಿರ್ಣಯವನ್ನೂ ಬಲ್ಲ ದಶರಥರಾಯನು ತನ್ನೆಮಂತ್ರಿಗಳೊಡನೆ ಆಲೋಚನೆ ಮಾಡಿ ತನ್ನ ಕುಮಾರನಾದ ಶ್ರೀರಾಮನಿಗೆ ಪಟ್ಟವನ್ನು ಕಟ್ಟಲು ನಿಶ್ಚಯಿಸಿ ತನ್ನ ಬ ಪ.ಧಾನನಾದ ಸುಮಂತ್ರನನ್ನು ಕರೆದು '' ನಾಳೆ ಪುಷ್ಯನಕ್ಷತ್ರದ ಶುಭಲಗ್ನದಲ್ಲಿ ಕೆಂದಾವರೆ ಹೂವಿನ ಎಸಳುಗಳಂತೆ ಕೆಂವಾದ ಕಣ್ಣುಗಳುಳ್ಳ ಶ್ರೀರಾಮನಿಗೆ ಪಟ್ಟವನ್ನು ಕಟ್ಟಬೇಕು. ನೀನು ಅತಿಶೀಘ್ರದಲ್ಲಿ ಆತನ ಅರಮನೆಗೆ ಹೋಗಿ ಆತನನ್ನು ಕರೆದುಕೊಂಡು ಬಾ '' ಎಂದು ಆಜ್ಞಾಪಿಸಿದನು. ಸುಮಂತ್ರನು ಶೀಘ್ರದಲ್ಲಿ ಶ್ರೀರಾಮನ ಅರಮನೆಗೆ ಹೋಗಿ ಬಾಗಿಲು ಕಾಯುವವನ ಮೂಲಕ ಹೇಳಿ ಕಳುಹಿಸಲು ಆ ಬಾಗಿಲವರು ಒಳಕ್ಕೆ ಹೋಗಿ ಸುಮಂತ್ರನು ಬಂದಿರುವುದನ್ನು ಶ್ರೀರಾಮನಿಗೆ ಬಿನ್ನಯಿಸಿದರು. ಶ್ರೀರಾಮನು ಆತನು ಬಂದ ವೃತ್ತಾಂತವನ್ನು ಕೇಳಿ ಒಳಗೆ ಕರೆಯಿಸಿ ಆತನನ್ನು ಕುರಿತು ಎಲೈ ಸುಮಂತ್ರನೆ, ನೀನು ಏನುಕಾರಣವಾಗಿ ಬಂದೆ? ಎಂದು ಕೇಳಿದನು. ಸುಮುತ್ತನು ಶ್ರೀರಾಮ, ದಶರಥರಾಯನು ನಿನ್ನನ್ನು ಕರೆತರಹೇಳಿದನು. ನೀನು ಶೀಘ್ರದಲ್ಲಿ ಹೊರಡು '' ಎಂದು ಹೇಳಿದನು. ಅದನ್ನು ಕೇಳಿ ಶ್ರೀರಾಮನು ತನ್ನ ತಂದೆಯ ಸಮೀಪಕ್ಕೆ ಅತಿಶೀಘ್ರದಲ್ಲಿ ಹೋದನು. ಆ ರಾಯನು ಪ್ರೀತಿಯಿಂದ ಒಳಗೆ ಬರಹೇಳಲು ಅರಮನೆಯ ಒಳಗೆ ಹೋಗಿ ಆತನನ್ನು ಕಂಡು

ಕೈಮುಗಿದುಕೊಂಡು ಸಮೀಪಕ್ಕೆ ಹೋಗಿ ನಮಸ್ಕಾರವನ್ನು ಮಾಡಿದನು. ಆ ರಾಯನು ಮಗನನ್ನು ಬಿಗಿದಪ್ಪಿ ಗದ್ದುಗೆಯನ್ನು ಕೊಟ್ಟು ಸಮೀಪದಲ್ಲಿ ಕುಳ್ಳಿರಿಸಿಕೊಂಡು '' ಶ್ರೀರಾಮ, ನಾನು ದೀರ್ಘಾಯುಷ್ಯವಂತನಾಗಿ ಬಹುಕಾಲ ಅನೇಕ ಭೋಗಗಳನ್ನು ಅನುಭವಿಸಿದೆನು. ನನಗೆ ಉತ್ತಮನಾದ ಕುಮಾರನಾಗಿ ನೀನು ಜನಿಸಿದೆ. ನಾನು ಅನೇಕ ವೇದಶಾಸ್ತ್ರಗಳನ್ನು ಪಠಿಸಿದೆನು. ಅನೇಕ ದಾನಗಳನ್ನು ಯಜ್ಞಗಳನ್ನೂ ಮಾಡಿದೆನು. ನಾನಾ ಬಗೆಯ ಭೋಗಗಳಿಂದ ಸುಖವನ್ನನುಭವಿಸಿದೆನು. ಬಹ್ಮಚರ್ಯಾಶ್ರಮದಲ್ಲಿ ವೇದಾಧ್ಯಯನಸಂಪತ್ತಿನಿಂದ ಯಷಿಗಳ ಯಣವನ್ನು ಕಳೆದುಕೊಂಡೆನು. ಯಜ್ಞಾದಿಸತ್ಕರ್ಮಗಳಿಂದ ದೇವತೆಗಳ ಯಣವನ್ನು ಕಳೆದುಕೊಂಡೆನು. ಸಂತಾನವನ್ನು ಪಡೆದು ಪಿತೃಗಳ ಹಣವನ್ನು ಕಳೆದುಕೊಂಡೆನು. ಹೀಗೆ ಯಣತ್ರಯದಿಂದ ವಿಮುಕ್ತನಾದ ನನಗೆ ನಿನ್ನ ಪಟ್ಟಾಭಿಷೇಕವನ್ನು ಮಾಡುವ ಕಾರ್ಯವಲ್ಲದೆ ಮತ್ತೊಂದು ಕಾರ್ಯವಲ್ಲ. ಆದಕಾರಣ ನಾನು ಹೇಳುವ ಕಾರ್ಯವನ್ನಂಗೀಕರಿಸು. ಸಮಸ್ತ ಪ್ರಧಾನಿಗಳೂ ನೀನೇ ಅರಸನಾಗಬೇಕೆಂದು ಬಯಸುತ್ತಾರೆ. ಆದಕಾರಣ ನಿನಗೆ ಯುವರಾಜಪಟ್ಟವನ್ನು ಕಟ್ಟಬೇಕೆಂದು ನಿಶ್ಚಯಿಸಿದ್ದೇನೆ. ಅದಲ್ಲದೆ ನಾನು ಸ್ವಪ್ನಗಳಲ್ಲಿ ಬಹುಭಯಂಕರಗಳಾದ ಅಮಂಗಳಸೂಚಕಗಳನ್ನು ಕಾಣುತ್ತಿದ್ದೇನೆ. ಬರಸಿಡಿಲು ಗುಡುಗಿಕೊಂಡು ಎರಗುವುದು, ಅಂತರಿಕ್ಷಮಾರ್ಗದಿಂದ ಕಿಡಿಗಳುದುರುವುದು ಮೊದಲಾದ ಅದ್ಭುತಗಳನ್ನು ಕಾಣುತ್ತೇನೆ. ನನ್ನ ನಕ್ಷತ್ರದಲ್ಲಿಯೂ ಜನ್ಮರಾಶಿಯಕ್ಲಿಯೂ ಸೂರ್ಯ ಅಂಗಾರಕ ರಾಹುಗಳ ಯೋಗಗಳೂ ಕೂಡಿವೆ. ಇಂಥ ಅದ್ಭುತಗಳಾದರೆ ಅರಸನಿಗೆ ಮೃತ್ಯುವೆಂದು ದೈವಜ್ಞರು ಹೇಳುತ್ತಾರೆ. ಆದ್ದರಿಂದ ಮೊದಲು ನಿನಗೆ ಪಟ್ಟಾಭಿಷೇಕವನ್ನು ಮಾಡಿ ನೋಡಬೇಕು. ಲೋಕದಲ್ಲಿ ಮನುಷ್ಯರಿಗೆ ಬುದ್ಧಿಯು ಮಹಾಚಂಚಲವಾದದ್ದಲ್ಲದೆ ಸ್ಥಿರವಿಲ್ಲ. ಚಂದ್ರನು ಪುನರ್ವಸುನಕ್ಷತ್ರಕ್ಕೆ ಬರುತ್ತಿದ್ದಾನೆ. ನಾಳೆ ಪುಷ್ಯಚಂದ್ರನ ಯೋಗವೆಂದು ಹೇಳುತ್ತಾರೆ. ಆ ಪುಷ್ಯಚಂದ್ರನ ಯೋಗದಲ್ಲಿ ನಿನಗೆ ಪಟ್ಟಾಭಿಷೇಕವನ್ನು ಮಾಡಬೇಕೆಂದು ನನ್ನ ಮನಸ್ಸಿನಲ್ಲಿ ಲವಲವಿಕೆಯಿದೆ. ಆದಕಾರಣ ನೀನು ನಿನ್ನ ಹೆಂಡತಿಯಾದ ಸೀತಾದೇವಿಯ ಸಂಗಡ ದರ್ಭೆಯ ಹಾಸಿಗೆಯಲ್ಲಿ ನಿಯಮಸ್ಥನಾಗಿರು. ಈ ರಾತ್ರಿಯಲ್ಲಿ ನಿನಗಾಪ್ತರಾದ ಮಿತ್ರರು ನಿನ್ನನ್ನು ಸಾವಧಾನವಾಗಿ ರಕ್ಷಿಸಿಕೊಂಡಿರಲಿ.

ಮುಂದುವರಿಯುವುದು...

ಅಮೃತಾ ವಿಭಾಳ ಸಾತ್ವಿಕಾಭಿನಯದ ನೃತ್ಯಮಂಜರಿ

ಕಲಾ ಸಾಹಿತ್ಯ

ವೈ.ಕೆ. ಸಂಧ್ಯಾಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

ಭಕ್ತಿ ತಾದಾತ್ಮ್ಯತೆಯಿಂದ ಮೈಮರೆತು ನರ್ತಿಸಿದ ನೃತ್ಯಕಲಾವಿದೆ ಅಮೃತಾ ವಿಭಾ ಅರ್ಪಿಸಿದ ಹಲವಾರು ದೈವೀಕ ಕೃತಿಗಳು ಆಕೆಯ ಸುಮನೋಹರ ಆಂಗಿಕಾಭಿನಯ ಮತ್ತು ಸಾತ್ವಿಕಾಭಿನಯದ ವರ್ಚಸ್ಸಿನಿಂದ ಮನದುಂಬಿ ಆನಂದ ನೀಡಿತು. ಅಂದು ಕಲಾವಿದೆಯ ನೃತ್ಯ ಬದುಕಿನ ಸ್ಮರಣೀಯ ದಿನ. ಪ್ರಥಮ ನೃತ್ಯ ಪ್ರದರ್ಶನದ ವಿದ್ಯುಕ್ತ 'ರಂಗಪ್ರವೇಶ' ದ ಸುಮೂಹೂರ್ತ. ತುಂಬಿದ ರವೀಂದ್ರ ಕಲಾಕ್ಷೇತ್ರದಲ್ಲಿ ತದೇಕ ಚಿತ್ತದಿಂದ ನೃತ್ಯಪ್ರದರ್ಶನ ವೀಕ್ಷಿಸುತ್ತಿದ್ದ ಕಲಾರಸಿಕರ ಕಣ್ಮನ ತುಂಬಿದ ನೃತ್ಯವಲ್ಲರಿ ಅದಾಗಿತ್ತು.

ಖ್ಯಾತ 'ನೃತ್ಯದೇಗುಲ ಸ್ಕೂಲ್ ಆಫ್ ಡ್ಯಾನ್ಸ್' ನೃತ್ಯಶಾಲೆಯ ನಾಟ್ಯಗುರು ವಿದುಷಿ ಕಾಮಾಕ್ಷಿಯವರ ಮಾರ್ಗದರ್ಶನದಲ್ಲಿ ಅರ್ಜಿಸಿದ ನಾಟ್ಯವಿದ್ಯೆಯನ್ನು ಕಲಾವಿದೆ ಒಪ್ಪವಾಗಿ ಒಪ್ಪಿಸಿದ್ದು ವಿಶೇಷವಾಗಿತ್ತು. ಶುಭಾರಂಭಕ್ಕೆ ಅಮೃತಾ, 'ಜಯ ಜಾನಕೀ ರಮಣ' ನನ್ನು 'ತೋಡಯ ಮಂಗಳಂ' (ರಚನೆ- ಅಣ್ಣಮಾಚಾರ್ಯ- ರಾಗಮಾಲಿಕಾ-ತಾಳಮಾಲಿಕಾ)ನಲ್ಲಿ ಬಹು ಸುಂದರವಾಗಿ ಸಾಕ್ಷಾತ್ಕರಿಸಿದಳು. ಅಂಗಶುದ್ಧ ನರ್ತನದಲ್ಲಿ ನಾರಾಯಣತೇ ನಮೋ ನಮೋ ಎಂದು ವಿನೀತಳಾಗಿ ನೃತ್ತ ನಮನ ಸಲ್ಲಿಸಿದಳು. ನಂತರ ಮನಮೋಹಕ ಜತಿಗಳ ಜ್ಹೆಂಕಾರವನ್ನು 'ಜತಿಸ್ವರ' (ಶ್ರೀರಾಗ- ಖಂಡಚಾಪು ತಾಳ)ದಲ್ಲಿ ಲೀಲಾಜಾಲವಾಗಿ ಅಷ್ಟೇ ಆಕರ್ಷಕವಾಗಿ ನಿರೂಪಿಸಿದಳು. ಆಕಾಶಚಾರಿಯಿಂದ ಒಡಗೂಡಿದ ನೃತ್ತಮಾಲೆಗಳು ಸುಮನೋಹರ ಭಂಗಿಗಳು ಕಣ್ಮನ ತಣಿಸಿದವು.

ಮುಂದೆ- ಮೈಸೂರು ವಾಸುದೇವಾಚಾರ್ಯ ವಿರಚಿತ 'ಶ್ರೀ ಚಾಮುಂಡೇಶ್ವರಿ ಪಾಲಯಮಾಂ' (ರಾಗ- ಬಿಲಹರಿ- ಆದಿತಾಳ) ಎಂದು ದೇವಿಯನ್ನು ಸ್ತುತಿಸಿದ ಕಲಾವಿದೆ, ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡಿ ಸಾಕ್ಷಾತ್ ಚಾಮುಂಡೇಶ್ವರಿಯೇ ಆಗಿ ಸುಪ್ರಸನ್ನ ಭಾವದಷ್ಟೇ ಪರಿಣಾಮಕಾರಿಯಾಗಿ ಮಹಿಷಾಸುರನನ್ನು ವಧಿಸುವಾಗ ಉಗ್ರರೂಪ ತಾಳಿ ಝೋಂಕರಿಸಿ, ಕೆಂಗಣ್ಣು ಬೀರಿ, ತ್ರಿಶೂಲ ಹಿಡಿದು ರಾಕ್ಷಸನನ್ನು ಸಂಹರಿಸಿದ ರಣಭಯಂಕರಿಯಾಗಿ ವಿಜ್ರಂಭಿಸಿದಳು. ದೈವೀಕ ಭಂಗಿಗಳಲ್ಲಿ ಸ್ನಿಗ್ಧ ಕಳೆಯಿಂದ, ಸಾತ್ವಿಕಾಭಿನಯದ ವರ್ಚಸ್ಸಿನಿಂದ ಶೋಭಿಸಿದಳು.

ಗುರು ಕಾಮಾಕ್ಷಿಯವರ ಸ್ಫುಟವಾದ ಉತ್ಸಾಹಪೂರಿತ ನಟುವಾಂಗ ಕಲಾವಿದೆಯ ನರ್ತನಕ್ಕೆ ಇಂಬು ನೀಡಿತು. ಭರತನಾಟ್ಯ ಪ್ರಸ್ತುತಿಯ ಪ್ರಮುಖ ಘಟ್ಟ 'ವರ್ಣ' ಕೃತಿಯ ಸಮರ್ಪಣೆ. ಕ್ಲಿಷ್ಟಜತಿಗಳಿಂದ ಕೂಡಿದ ದೀರ್ಘಬಂಧವಾದ ವರ್ಣದಲ್ಲಿ ಕಲಾವಿದೆಯ ನೃತ್ತ ಮತ್ತು ಅಭಿನಯ ಸಾಮರ್ಥ್ಯ ಎರಡೂ ಸಮಾನ ಪ್ರಭುತ್ವದಿಂದ ಕೂಡಿರಬೇಕಾಗುತ್ತದೆ. ಜೊತೆಗೆ ತಾಳ-ಲಯಜ್ಞಾನ ಮತ್ತು ಅಪಾರವಾದ ನೆನಪಿನ ಶಕ್ತಿ ಬೇಡುವ ಈ ಪ್ರಬುದ್ಧ ಕೃತಿಯನ್ನು ನಿರ್ವಹಿಸಲು ಸಾಕಷ್ಟು ಚೈತನ್ಯವೂ ಅತ್ಯಗತ್ಯ. ಅಮೃತಾ ಅಂದು ಅಭಿನಯಿಸಲು ಆರಿಸಿಕೊಂಡಿದ್ದ 'ಪದವರ್ಣ'- ಪೂರ್ವೀ ಕಲ್ಯಾಣಿ ರಾಗ- ಆದಿತಾಳದ ದಂಡಾಯುಧ ಪಾಣಿ ಪಿಳ್ಳೈ ವಿರಚಿತ 'ಸ್ವಾಮಿಯೇ ವರಸೊಲ್ಲಡಿ' ವಿರಹೋತ್ಕಂಠಿತ ನಾಯಕಿಯ ವಿರಹವೇದನೆಯನ್ನು ಸಾಕಾರಗೊಳಿಸುವ ಕೃತಿ. ಮುರುಗನಲ್ಲಿ ಅನುರಕ್ತಳಾದ ನಾಯಕಿ ಅವನ ಸಾಂಗತ್ಯ ಬಯಸಿ ವಿಲಪಿಸುವ ತೀವ್ರ ಭಾವನೆಗಳನ್ನು ಕಲಾವಿದೆ ಪರಿಣಾಮಕಾರಿಯಾಗಿ ಮನಮುಟ್ಟುವಂತೆ ಅಭಿನಯಿಸಿದಳು.

ಕುಮಾರಸ್ವಾಮಿಗೆ ತನ್ನ ವ್ಯಾಕುಲತೆಯನ್ನು ಬಣ್ಣಿಸಿ ಪತ್ರ ಬರೆದು, ಪಾರಿವಾಳದ ಮೂಲಕ ಸಂದೇಶ ಕಳಿಸುತ್ತಾಳೆ. ನವಿಲಿನ ಹೆಜ್ಜೆಯ ಲಾಸ್ಯದಲ್ಲಿ ನಡೆಯುತ್ತಾ ಕೊರಳು ಕೊಂಕಿಸಿ ಸುಬ್ರಹ್ಮಣ್ಯನನ್ನು ಬಗೆ ಬಗೆಯಾಗಿ ನೆನೆಯುತ್ತಾಳೆ. ನಡು ನಡುವೆ ಮಿಂಚಿನ ಸಂಚಾರದ ನೃತ್ತ ವಿನ್ಯಾಸಗಳನ್ನು ತೋರುತ್ತ, ವಿರಹತಪ್ತ ನಾಯಕಿಯ ವಿವಿಧ ಭಾವನೆಗಳನ್ನು ಸೂಕ್ಷ್ಮಾಭಿನಯದ ಕಲಾತ್ಮಕತೆಯಲ್ಲಿ ಅಭಿವ್ಯಕ್ತಿಸುತ್ತಾಳೆ. ನಾಯಕಿಯ ದೀನಾರ್ತ ಅಭಿನಯ ಮನತಟ್ಟುತ್ತದೆ. ಅಮೃತಾ ನವಚೈತನ್ಯದಿಂದ ಪ್ರಸ್ತುತಪಡಿಸಿದ ಹಂಸಾನಂದಿ ರಾಗದ 'ಶಿವತಾಂಡವ' ? ಶಕ್ತಿ ಶಾಲಿಯಾದ ತಾಂಡವ ಹೆಜ್ಜೆ- ಭಾವ-ಭಂಗಿಗಳಿಂದ ಢಮರು ಹಿಡಿದು ನರ್ತಿಸಿದ ಕನಕದಾಸರ ಬಾಗಿಲನು ತೆರೆದು ಸೇವೆಯನು ಕೊಡೋ ಹರಿಯೇ ದೇವರನಾಮವನ್ನು ಮನೋಜ್ಞವಾಗಿ ಕಟ್ಟಿಕೊಟ್ಟ ಕಲಾವಿದೆ ಗಜೇಂದ್ರ ಮೋಕ್ಷ, ಪ್ರಹ್ಲಾದನ ಭಕ್ತಿಗೆ ಅವತರಿಸಿದ ನಾರಸಿಂಹನ ಅವತರಣ ಮತ್ತು ದ್ರೌಪದಿಗೆ ಅಕ್ಷಯ ವಸ್ತ್ರ ನೀಡುವ ಸುಂದರ ಸಂಚಾರಿಗಳನ್ನು ಮನನೀಯವಾಗಿ ನಿರೂಪಿಸಿದಳು . ಬೃಂದಾವನೀ ರಾಗದ ಸುಮನೋಹರ 'ತಿಲ್ಲಾನ' ದೊಂದಿಗೆ ಅಮೃತಾ ತನ್ನ ಪ್ರಸ್ತುತಿಯನ್ನು ಮಂಗಳ'ಗೊಳಿಸಿದಳು.

ಪರಿಮೈ ನವಿರೇಳಿಸಿತು. ಬಾಲಸುಬ್ರಮಣ್ಯ ಶರ್ಮರ ವಿಶಿಷ್ಟ ಗಾಯನ- ಕಾಮಾಕ್ಷಿಯವರ ಲಯಾತ್ಮಕ-ಸಶಕ್ತ ನಟುವಾಂಗದ ನುಡಿಗಳಿಂದ ಝೋಂಕರಿಸಿತು. ಗುರುಗಳ ಕೊನ್ನಕೋಲುಗಳ ಜತಿಗಳಿಗೆ, ಶರ್ಮರ ಸೊಗಸಾದ ಸ್ವರಗಳ ಗಾಯನದ ಓಘಕ್ಕೆ ಕಲಾವಿದೆಯ ರುದ್ರ ರಮಣೀಯ ಅಭಿನಯ, ಮಂಡಿ ಅಡವು, ಜಾನಪದ ಲಯದ ಅಮೋಘ ಅಭಿವ್ಯಕ್ತಿ, ಪರಿಣಾಮಕಾರಿ ಬಿರುಸು ಹೆಜ್ಜೆಗಳ ಧಾಟಿ ಸರಿಸಾಟಿಯಾಗಿ ವಿಜ್ರಂಭಿಸಿತು.

ಕಲಾವಿದೆಯ ನೃತ್ಯಕ್ಕೆ ಸುಂದರ ಪ್ರಭಾವಳಿ ಸೃಜಿಸಿದ ವಾದ್ಯಗೋಷ್ಠಿಯ ಪಾತ್ರ ಅತ್ಯುನ್ನತವಾಗಿತ್ತು. ಭಾವಪೂರ್ಣ ಗಾಯನದಲ್ಲಿ ಬಾಲಸುಬ್ರಹ್ಮಣ್ಯ ಶರ್ಮ, ಮೃದಂಗದ ಝೋಂಕಾರ ಅರುಣ್ ಕುಮಾರ್, ವೇಣು ಮಾಧುರ್ಯ -ವೇಣುಗೋಪಾಲ್, ಸೂಕ್ತ ಧ್ವನಿಪರಿಣಾಮ ನೀಡಿದ ರಿದಂ ಪ್ಯಾಡ್-ಮಿಥುನ್ ಶಕ್ತಿ ಮತ್ತು ಭಾವಪ್ರದ ವಯೊಲಿನ್ ಎಂ.ಡಿ. ಅರ್ಜುನ್, ಸಶಕ್ತ ನಟುವಾಂಗ- ಗುರು ಕಾಮಾಕ್ಷಿ ಅವರ ಸಹಕಾರ ಸ್ತುತ್ಯಾರ್ಹವಾಗಿತ್ತು.

ನೆಲ್ಲಿಕಾಯಿ ಜತೆ ಸಿಹಿ ತಿನ್ನುವುದರ

ಅಡ್ಡಿಯಾಗದಂತೆ ಪೈಪ್‌ಲೈನ್ ಜೋಡಿಸಿ: ಶಾಸಕರಿಂದ ಅಧಿಕಾರಿಗಳಿಗೆ ಖಡಕ್ ಸೂಚನೆ

ಪುರಸಭೆ ಸಾಮಾನ್ಯ ಸಭೆಯಲ್ಲಿ ನೀರು ಸರಬರಾಜು ಯೋಜನೆಯ ಪೈಪ್‌ಲೈನ್ ವಿಚಾರದಲ್ಲಿ ಸದಸ್ಯರು ಅಸಮಾಧಾನ

• ಉದಯವಾಹಿನಿ ಕಾಪು

ನೀರು ಪೂರೈಕೆ ಅತಿ ಮುಖ್ಯವಾಗಿದ್ದು, ಯಾವುದೇ ಅಡ್ಡಿಯಾಗದಂತೆ ಪೈಪ್‌ಲೈನ್ ಜೋಡಿಸಿಕೊಡುವಂತೆ ಶಾಸಕ ಗುರ್ಮೆ ಸುರೇಶ್ ಶೆಟ್ಟಿ ನೀರು ಸರಬರಾಜು ಮಂಡಳಿಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾಪು ಪುರಸಭಾ ಸಭಾಂಗಣದಲ್ಲಿ ನಡೆದ 'ಪುರಸಭೆ ಸಾಮಾನ್ಯ ಸಭೆಯಲ್ಲಿ ನೀರು ಸರಬರಾಜು ಯೋಜನೆಯ ಪೈಪ್‌ಲೈನ್ ವಿಚಾರದಲ್ಲಿ ಸದಸ್ಯರು ಅಸಮಾಧಾನ ವ್ಯಕ್ತಪಡಿಸಿದ ಹಿನ್ನೆಲೆ ಅವರು, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಸದಸ್ಯರು ಸಭೆಯ ಮುಂದಿಟ್ಟ ಸಮಸ್ಯೆ ಬಗೆಹರಿಸಲು ಇಷ್ಟೇಕೆ ನಿರಾಸಕ್ತಿ ಎಂದು ಪ್ರಶ್ನಿಸಿದ ಶಾಸಕರು, ಹಿರಿಯ ಅಧಿಕಾರಿಯನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಶೀಘ್ರ ಸಮಸ್ಯೆ ಬಗೆಹರಿಸಿಕೊಡುವಂತೆ ಸೂಚನೆ ನೀಡಿದರು. ಮೂರು ಸಭೆಗಳಲ್ಲಿ ಚರ್ಚೆ ನಡೆಸಿದ್ದು, ದೂರು ನೀಡಿದ್ದೇವೆ. ಆದರೆ, ಯಾವುದೇ ಫಲಿತಾಂಶ ಸಿಕ್ಕಿಲ್ಲ. ರಾಜ್ಯ ಸರ್ಕಾರದ ಅನುದಾನದಲ್ಲಿ 30 ಕಿ.ಮೀ, ಕೇಂದ್ರ ಸರ್ಕಾರದ ಅಮೃತ್ ಯೋಜನೆಯಡಿ 71 ಕಿ.ಮೀ. ಪೈಪ್‌ಲೈನ್ ಜೋಡನೆಯಾಗಿದೆ. ಅಮೃತ್ ಯೋಜನೆಯಡಿ 2 ಸಾವಿರ ಮನೆಗಳಿಗೆ ಕನೆಕ್ಷನ್ ಆಗಿದೆ. 2,400 ಮನೆಗಳ ಕನೆಕ್ಷನ್ ಜೋಡಣೆ ಪ್ರಗತಿಯಲ್ಲಿದೆ. ಅಲ್ಲಿ ಜಾಗದ ಸಮಸ್ಯೆ, ರಸ್ತೆ ಸಹಿತ ವಿವಿಧ ಕಾರಣಗಳು ಅಡ್ಡಿಯಾಗುತ್ತಿವೆ. ಶೀಘ್ರದಲ್ಲಿ ಪೈಪ್‌ಲೈನ್ ಜೋಡಣೆ ಪೂರ್ಣಗೊಳಿಸಲಾಗುವುದು' ಎಂದರು.

ಸಮಸ್ಯೆ ಬಗೆಹರಿಸಲು ಇಷ್ಟೇಕೆ ನಿರಾಸಕ್ತಿ

ಬ್ಯಾನರ್‌ಗೆ ಅನುಮತಿ ಕಡ್ಡಾಯ: ಪುರಸಭೆ ವ್ಯಾಪ್ತಿಯಲ್ಲಿನ ನಿಷೇಧಿತ ವಲಯ ಮತ್ತು ಅಪಘಾತ ವಲಯಗಳಲ್ಲಿ ಬೇಕಾಬಿಟ್ಟಿಯಾಗಿ ಬ್ಯಾನರ್ ಅಳವಡಿಸಿದ್ದು, ಅದನ್ನು ತೆರವುಗೊಳಿಸುವಂತೆ ಸದಸ್ಯರು ಆಗ್ರಹಿಸಿದರು. ಬ್ಯಾನರ್ ಅಳವಕೆ, ತೆರವು ಗೊಳಿಸುವಿಕೆ ಬಗ್ಗೆ ಸದಸ್ಯರ ಸಹಕಾರ ಅಗತ್ಯವಿದೆ. ಬ್ಯಾನರ್ ಅಳವಡಿಕೆಗೆ ಪರವಾನಿಗೆ ಪಡೆದುಕೊಳ್ಳುವುದು, ನಿಷೇಧಿತ ವಲಯದಲ್ಲಿ ಬ್ಯಾನರ್ ಅಳವಡಿಸದಿರುವಂತೆ ರಾಜಕೀಯ ಪಕ್ಷಗಳ ಮುಖಂಡರನ್ನು ಸದಸ್ಯರು ಮನವೊಲಿಸಬೇಕು.

ಕಾಪು ಹೊಸ ಮಾರಿಗುಡಿ ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಸಂತೆ, ಅಂಗಡಿ ಅಳವಡಿಸಲು ಜಾಗ ಹುಡುಕಿ ಗೊತ್ತುಪಡಿಸಿ, ಟೆಂಡರ್ ಕರೆದು

ಉದಯವಾಹಿನಿ ಚಿತ್ರ

ಏಜನ್ಸಿ ಮೂಲಕ ಹರಾಜು ಹಾಕುವಂತೆ ಸದಸ್ಯರು ಒತ್ತಾಯಿಸಿದರು. ಬ್ರಹ್ಮಕಲಶೋತ್ಸವ ಸಂದರ್ಭದಲ್ಲಿ ಬರುವ ಶುಕ್ರವಾರದ ಒಂದು ದಿನದ ಸಂತೆಯನ್ನು ರದ್ದು ಪಡಿಸುವಂತೆ ಸಲಹೆ ನೀಡಿದರು. ಈ ಬಗ್ಗೆ ಮೊದಲೇ ಫಲಕ ಹಾಕಿ ಮಾಹಿತಿ ನೀಡಲಾಗುವುದು. ಉತ್ಸವ ಸಂದರ್ಭದ ಅಂಗಡಿ, ಸಂತೆಗೆ ಸೂಕ್ತ ಜಾಗ ಹುಡುಕಿ ನೀಡಲು ನಿರ್ಣಯಿಸಲಾಯಿತು.

ಮೂಳೂರು ಮೀನುಗಾರಿಕಾ ರಸ್ತೆ ತೀರಾ ಹದಗೆಟ್ಟಿದ್ದು, ಇದರಿಂದ ಈ ಭಾಗದ ಜನರು ಓಡಾಡಲು ಕಷ್ಟವಾಗುತ್ತಿದೆ. ಇಲ್ಲಿನ ಸಮಸ್ಯೆಯ ಗಂಭೀರತೆ ಅರಿತು ಕೂಡಲೇ ಅನುದಾನ ಬಿಡುಗಡೆ ಮಾಡುವಂತೆ ಸದಸ್ಯ ಆಸೀಫ್ ಒತ್ತಾಯಿಸಿದರು.

ಪುರಸಭೆ ಅಧ್ಯಕ್ಷೆ ಹರಿಣಾಕ್ಷಿ ದೇವಾಡಿಗ, ಉಪಾಧ್ಯಕ್ಷೆ ಸರಿತಾ ಶಿವಾನಂದ, ಸ್ಥಾಯೀ ಸಮಿತಿ ಅಧ್ಯಕ್ಷ ಅನಿಲ್ ಕುಮಾರ್, ಮುಖ್ಯಾಧಿಕಾರಿ ನಾಗರಾಜ್ ಸಿ. ಇದ್ದರು. ರಾಷ್ಟ್ರೀಯ ಹೆದ್ದಾರಿ ಸಮಸ್ಯೆ ಕಾಪು ಪುರಸಭೆ ವ್ಯಾಪ್ತಿಯ ಮೂಳೂರಿನಿಂದ ಪಾಂಗಾಳದವರೆಗಿನ ರಾಷ್ಟ್ರೀಯ ಹೆದ್ದಾರಿ 66ರಲ್ಲಿ ವಿವಿಧ ಸಮಸ್ಯೆಗಳಿದ್ದು ಅದರ ಬಗ್ಗೆ ನಾಲ್ಕು ವರ್ಷಗಳಿಂದಲೂ ಚರ್ಚೆ ನಡೆಯುತ್ತಿದೆ. ಆದರೆ ಸಮಸ್ಯೆ ಬಗೆಹರಿದಿಲ್ಲ. ಹೆದ್ದಾರಿ ಇಲಾಖೆಯು ಪುರಸಭೆಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿದೆ. ಈ ಬಗ್ಗೆ ಹೆದ್ದಾರಿ ಇಲಾಖೆ ಗುತ್ತಿಗೆದಾರರ ವಿರುದ್ಧ ಸಂಬಂಧಪಟ್ಟವರಿಗೆ ಮ್ಯಾನೇಜರ್ ಶೈಲೇಶ್ ಶೆಟ್ಟಿ ಉತ್ತರಿಸಲು ಮುಂದಾಗಿದ್ದು ಹೆದ್ದಾರಿದೂರು ನೀಡುವಂತೆ ಸದಸ್ಯರಾದ ಅರುಣ್ ಶೆಟ್ಟಿ ಕಿರಣ್ ಆಳ್ವ ಸುರೇಶ್ ದೇವಾಡಿಗ ಸ್ಥಾಯಿ ಸಮಿತಿ ಅಧ್ಯಕ್ಷ ಅನಿಲ್ ಕುಮಾರ್ ಹೆದ್ದಾರಿ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಿದರು. ಈ ಸಂದರ್ಭ ಟೋಲ್ ಸೇವಿ ಪ್ರಾಧಿಕಾರದ ಅಧಿಕಾರಿಗಳು ಬಂದು ಉತ್ತರಿಸಲಿ ಎಂದು ಸದಸ್ಯರು ಆಗ್ರಹಿಸಿದರು. ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಮಧ್ಯ ಪ್ರವೇಶಿಸಿ ಹೆದ್ದಾರಿ ಸಮಸ್ಯೆ ಗಂಭೀರವಾಗಿದೆ.

ತೆರವುಗೊಳಿಸುವುದಾಗಿ ನಿರ್ಧಾರ

ಈ ವಿಷಯದಲ್ಲಿ ಸದಸ್ಯರೆಲ್ಲರೂ ನಮ್ಮೊಂದಿಗೆ ಸಹಕರಿಸಬೇಕು ಎಂದರು. ಸದಸ್ಯರೆಲ್ಲರ ಒಮ್ಮತದ ಅಭಿಪ್ರಾಯದಂತೆ ಅಪಘಾತ ವಲಯ, ನಿಷೇಧಿತ ವಲಯದಲ್ಲಿ ಅಳವಡಿಸಿರುವ ಬ್ಯಾನರ್‌ಗಳನ್ನು ಹತ್ತು ದಿನಗಳ ಒಳಗಾಗಿ ತೆರವುಗೊಳಿಸುವುದಾಗಿ ನಿರ್ಧಾರ ತೆಗೆದುಕೊಳ್ಳಲಾಯಿತು.

ಸಮಸ್ಯೆಗಳ ಬಗ್ಗೆ ಚರ್ಚಿಸಲು ಅಹವಾಲು ಪಡೆಯಲು ಜವಬ್ದಾರಿಯುತ ಸ್ಥಾನದಲ್ಲಿರುವ ಅಧಿಕಾರಿಗಳು ಬರಬೇಕಿದೆ. ಪುರಸಭೆ ಸಾಮಾನ್ಯ ಸಭೆಯನ್ನು ನಿರ್ಲಕ್ಷಿಸುವುದು ಬೇಡ. ಸಭೆ ತಪ್ಪಿಸುವ ಅಧಿಕಾರಿಗಳ ವಿರುದ್ಧ ಮೇಲಧಿಕಾರಿಗಳಿಗೆ ದೂರು ನೀಡಲಾಗುವುದು. ಪುರಸಭೆ ವ್ಯಾಪ್ತಿಯಲ್ಲಿರುವ ಸಮಸ್ಯೆಗಳ ಬಗ್ಗೆ ಪಟ್ಟಿ ಮಾಡಿಕೊಡುವಂತೆ ಮುಖ್ಯಾಧಿಕಾರಿ ಮತ್ತು ಅಧ್ಯಕ್ಷರಿಗೆ ಸೂಚನೆ ನೀಡಿದರು.

ಬೆಸ್ಕಾಂ ಅಧಿಕಾರಿಗಳ ವಿರುದ್ಧ ರೈತರ ಆಕ್ರೋಶ

• ಉದಯವಾಹಿನಿ ಚಿತ್ರದುರ್ಗ

ತಾಲ್ಲೂಕಿನ ಭರಮಸಾಗರ ಹೋಬಳಿಯ ವ್ಯಾಪ್ತಿಯಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡದ ಕಾರಣ ರೈತರು ಬೆಳ ನಮ್ಮ ಅನುಭವಿಸುತ್ತಿದ್ದಾರೆ ಎಂದು ಆರೋಪಿಸಿ ರೈತಸಂಘದ ಮುಖಂಡರು ಬುಧವಾರ ಬೆಸ್ಕಾಂ ಮುಖ್ಯ ಎಂಜಿನಿಯರ್ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಬೇಸಿಗೆ ಸಮೀಪಿಸುತ್ತಿದ್ದು, ವಿದ್ಯುತ್ ಕಣ್ಣಾಮುಚ್ಚಾಲೆಯಿಂದ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಭರಮಸಾಗರ ವಿದ್ಯುತ್ ವಿತರಣಾ ಕೇಂದ್ರದ ಹಲವು ಫೀಡರ್‌ಗಳ ವ್ಯಾಪ್ತಿಯ ಹಳ್ಳಿಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ. ನಿಯಮಾನುಸಾರ ದಿನಕ್ಕೆ 7 ಗಂಟೆ ವಿದ್ಯುತ್ ಸರಬರಾಜು ಮಾಡಬೇಕು. ಆದರೆ, ಕೇವಲ 2- 3 ಗಂಟೆ ವಿದ್ಯುತ್ ನೀಡಲಾಗುತ್ತದೆ. ಅದರಲ್ಲೂ ಹಲವು ಬಾರಿ ವಿದ್ಯುತ್ ಹೋಗಿ ಬರುತ್ತದೆ.

ಇಂತಹ ಪರಿಸ್ಥಿತಿಯಲ್ಲಿ ಬೆಳೆ ಉಳಿಸಿಕೊಳ್ಳುವುದು ಹೇಗೆ ಎಂದು ಮುಖಂಡರು ಪ್ರಶ್ನಿಸಿದರು.

ಕೋಡಿಹಳ್ಳಿ ಗ್ರಾಮದ ಸುತ್ತಮುತ್ತ ಸುಮಾರು ಹಳ್ಳಿಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಉಂಟಾಗುತ್ತಿರುವ ಸಮಸ್ಯೆಗಳ ಬಗ್ಗೆ ಈಗಾಗಲೇ ಬೆಸ್ಕಾಂ ಅಧಿಕಾರಿಗಳಿಗೆ ದೂರು ನೀಡಿದ್ದೇವೆ. ಹಲವು ಬಾರಿ ಮನವಿ ನೀಡಿ ಸರಿಯಾಗಿ ವಿದ್ಯುತ್ ನೀಡುವಂತೆ ಒತ್ತಾಯಿಸಲಾಗಿದೆ.

ಉದಯವಾಹಿನಿ ಚಿತ್ರ

ಆದರೂ ಅಧಿಕಾರಿಗಳು ರೈತರ ಮನವಿಗೆ ಸ್ಪಂದಿಸುತ್ತಿಲ್ಲ. ಶೀಘ್ರ ವಿದ್ಯುತ್ ಸಮಸ್ಯೆ ಸರಿಪಡಿಸದಿದ್ದರೆ ಕಚೇರಿಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ಭರಮಸಾಗರ ಸುತ್ತಮುತ್ತ 20 ವರ್ಷವಾದರೂ ಲೈನ್ ದುರಸ್ತಿ ಮಾಡದೆ ನಿರ್ವಹಣೆ ಮಾಡದೆ ನಿರ್ವಹಣೆಯಲ್ಲಿ ಲೋಪ ಎಸಗಲಾಗಿದೆ. ಇದರಿಂದಾಗಿ ರೈತರು ಯಾವುದೇ ಬೆಳೆಯನ್ನು ಸರಿಯಾಗಿ ಬೆಳೆಯಲು ಸಾಧ್ಯವಾಗುತ್ತಿಲ್ಲ. ಪ್ರಸ್ತುತ ರಾಗಿ, ತರಕಾರಿ, ಹೂವಿನ ಬೆಳೆ ಜಮೀನಿನಲ್ಲಿದೆ. ವಿದ್ಯುತ್ ಇಲ್ಲದ ಕಾರಣ ಬೆಳೆ ಉಳಿಸಿಕೊಳ್ಳಲು ರೈತರು ಪರದಾಡುವಂತಾಗಿದೆ ಎಂದು ಆರೋಪಿಸಿದರು. 7 ಗಂಟೆ ವಿದ್ಯುತ್ ಸರಬರಾಜು ಮಾಡುವ ನಿಯಮ ಕೇವಲ ಕಾಗದಪತ್ರಗಳಿಗೆ ಮಾತ್ರ ಸೀಮಿತವಾಗಿದೆ.

ಹಗಲು ವೇಳೆಯಲ್ಲಿ ಸರಿಯಾಗಿ ವಿದ್ಯುತ್ ನೀಡದ ಕಾರಣ ರೈತರು ರಾತ್ರಿಯಿಡೀ ನಿದ್ದೆಗೆಟ್ಟು ಕರೆಂಟ್‌ಗಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ನೀರು ಹಾಯಿಸಲು ತೆರಳುವ ರೈತರು ಹಾವು, ಹಲ್ಲಿಗಳ ದಾಳಿಗೆ ಒಳಗಾಗುತ್ತಿದ್ದಾರೆ. ರೈತರ ಸುರಕ್ಷತೆಗಾಗಿ ಯಾವುದೇ ಕ್ರಮ ವಹಿಸುತ್ತಿಲ್ಲ ಎಂದು ಆರೋಪಿಸಿದರು.

ರೈತರ ಪ್ರಾಣಕ್ಕೆ ಅಪಾಯ

ಜಿಲ್ಲೆಯಾದ್ಯಂತ ಹಲವು ವಿದ್ಯುತ್ ಕೇಂದ್ರಗಳಲ್ಲಿ ಹೊಸದಾಗಿ ವೈರಿಂಗ್ ವ್ಯವಸ್ಥೆ ಅಳವಡಿಸಿಲ್ಲ. ಹಳೆಯ ವೈರ್‌ಗಳನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ವಿವಿಧೆಡೆ ವೈರ್‌ಗಳು ನೇತಾಡುತ್ತಿದ್ದು, ರೈತರ ಪ್ರಾಣಕ್ಕೆ ಅಪಾಯ ಸೃಷ್ಟಿ ಮಾಡಿವೆ. ಅಧಿಕಾರಿಗಳು ಮುಂದಾಲೋಚನೆಯಿಂದ ವೈರಿಂಗ್ ದುರಸ್ತಿ ಮಾಡುತ್ತಿಲ್ಲ. ತಕ್ಷಣವೇ ಹಳ ವೈರ್‌ಗಳನ್ನು ಬದಲಾವಣೆ ಮಾಡಬೇಕು ಎಂದು ಒತ್ತಾಯಿಸಿದರು.

4,200 ಶಾಲೆ ಬಂದ್: ಎಐಡಿಎಸ್‌ಓ ಪ್ರತಿಭಟನೆ

ಉದಯವಾಹಿನಿ ಚಿತ್ರ

• ಉದಯವಾಹಿನಿ ಹಾಸನ

ಸಂಯೋಜನೆ ಹೆಸರಿನಲ್ಲಿ ರಾಜ್ಯ ಸರ್ಕಾರ ರಾಜ್ಯದ 4200ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲು ಹೊರಟಿರುವ ನಡೆಯನ್ನು ವಿರೋಧಿಸಿ ಎಐಡಿಎಸ್ ಒ ನೇತೃತ್ವದಲ್ಲಿ ನಗರದ ಹೇಮಾವತಿ ಪ್ರತಿಮೆ ಎದುರು ನೂರಾರು ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು ಸಂಘಟನೆಯ ಕಾರ್ಯಕರ್ತೆ ಸುಷ್ಮಾ ಮಾತನಾಡಿ ಕಡಿಮೆ ಹಾಜರಾತಿ ಇರುವ ಶಾಲೆಗಳನ್ನು ಇತರ ಶಾಲೆಗಳೊಂದಿಗೆ ಸಂಯೋಜನ ಮಾಡುವುದಾಗಿ ಸರ್ಕಾರ ತಿಳಿಸಿದೆ. ಈ ಮೂಲಕ ರಾಜ್ಯದ ಕಾಂಗ್ರೇಸ್ ಸರ್ಕಾರ ಬಡ ವಿದ್ಯಾರ್ಥಿಗಳ ಶಿಕ್ಷಣದ ಆಶಾಕಿರಣವಾಗಿರುವ ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿದೆ.

4 ಸಾವಿರಕ್ಕೂ ಹೆಚ್ಚು ಶಾಲೆಗಳನ್ನು ಮುಚ್ಚುತ್ತಿರುವ ಸರ್ಕಾರದ ಈ ನಡೆಯನ್ನು ಎಐಡಿಎಸ್ ಒ ಉಗ್ರವಾಗಿ ಖಂಡಿಸುತ್ತದೆ ಎಂದು ಹೇಳಿದರು. ಈ ಹಿಂದೆ ಬಿಜೆಪಿ ನೇತೃತ್ವದ ಸರ್ಕಾರವೂ ಇದೇ ನೆಪವೊಡ್ಡಿ ಎನ್ ಇಪಿ-2020ರ ಅಡಿಯಲ್ಲಿ 13,800 ಸರ್ಕಾರಿ ಶಾಲೆಗಳನ್ನು ಮುಚ್ಚಲು ಮುಂದಾಗಿತ್ತು. ಅದರ ವಿರುದ್ಧ ರಾಜ್ಯದ ವಿದ್ಯಾರ್ಥಿಗಳು ಎಐಡಿಎಸ್ ಒ ನೇತೃತ್ವದಲ್ಲಿ ಬೃಹತ್ ಆಂದೋಲನ ನಡೆಸಿ, 35 ಲಕ್ಷಕ್ಕೂ ಹೆಚ್ಚು ಸಹಿ ಸಂಗ್ರಹಿಸುವ ಮೂಲಕ ಶಾಲೆಗಳನ್ನು ರಕ್ಷಿಸಿದ್ದರು ಎಂದು ತಿಳಿಸಿದರು. ಆದರೆ, ಈಗ ಮತ್ತೆ ಸರ್ಕಾರಿ ಶಾಲೆಗಳನ್ನು ಮುಚ್ಚುವ ಮೂಲಕ ಕಾಂಗ್ರೇಸ್ ಸರ್ಕಾರ ರಾಜ್ಯದ ರೈತ ಕಾರ್ಮಿಕರು ಹಾಗೂ ಜನ ಸಾಮಾನ್ಯರಿಗೆ ವಿಶ್ವಾಸ ದ್ರೋಹ ಎಸಗಿದೆ ಎಂದು ಆರೋಪಿಸಿದರು. ಬಡವರ ಮಕ್ಕಳಿಂದ ಶಾಶ್ವತವಾಗಿ ಶಿಕ್ಷಣದ ಹಕ್ಕು ಕಿತ್ತುಕೊಳ್ಳುವ ಹುನ್ನಾರ ಇದಾಗಿದೆ. ಹಾಜರಾತಿ ಕಡಿಮೆಯಿರುವ ಶಾಲೆಗಳನ್ನು ಮುಚ್ಚುವುದೆಂದರೆ, ನೆಗಡಿ ಬಂದರೆ ಮೂಗು ಕತ್ತರಿಸಿದಂತೆ ಸರ್ಕಾರ ತನ್ನ ಈ ಅವೈಜ್ಞಾನಿಕ ಮತ್ತು ಅಪ್ರಜಾತಾಂತ್ರಿಕ ಜನವಿರೋಧಿ ನಿರ್ಧಾರ ಕೈಬಿಡಬೇಕು. ಹಾಜರಾತಿ ಕಡಿಮೆಯಿರುವ ಶಾಲೆಗಳಿಗೆ ಕೂಡಲೇ ಅವಶ್ಯಕ ಸೌಲಭ್ಯಗಳನ್ನು ನೀಡಿ ರಕ್ಷಿಸಬೇಕು ಎಂದು ಆಗ್ರಹಿಸಿದರು.

ಹಿರಿಯ ಸಾಹಿತಿ ಜಿ.ಕೃಷ್ಣಪ್ಪ ನಿಧನಕ್ಕೆ ತಂಗಡಗಿ ಶೋಕ

ಉದಯವಾಹಿನಿ ಚಿತ್ರ

• ಉದಯವಾಹಿನಿ ಕಾರಟಗಿ

ಕನ್ನಡದ ಹಿರಿಯ ಸಾಹಿತಿ, ಸಂಶೋಧಕ ಜಿ ಕೃಷ್ಣಪ್ಪ ಅವರ ನಿಧನಕ್ಕೆ ಹಿಂದುಳಿದ ವರ್ಗಗಳ ಕಲ್ಯಾಣ ಕನ್ನಡ ಹಾಗೂ ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಶೋಕ ವ್ಯಕ್ತಪಡಿಸಿದ್ದಾರೆ. ಬೇಂದ್ರೆ ಕೃಷ್ಣಪ್ಪ ಎಂದೆ ಚಿರಪರಿಚಿತರಾಗಿದ್ದ ಜಿ ಕೃಷ್ಣಪ್ಪ ದ. ರಾ ಬೇಂದ್ರೆ ಅವರ ಗಾಢ ಪ್ರಭಾವಕ್ಕೆ ಒಳಗಾಗಿದ್ದವರು. ಅವರ ಸಾಹಿತ್ಯ ಅಧ್ಯಯನವೇ ಕೃಷ್ಣಪ್ಪ ಅವರ ಜೀವನದ ಬಹುಮುಖ್ಯ ಅಧ್ಯಾಯವಾಗಿತ್ತು. ಮಕ್ಕಳ ಸಾಹಿತ್ಯ, ವಿಮರ್ಶೆ, ಬೇಂದ್ರೆ ಕೃತಿಗಳ ವಿವಿಧ ಆಯಾಮಗಳ ಕೃತಿ ರಚನೆ ಹೀಗೆ ಜಿ ಕೃಷ್ಣಪ್ಪ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಕೊಡುಗೆಗಳ ಮೂಲಕ ಹೆಸರಾಗಿದ್ದವರು. ರಾಜ್ಯಾದ್ಯಂತ ಶಾಲಾ ,ಕಾಲೇಜುಗಳಲ್ಲಿ ಬೇಂದ್ರೆ ಕಾವ್ಯ ಗಾಯನ ಸ್ಪರ್ಧೆ ಏರ್ಪಡಿಸಿ ಬಹುಮಾನ ನೀಡುತ್ತಾ ಬೇಂದ್ರೆ ಕಾವ್ಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಒಲವು ಮೂಡಿಸುವಲ್ಲಿ ಮುಖ್ಯ ಪಾತ್ರವಹಿಸಿದ್ದರು.

ಕನ್ನಡ ಪುಸ್ತಕ ಪ್ರಾಧಿಕಾರದ ಜಿ ಪಿ ರಾಜರತ್ನಂ ಸಾಹಿತ್ಯ ಪರಿಚಾರಕ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಹಾಗೂ ಹಂಪಿ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದಿದ್ದ ಜಿ ಕೃಷ್ಣಪ್ಪ ನವರ ನಿಧನ ಸಾಹಿತ್ಯ ಲೋಕಕ್ಕೆ ದೊಡ್ಡ ನಷ್ಟ ಎಂದು ಸಚಿವ ಶಿವರಾಜ ತಂಗಡಗಿ ತಮ್ಮ ಸಂತಾಪ ಸಂದೇಶದಲ್ಲಿ ತಿಳಿಸಿದ್ದಾರೆ.

ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಸರಕಾರಿ ಪಿಯು ಕಾಲೇಜು ಪ್ರಥಮ ಸ್ಥಾನದಲ್ಲಿದೆ

• ಉದಯವಾಹಿನಿ, ಚಿಂಚೋಳಿ

ಸರಕಾರಿ ಶಾಲೆಗಳು ಮತ್ತು ಕಾಲೇಜುಗಳೆಂದರೆ ಮೂಗು ಮುರಿಯುವವರೇ ಈಗಿನ ಕಾಲದಲ್ಲಿ ಬಹುತೇಕ ಜನರು ಇರುವಾಗ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಪಟ್ಟಣದ ಪಿಯು ಸರಕಾರಿ ಕಾಲೇಜು ಪ್ರಥಮ ಸ್ಥಾನದಲ್ಲಿದೆ ಎಂದು ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶಂಕರ ರಾಠೋಡ್ ಹೇಳಿದರು. ಪಟ್ಟಣದ ಚಂದಾಪೂರದ ಸರ್ಕಾರಿ ಪಿಯು ಕಾಲೇಜಿನ 53ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಾಲಾಕಾಲೇಜುಗಳ ವಿಧ್ಯಾರ್ಥಿಗಳು ಯಾವುದೇ ದುಶ್ಚಟಗಳಿಗೆ ಬಲಿಯಾಗದೆ ಮೊಬೈಲ್ ಫೋನ್ ಮತ್ತು ಟಿವಿಗಳಿಂದ ದೂರವಿದ್ದು ಉತ್ತಮ ವಿಧ್ಯಾಭ್ಯಾಸ ಮಾಡಿ ಜೀವನ ರೂಪಿಸಿಕೊಳ್ಳಬೇಕು. ಸರಕಾರಿ ಕನ್ಯಾ ಕಾಲೇಜಿನ ಉಪನ್ಯಾಸಕ ಸಿದ್ರಾಮರಡ್ಡಿ ವಿಶೇಷ ಉಪನ್ಯಾಸ ನೀಡಿದರು. ಸರಕಾರಿ ನೌಕರರ ಸಂಘದ ಅಧ್ಯಕ್ಷ ದೇವಿಂದ್ರಪ್ಪ ಹೋಳ್ಕರ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಜಯಪ್ಪ ಚಾಪಲ್, ಉಪ ಪ್ರಾಂಶುಪಾಲ ಮೋಯಿಜೋದ್ದಿನ್ ಪಟೇಲ್ ಮಾತನಾಡಿದರು, ಕಾಲೇಜಿನ ಪ್ರಾಂಶುಪಾಲ ಮಲ್ಲಿಕಾರ್ಜುನ ಪಾಲಾಮೂರ್ ಅಧ್ಯಕ್ಷತೆ ವಹಿಸಿದ್ದರು.

ಉದಯವಾಹಿನಿ ಚಿತ್ರ

ಪುರಸಭೆ ಉಪಾಧ್ಯಕ್ಷ ಸುಲ್ತಾನಬೇಗಂ, ಉಪನ್ಯಾಸಕ ವಿನೋದಕುಮಾರ ಸ್ವಾಗತಿಸಿದರು. ವಿಜಯಲಕ್ಷ್ಮಿ ಹಂಚನಾಳ ನಿರೂಪಿಸಿದರು, ಡಾ.ಶಮಶೋದ್ದಿನ್ ವಂದಿಸಿದರು. ಶೈಕ್ಷಣಿಕ ವರ್ಷದಲ್ಲಿ ಸಾಧನೆಗೈದ ಆರು ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾರ್ಥಿಗಳೆಂದು ಪ್ರಶಸ್ತಿ ಪತ್ರ ಹಾಗೂ ಬಹುಮಾನ ನೀಡಿ ಸನ್ಮಾನಿಸಲಾಯಿತು, ಕಾರ್ಯಕ್ರಮದ ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯ ಕ್ರಮಗಳು ಜರುಗಿದವು.

ವಿದ್ಯಾರ್ಥಿಗಳು ಕಷ್ಟಪಟ್ಟು ಓದುವ ಜೋತೆ ಇಷ್ಟಪಟ್ಟು ಓದಬೇಕು, ಕಾಲೇಜುಗಳಲ್ಲಿ ಉಪನ್ಯಾಸಕರು ಹೇಳುವ ಪಾಠವನ್ನು ಅತ್ಯಂತ ಸೂಕ್ಷ್ಮದಿಂದ ತಿಳಿದುಕೊಂಡು ಮನೆಯಲ್ಲಿಯು

ದಿನ ಭವಿಷ್ಯ

ರಾಹುಕಾಲ	ಬೆಳಿಗ್ಗೆ	10:30 ರಿಂದ 12:00
ಗುಳಿಕ ಕಾಲ	ಬೆಳಿಗ್ಗೆ	07:30 ರಿಂದ 09:00
ಯಮಗಂಡ ಕಾಲ	ಮಧ್ಯಾಹ್ನ	03:00 ರಿಂದ 04:30

ಮೇಷ ಪ್ರವಾಸ-ಪಾರ್ಟಿಗಳು ಮತ್ತು ಆನಂದ ವಿಹಾರಗಳು ನಿಮ್ಮನ್ನು ಉತ್ತಮ ಮೂಡ್‌ನಲ್ಲಿಡುತ್ತವೆ. ನಿಮ್ಮ ತಂದೆ ತಾಯಿಯರಲ್ಲಿ ಯಾರಾದರೂ ಒಬ್ಬರು ಹಣವನ್ನು ಸಂಗ್ರಹಿಸುವ ಬಗ್ಗೆ ಉಪನ್ಯಾಸಗಳನ್ನು ನೀಡಬಹುದು.

ವೃಷಭ ನಿಮ್ಮ ಗೆಳತಿ ನಿಮಗೆ ಮೋಸ ಮಾಡಬಹುದು. ನೀವು ಇತರರ ನೆರವಿಲ್ಲದೆಯೇ ನಿಮ್ಮ ಪ್ರಮುಖ ಕೆಲಸಗಳನ್ನು ನಿಭಾಯಿಸಬಲ್ಲರಿ ಎಂದು ನಿಮಗನಿಸಿದಲ್ಲಿ ನೀವು ತಪ್ಪಾಗಿ ಭಾವಿಸಿದ್ದೀರಿ.

ಮಿಥುನ ಮನರಂಜನೆ ಮತ್ತು ಮೋಜಿನ ಒಂದು ದಿನ. ನಿಮ್ಮ ಹಣವನ್ನು ಉಳಿಸಲು ನೀವು ನಿಮ್ಮ ಮನೆಯ ಜನರೊಂದಿಗೆ ಮಾತನಾಡಬೇಕು. ಅವರ ಸಲಹೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗುತ್ತದೆ.

ಕರ್ಕಾಟಕ ಪ್ರತಿ ವ್ಯಕ್ತಿಯನ್ನೂ ಆಲಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ಹೊಸ ಆರ್ಥಿಕ ಒಪ್ಪಂದ ಕುದುರಿಸಲಾಗುತ್ತದೆ ಮತ್ತು ಹೊಸ ಹಣ ಬರುತ್ತದೆ. ಮಕ್ಕಳು ಮತ್ತು ಕುಟುಂಬ ನಿಮ್ಮ ಕೇಂದ್ರಬಿಂದುವಾಗಿರುತ್ತದೆ.

ಸಿಂಹ ಲಕ್ಕವಿಲ್ಲದಷ್ಟು ಗಾಬರಿಗಳು ನಿಮ್ಮ ಪ್ರತಿರೋಧಕತೆ ಮತ್ತು ಆಲೋಚನಾ ಶಕ್ತಿಯನ್ನು ದುರ್ಬಲಗೊಳಿಸಬಹುದು. ಸಕಾರಾತ್ಮಕ ಚಿಂತನೆಯ ಜೊತೆ ಈ ರೋಗದ ವಿರುದ್ಧ ಹೋರಾಡಲು ಪ್ರಯತ್ನಿಸಿ.

ಕನ್ಯಾ ನಿಮ್ಮ ಭಾವನೆಗಳನ್ನು ವಿಶೇಷವಾಗಿ ಕೋಪವನ್ನು ನಿಯಂತ್ರಿಸಲು ಪ್ರಯತ್ನಿಸಿ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಸಂಬಂಧಗಳೊಂದಿಗಿನ ಸಂಬಂಧಗಳು ಹಾಗೂ ಬಂಧಗಳ ನವೀಕರಣದ ಒಂದು ದಿನ.

ತುಲಾ ಹಿರಿಯರು ಉತ್ತಮ ಲಾಭ ಪಡೆಯಲು ತಮ್ಮ ಹೆಚ್ಚುವರಿ ಶಕ್ತಿಯನ್ನು ಸಕಾರಾತ್ಮಕ ಬಳಕೆಗೆ ವಿನಿಯೋಗಿಸಬೇಕು. ಆರ್ಥಿಕ ಭಾಗವು ಬಲಗೊಳ್ಳುವ ಪೂರ್ಣ ಸಾಧ್ಯತೆ ಇದೆ.

ವೃಶ್ಚಿಕ ತುಂಬಾ ಚಿಂತೆ ಮತ್ತು ಒತ್ತಡ ರಕ್ತದೊತ್ತಡವನ್ನು ಉಂಟುಮಾಡಬಹುದು. ಇಂದು ನಿಮ್ಮ ಹಣವನ್ನು ಖರ್ಚು ಮಾಡುವ ಅಗತ್ಯವಿಲ್ಲ, ಮನೆಯ ಯಾವುದೇ ಹಿರಿಯ ಸದಸ್ಯ ಇಂದು ನಿಮಗೆ ಹಣವನ್ನು ನೀಡಬಹುದು.

ಧನಸ್ಸು ಮಾನಸಿಕ ಶಾಂತಿಗಾಗಿ ನಿಮ್ಮ ಒತ್ತಡವನ್ನು ಪರಿಹರಿಸಿ. ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಇಂದು ಪರಿಹರಿಸಬಹುದು ಮತ್ತು ನೀವು ಹಣದಿಂದ ಲಾಭ ಪಡೆಯಬಹುದು.

ಮಕರ ಇದು ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಬೇಕಾಗಿಲ್ಲ. ನಿಮ್ಮ ಸುತ್ತಲಿನ ಜನರು ನಿಮ್ಮ ಸ್ಥೈರ್ಯ ಮತ್ತು ಚೈತನ್ಯಗಳನ್ನು ಹೆಚ್ಚಿಸುತ್ತಾರೆ. ನಿಮ್ಮ ಸ್ನೇಹಿತರ ಸಹಾಯದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾಗುತ್ತವೆ.

ಕುಂಭ ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ಹೊಸ ಹಣಗಳಿಕೆಯ ಅವಕಾಶಗಳು ಲಾಭದಾಯಕವಾಗಿರುತ್ತವೆ. ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ.

ಮೀನ ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ವೆಚ್ಚದ ಏರಿದರೂ ಆದಾಯದಲ್ಲಿನ ಹೆಚ್ಚಳ ನಿಮ್ಮ ಖರ್ಚುಗಳನ್ನು ನೋಡಿಕೊಳ್ಳುತ್ತದೆ.

ಕುಷ್ಠರೋಗ ಅಂಟು ರೋಗವಲ್ಲ, ತಾರತಮ್ಯ ಬೇಡ ಎಚ್ಚರಿಕೆ ಅಗತ್ಯ

ಕುಷ್ಠರೋಗ ಇರುವ ವ್ಯಕ್ತಿ ಕೆಮ್ಮುವಾಗ ಅಥವಾ ಸೀನಿದಾಗ ಇನ್ನೊಬ್ಬರಿಗೆ ಹರಡಬಹುದಾದ್ದರಿಂದ ಎಚ್ಚರಿಕೆಯಿಂದ ಇರಬೇಕು: ಡಿಎಚ್‌ಓ

• ಉದಯವಾಹಿನಿ ಶಿವಮೊಗ್ಗ

ಕುಷ್ಠರೋಗ ಅಂಟು ರೋಗವಲ್ಲ. ಈ ರೋಗದ ಬಗ್ಗೆ ತಾರತಮ್ಯ, ಬೇಧ-ಭಾವ ಬೇಡ. ಆದರೆ ಕುಷ್ಠರೋಗ ಇರುವ ವ್ಯಕ್ತಿ ಕೆಮ್ಮುವಾಗ ಅಥವಾ ಸೀನಿದಾಗ ಇನ್ನೊಬ್ಬರಿಗೆ ಹರಡ ಬುಹುದಾದ್ದರಿಂದ ಎಚ್ಚರಿಕೆಯಿಂದ ಇರಬೇಕು ಎಂಬುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಎಸ್ ನಟರಾಜ್ ಹೇಳಿದ್ದಾರೆ.

ರಾಷ್ಟ್ರೀಯ ಆರೋಗ್ಯ ಅಭಿಯಾನ ಅಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿವಾರಣ ಕಾರ್ಯಕ್ರಮ ಶಿವಮೊಗ್ಗ, ಭಾರತೀಯ ವೈದ್ಯಕೀಯ ಸಂಘ ಶಿವಮೊಗ್ಗ ಹಾಗೂ ಸುಬ್ಬಯ್ಯ ಮೆಡಿಕಲ್ ಕಾಲೇಜು ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ ಇವರುಗಳ ಸಹಯೋಗದೊಂದಿಗೆ ಗುರುವಾರ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಸ್ಪರ್ಶ್ ಕುಷ್ಠರೋಗ ಜಾಗೃತಿ ಆಂದೋಲನ ಕಾರ್ಯಕ್ರಮಕ್ಕೆ ಹಸಿರು ನಿಶಾನೆಯ ತೋರುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.ಜಿಲ್ಲೆಯಲ್ಲಿ ಈಗಾಗಲೇ 53 ಕುಷ್ಠರೋಗ ಪ್ರಕರಣಗಳು ಇವೆ. ಇದಲ್ಲದೇ ಏಪ್ರಿಲ್ ನಿಂದ ಇಲ್ಲಿಯವರೆಗೂ 32 ಪ್ರಕರಣಗಳನ್ನು ಪತ್ತೆ ಹಚ್ಚಿದ್ದೇವೆ. ಅದರಲ್ಲಿ ಶಿಕಾರಿಪುರ ತಾಲ್ಲೂಕಿನಲ್ಲಿ ಹೆಚ್ಚಿನ ಪ್ರಕರಣಗಳು ದಾಖಲಾಗಿವೆ. ನಮ್ಮ ದೇಶ ತುಂಬು ಕುಟುಂಬ ಹೊಂದಿರುವ ದೇಶವಾಗಿದೆ.

ಉದಯವಾಹಿನಿ ಚಿತ್ರ

> ಏಸುಕ್ರಿಸ್ತ, ಭಗವಾನ್ ಬುದ್ಧ ಮಹಾತ್ಮ ಗಾಂಧಿ ಮದರ್ ತೆರೇಸಾ ಇವರೆಲ್ಲಾ ಕುಷ್ಠರೋಗವನ್ನು ಅನಿಷ್ಠವೆಂದು ಕಾಣದೆ ಸೇವೆಯನ್ನು ಮಾಡಿದವರು. ಕುಷ್ಠರೋಗವು ಸ್ಪರ್ಶದಿಂದ ಬರುವುದಿಲ್ಲ ಎಂದು ಅರಿತಿದ್ದ ಈ ಮಹಾನೀಯರು ತಮ್ಮ ಬದುಕಿನುದ್ದಕ್ಕೂ ಈ ರೋಗಿಗಳ ಶುಶ್ರೂಷೆ ಮಾಡುತ್ತಾ ಜೀವನ ನಡೆಸಿದರು. ಕುಷ್ಠರೋಗವನ್ನು ಹೋಗಲಾಡಿಸಬೇಕೆಂದು ಶ್ರಮಿಸುತ್ತಿರುವ ನಾವೆಲ್ಲರು ಇವರ ಆದರ್ಶವನ್ನು ಪಾಲನೆ ಮಾಡಬೇಕು. ಆ ನಿಟ್ಟಿನಲ್ಲಿ ನಿಮ್ಮೆಲ್ಲರ ಸಹಕಾರ ಕೂಡ ಬೇಕು
> -ಡಾ.ಕೆ.ಎಸ್ ನಟರಾಜ್, ಡಿಎಚ್‌ಓ

ವೈವಾಹಿಕ ಜೀವನದಿಂದಲೇ ದೂರ

ಮೆಗ್ಗನ್ ಬೋಧನಾ ಜಿಲ್ಲಾಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಟಿ.ಡಿ.ತಿಮ್ಮಪ್ಪ ಮಾತನಾಡಿ, ನಾವು ಸಣ್ಣ ಮಕ್ಕಳಿದ್ದಾಗ ನಗರದ ಬಸ್ ಸ್ಟಾಂಡ್, ದೇವಸ್ಥಾನ ಒಳಗೊಂಡಂತೆ ಅನೇಕ ಕಡೆ ಕುಷ್ಠರೋಗಿಗಳನ್ನು ಕಾಣುತ್ತಿದ್ದೆವು. ಜನರು ಅವರನ್ನು ಮುಟ್ಟಿಸಿಕೊಳ್ಳಲು ಹಿಂಜರಿಯುತ್ತಿದ್ದರು. ಈ ಖಾಯಿಲೆಯಿಂದ ಅವರು ವೈವಾಹಿಕ ಜೀವನದಿಂದಲೇ ದೂರ ಉಳಿದಿದ್ದರು. ಇಡೀ ಸಮಾಜವೇ ಈ ರೋಗವನ್ನು ಅನಿಷ್ಠವೆಂಬಂತೆ ಕಾಣುತ್ತಿದ್ದರು ಎಂದು ತಮ್ಮ ಬಾಲ್ಯದ ನೆನಪನ್ನು ಹಂಚಿಕೊಂಡರು.

ಇದರಿಂದ ಕುಷ್ಠರೋಗ ಹರಡುವ ಸಾಧ್ಯತೆಗಳು ಹೆಚ್ಚು. ಆದ್ದರಿಂದ ನಾವು ಕೆಮ್ಮುವಾಗ, ಸೀನುವಾಗ ಎಚ್ಚರಿಕೆ ವಹಿಸಬೇಕು. ಇದಲ್ಲದೇ ದೇಹದಲ್ಲಿ ಬಿಳಿ ಮಚ್ಚೆಗಳು ಕಂಡುಬದಲ್ಲಿ ನಿರ್ಲಕ್ಷ್ಯತನ ಮಾಡದೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ ಸಲಹೆ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಶಿಕಾರಿಪುರ ಅಲ್ಲದೆ ಜಿಲ್ಲೆಯ ಅನೇಕ ತಾಲ್ಲೂಕುಗಳಲ್ಲಿ ಕುಷ್ಠರೋಗ ಪ್ರಕರಣಗಳು ಕಂಡು ಬಂದಿವೆ.

ಕುಷ್ಠರೋಗ ಜಾಗೃತಿ ಆಂದೋಲನ

ಆದರೆ ಪ್ರಮಾಣ ಕಡಿಮೆ ಇದೆ. ಜಿಲ್ಲೆಯ ಯಾವ ತಾಲ್ಲೂಕು ಕುಷ್ಠರೋಗದಿಂದ ಹೊರತಾಗಿಲ್ಲ. ಇದನ್ನು ತೊಡೆದು ಹಾಕಲು ಆರೋಗ್ಯ ಇಲಾಖೆ ಪಣತೊಟ್ಟಿದ್ದು, ಹಗಲು ರಾತ್ರಿ ಎನ್ನದೆ ಶ್ರಮಿಸುತ್ತಿದೆ ಎಂದರು.

ಕುಷ್ಠರೋಗ ಸಮಾಜ ಮತ್ತು ಆರ್ಥಿಕತೆಯ ಮೇಲೆ ತುಂಬಾ ಸಮಸ್ಯೆ ಉಂಟು ಮಾಡುತ್ತಿದೆ. ಈ ರೋಗ ಇದೆ ಎಂದು ಹೇಳಲು ಕೂಡ ಮುಜುಗರ ಪಡುವಂತಹ ವಾತಾವರಣ ನಿರ್ಮಾಣವಾಗಿದೆ. ಇಂತಹ ಪಿಡುಗನ್ನು ತೊಡೆದು ಹಾಕಲು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ನಾವೆಲ್ಲಾ ಕೆಲಸ ಮಾಡಬೇಕು. ಹಳ್ಳಿ ಹಳ್ಳಿಗಳಿಗು ಹೋಗಿ ಇದರ ಬಗ್ಗೆ ಅರಿವು ಮೂಡಿಸಬೇಕು. ಭಾರತೀಯ ವೈದ್ಯಕೀಯ ಸಂಘದವರು ಈ ಪಿಡುಗನ್ನು ಹೋಗಲಾಡಿಸಲು ಸದಾ ಆರೋಗ್ಯ ಇಲಾಖೆಯ ಜೊತೆ ಕೈ ಜೋಡಿಸುತ್ತದೆ ಎಂದರು.

ಕಾರ್ಯಕ್ರದಲ್ಲಿ ಜಿಲ್ಲಾ ಕುಷ್ಠರೋಗ ನಿವಾರಣಾ ಕಾರ್ಯಕ್ರಮಧಿಕಾರಿ ಡಾ.ಎಸ್.ಕೆ. ಕಿರಣ್ ಮಾತನಾಡಿ, ಚರ್ಮದ ಮೇಲೆ ತಿಳಿಬಿಳಿ ಅಥವಾ ಕೆಂಪು ಇಲ್ಲವೇ ತಾಮ್ರ ವರ್ಣ ಸ್ಪರ್ಷಜ್ಞಾನವಿಲ್ಲದ ಮಚ್ಚೆಗಳು, ಚರ್ಮದ ಮೇಲೆ ಬೆಳ ವಣಿಗೆಗಳು(ಗಂಟು), ನೋವು ರಹಿತ ಹುಣ್ಣುಗಳು, ಹುಬ್ಬುಗಳು ಅಥವಾ ಕಣಪೆಗಳ ನಷ್ಟ ಇವು ಕುಷ್ಠರೋಗದ ಲಕ್ಷಣಗಳಾಗಿವೆ.

ಈ ರೋಗವನ್ನು ತಡೆಗಟ್ಟಲು ಮಚ್ಚೆಗಳನ್ನು ಗುಪ್ತವಾಗಿರಿಸದೇ ವೈದ್ಯರಿಗೆ ತೋರಿಸಬೇಕು. ಪ್ರಾರಂಭಿಕ ಹಂತದಲ್ಲಿ ಚಿಕಿತ್ಸೆ ಪಡೆದರೆ ಹರಡುವಿಕೆ ತಡೆಯಬಹುದು ಹಾಗೂ ಇದರಿಂದಾಗುವ ಅಂಗವೈಕಲ್ಯ ತಡೆಯಬಹುದು.

ಕುಷ್ಠರೋಗದಿಂದ ಬಳಲುವವರಿಗೆ ಆರೋಗ್ಯ ಇಲಾಖೆಯಿಂದ ಶಸ್ತಂಚಿಕಿತ್ಸೆ, ಉಚಿತ ಎಂಸಿಆರ್ ಚಪ್ಪಲಿ, ಸಹಾಯಕ ಔಷಧಿಗಳನ್ನು ನೀಡಲಾಗುತ್ತದೆ ಎಂದು ಮಾಹಿತಿ ನೀಡಿದರು.

ಜ.30ರಿಂದ ಫೆ.13ರವರೆಗೆ ಸ್ಪರ್ಶ ಕುಷ್ಠ ರೋಗ ಅರಿವು ಆಂದೋಲನ

• ಉದಯವಾಹಿನಿ ಚಿತ್ರದುರ್ಗ

ಜಿಲ್ಲಾ ಆಸ್ಪತ್ರೆಯ ಆವರಣದಲ್ಲಿ ದಿನಾಂಕ:30/01/225 ಗುರುವಾರ ಸ್ಪರ್ಶ ಕುಷ್ಟರೋಗ ಅರಿವು ಆಂದೋಲನ ಜಾಗೃತಿ ಜಾತ ಕಾರ್ಯಕ್ರಮ ಜರಗಿತು.

ಆರೋಗ್ಯ ಇಲಾಖೆ ವತಿಯಿಂದ ಜಿಲ್ಲೆಯಲ್ಲಿ ಜ.30 ರಿಂದ ಫೆ.13 ರವರೆಗೆ ಸ್ಪರ್ಶ ಕುಷ್ಠ ರೋಗ ಅರಿವು ಆಂದೋಲನ ಹಮ್ಮಿಕೊಳ್ಳಲಾಗುವುದು ಎಂದು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ನಡೆದ ಜಾತ ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ. ಡಾಕ್ಟರ್ ಜಿ. ಓ ನಾಗರಾಜ್ ಅವರು ತಿಳಿಸಿ ಮಾತನಾಡುತ್ತ ಕುಷ್ಠ ರೋಗವನ್ನು ಪ್ರಾಥಮಿಕ ಹಂತದಲ್ಲಿ ಪತ್ತೆ ಹಚ್ಚಿ ಚಿಕಿತ್ಸೆ ನೀಡುವುದು ಆಂದೋಲನದ ಉದ್ದೇಶವಾಗಿದೆ ಎಂದರು. ಶಿಕ್ಷಣ ಇಲಾಖೆ ಹಾಗೂ ವಸತಿ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ದೇಹದ ಮೇಲೆ ಸ್ಪರ್ಶ ಜ್ಞಾನವಿಲ್ಲದ ಮಚ್ಚೆಗಳು ಕಂಡು ಬಂದಲ್ಲಿ, ಪರೀಕ್ಷೆಗೆ ಒಳಪಡಿಸಿ ಚಿಕಿತ್ಸೆ ನೀಡಿ ಆಶಾ ಕಾರ್ಯಕರ್ತೆಯರು ಮನೆ- ಮನೆ ಭೇಟಿ ಸಾರ್ವಜನಿಕರಲ್ಲಿ ಅರಿವು ಮೂಡಿಸಿ ಹಾಗೂ ಕುಷ್ಠ ರೋಗಕ್ಕೆ ಸರಿಯಾದ ಚಿಕಿತ್ಸೆ ಪಡೆದಲ್ಲಿ ಪೂರ್ಣವಾಗಿ ಗುಣಮುಖರಾಗಬಹುದು. ಈ ಬಗ್ಗೆ ಜನವರಿ 30 ರಂದು

ಉದಯವಾಹಿನಿ ಚಿತ್ರ

ಪ್ರಾಥಮಿಕ ಹಂತದಲ್ಲಿ ಪತ್ತೆ ಹಚ್ಚಿ ಚಿಕಿತ್ಸೆ

ಗ್ರಾಮ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಸದಸ್ಯರನ್ನೊಳಗೊಂಡಂತೆ ಅರಿವು ಕಾರ್ಯಕ್ರಮ ಆಯೋಜಿಸಿ, ಜನವರಿ 30 ರಿಂದ ಫೆಬ್ರವರಿ 13 ರರವರೆಗೆ ಒಟ್ಟು 15 ದಿನಗಳ ಕಾಲ ಜಿಲ್ಲೆಯಲ್ಲಿರುವ ಪ್ರತಿ ಮನೆ -ಮನೆಗೂ ಭೇಟಿ ನೀಡಿ ಕುಷ್ಠರೋಗ ಸಮೀಕ್ಷೆ ನಡೆಸಿ,ಇದರೊಂದಿಗೆ ಶಾಲಾ,ಕಾಲೇಜು ಹಂತದಲ್ಲಿ ಕುಷ್ಠ ರೋಗದ ಕುರಿತು ಜಾಗೃತಿ ನಡೆಸಲಾಗುತ್ತದೆ .

ಈ ವರ್ಷದ ಘೋಷವಾಕ್ಯ - ಒಟ್ಟಾಗಿ, ನಾವು ಕುಷ್ಠರೋಗದ ಬಗ್ಗೆ ಜಾಗೃತಿ ಮೂಡಿಸೋಣ, ತಪ್ಪು ಕಲ್ಪನೆಗಳನ್ನು ಹೋಗಲಾಡಿಸೋಣ ಮತ್ತು ಕುಷ್ಠರೋಗದಿಂದ ಯಾರೂ ಬಾಧಿತರಾಗದಂತೆ ನೋಡಿಕೊಳ್ಳೋಣ, ಆಗಿರುತ್ತದೆ ಎಂದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ ಜಾನಕಿ ಜಾತಕದಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರತಿಜ್ಞಾವಿಧಿಯನ್ನು ಬೋಧಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾಕ್ಟರ್ ರೇಣುಪ್ರಸಾದ್ ಜಿಲ್ಲಾ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಡಾ. ಸಿಓ ಸುಧಾ, ಡಾಕ್ಟರ್ ಎನ್ ಕಾಶಿ ಭಾರತೀಯ ವಿಜ್ಞಾನ ಸಂಸ್ಥೆಯ ಮುಖ್ಯಸ್ಥರಾದ ಡಾಕ್ಟರ್ ಮಹುವ ಮತ್ತು ತಂಡ ತಾಲ್ಲೂಕು ಆರೋಗ್ಯ ಅಧಿಕಾರಿ ಡಾಕ್ಟರ್ ಬಿ ವಿ ಗಿರೀಶ್ ತಾಲ್ಲೂಕ ಆರೋಗ್ಯ ಶಿಕ್ಷಣಾಧಿಕಾರಿ ಎನ್‌ಎಸ್ ಮಂಜುನಾಥ್ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ ಮೂಗಪ್ಪ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ವೈ ಟಿ ತಿಪ್ಪೇಸ್ವಾಮಿ, ಚಂದ್ರಣ್ಣ ಕಿರಣ್ ಮಂಜುನಾಥ್, ರಾಜೇಂದ್ರ ಪ್ರಸಾದ್ ಸಹಾಯಕ ಸಾಂಕಿಕ ಅಧಿಕಾರಿ ಮಂಜುನಾಥ್ ಆಶಾ ಕಾರ್ಯಕರ್ತೆಯರು ನರ್ಸಿಂಗ್ ಕಾಲೇಜ್ ವಿದ್ಯಾರ್ಥಿನಿಯರು, ಜಿಲ್ಲಾ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು ಜಾತ ಕಾರ್ಯಕ್ರಮವು ಜಿಲ್ಲಾ ಆಸ್ಪತ್ರೆ ಆವರಣದಿಂದ ಅಂಬೇಡ್ಕರ್ ಸರ್ಕಲ್ ಎಸ್ ಜೆ ಎಂ ಡೆಂಟಲ್ ಕಾಲೇಜ್ ಮುಂಭಾಗದಿಂದ ಸಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ಆನ್‌ಲೈನ್ ಗೇಮ್ಸ್: ಗ್ರಾಮೀಣರ ಬದುಕು ಮೂರಾಬಟ್ಟೆ

• ಉದಯವಾಹಿನಿ ಬೀದರ್

ಆನ್‌ಲೈನ್ ಗೇಮ್ಸ್‌ನಿಂದ ಗ್ರಾಮೀಣರ ಬದುಕು ಅಕ್ಷರಶಃ ಮೂರಾಬಟ್ಟೆಯಾಗುತ್ತಿದೆ.

ಹಿಂದೆ ಇಸ್ಪೀಟ್, ಜೂಜು, ಮಟ್ಕಾದಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದವರು ಈಗ ಆನ್‌ಲೈನ್ ಗೇಮ್ಸ್ ಕಡೆಗೆ ಮುಖ ಮಾಡಿದ್ದಾರೆ.ಪ್ರತಿಯೊಬ್ಬರೂ ಮೊಬೈಲ್ ಬಳಸುತ್ತಿರುವುದರಿಂದ ಆನ್‌ಲೈನ್ ಗೇಮ್ಸ್ ಮೇಲಿನ ವ್ಯಾಮೋಹ ಹೆಚ್ಚಾಗಿದೆ.

ಅದರಲ್ಲೂ ಈ ಆಟದಲ್ಲಿ ಗ್ರಾಮೀಣ ಭಾಗದ ಜನರೇ ಹೆಚ್ಚಾಗಿ ತೊಡಗಿಸಿಕೊಂಡು ಜೀವನ ಹಾಳು ಮಾಡಿಕೊಳ್ಳುತ್ತಿದ್ದಾರೆ. ಕೃಷಿ ಸೇರಿದಂತೆ ಇತರೆ ಕೆಲಸಗಳಿಗೆ ಸಾಲ ಪಡೆದು ಹೆಚ್ಚಿನ ಹಣ ಗಳಿಸಬೇಕೆಂಬ ಉದ್ದೇಶದಿಂದ ಯುವಕರು ಆನ್‌ಲೈನ್ ಗೇಮ್ಸ್ ಆಡಿ ಹಣ ಕಳೆದುಕೊಳ್ಳುತ್ತಿದ್ದಾರೆ. ಸಾಲ ತೀರಿಸಲಾಗದೆ ಸಂಕಷ್ಟಕ್ಕೆ ಒಳಗಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಹೆಚ್ಚಿನ ಆತ್ಮಹತ್ಯೆ ಪ್ರಕರಣಗಳಲ್ಲಿ ಆನ್‌ಲೈನ್ ಗೇಮ್ಸ್‌ಗೆ ಸಂಬಂಧಿಸಿವೆ. ಆದರೆ, ಯಾರೂ ಆ ವಿಷಯ ಬಹಿರಂಗವಾಗಿ

ಉದಯವಾಹಿನಿ ಚಿತ್ರ

ಹೇಳಿಕೊಳ್ಳುತ್ತಿಲ್ಲ.

ಸಮಾಜದಲ್ಲಿ ತಮ್ಮ ಪ್ರತಿಷ್ಠೆಗೆ ಧಕ್ಕೆ ಬರಬಹುದು ಎಂಬ ವಿಚಾರದಿಂದ ಹಿಂದೇಟು ಹಾಕಿಕೊಳ್ಳುತ್ತಿದ್ದಾರೆ. ಗ್ರಾಮೀಣ ಯುವಜನರನ್ನು ಇದರಿಂದ ತಡೆಯಲೂ ಸಾಧ್ಯವಾಗುತ್ತಿಲ್ಲ.

ಡಿಸೆಂಬರ್ 25ರಂದು ಭಾಲ್ಕಿ ತಾಲ್ಲೂಕಿನ ಸಾಯಗಾಂವ ಬಳಿ ಜ್ಯೋತಿ ತಾಂಡಾದ ಸಮೀಪ ವಿಜಯಕುಮಾರ ಹೊಳ್ಳೆ ಎಂಬ 24 ವರ್ಷ ವಯಸ್ಸಿನ ಯುವಕ ಮೈಮೇಲೆ ಪೆಟ್ರೋಲ್ ಸುರಿದುಕೊಂಡು ಜೀವ ಬಿಟ್ಟಿದ್ದ. ಆನ್‌ಲೈನ್ ಗೇಮ್ಸ್‌ನಲ್ಲಿ 10ಲಕ್ಷಕ್ಕೂ ಹೆಚ್ಚು ಹಣ ಕಳೆದುಕೊಂಡು ಹತಾಶನಾಗಿ ಆತ್ಮಹತ್ಯೆ ನಿರ್ಧಾರ ಕೈಗೊಂಡಿದ್ದ. ಬಸವಕಲ್ಯಾಣದಲ್ಲೂ ಇಂತಹುದೇ ಘಟನೆ ನಡೆದಿತ್ತು.

ಮೈಕ್ರೋ ಫೈನಾನ್ಸ್ ಕಿರುಕುಳ, ಅನೇಕರು ಗ್ರಾಮ ತೊರೆದು ವಲಸೆ: ಕಡಿವಾಣಕ್ಕೆ ಕಟ್ಟಿಮನಿ ಆಗ್ರಹ

• ಉದಯವಾಹಿನಿ,ಚಿಂಚೋಳಿ

ಪಟ್ಟಣ ಸೇರಿದಂತೆ ತಾಲ್ಲೂಕಿನಾದ್ಯಂತ ಅನೇಕರು ಮೈಕ್ರೋ ಫೈನಾನ್ಸ್ ಕಿರುಕುಳ ತಾಳಲಾರದೇ ಮನೆಗಳು ಬಿಟ್ಟು ನಗರ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದು ಇದರಿಂದ ಅನೇಕ ಕುಟುಂಬಗಳು ಬೀದಿಪಾಲಾಗಿದ್ದಾರೆ ಇದನ್ನು ತಡೆಗಟ್ಟುವಂತೆ ವಕೀಲರ ಸಂಘದ ಅಧ್ಯಕ್ಷ ಶ್ರೀಮಂತ ಕಟ್ಟಿಮನಿ ಒತ್ತಾಯಿಸಿದರು.

ಪಟ್ಟಣದ

ಮಹಾಕುಂಭ ಮೇಳದ ನಿಯಮಗಳಲ್ಲಿ ಮಹತ್ವದ ಬದಲಾವಣೆ

ಪ್ರಯಾಗರಾಜ್ ಮಹಾಕುಂಭ ಮೇಳ ಕಾಲ್ತುಳಿತ ದುರ್ಘಟನೆ, ಐದು ಪ್ರಮುಖ ಬದಲಾವಣೆ ಜಾರಿಗೆ ತಂದ ಯುಪಿ ಸರ್ಕಾರ

ಪ್ರಯಾಗರಾಜ್: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನ ಮಹಾಕುಂಭ ಮೇಳದಲ್ಲಿ ಸಂಭವಿಸಿರುವ ಕಾಲ್ತುಳಿತ ದುರ್ಘಟನೆಯು, ಕುಂಭ ಮೇಳದ ನಿಯಮಗಳಲ್ಲಿ ಮಹತ್ವದ ಬದಲಾವಣೆಗಳಿಗೆ ಕಾರಣವಾಗಿದೆ. ಸಂಭಾವ್ಯ ಅನಾಹುತಗಳನ್ನು ತಡೆಯಲು ಅಸ್ತಿತ್ವದಲ್ಲಿರುವ ನಿಯಮಗಳಲ್ಲಿ ರಾಜ್ಯ ಸರ್ಕಾರ ಐದು ಪ್ರಮುಖ ಬದಲಾವಣೆಗಳನ್ನು ಮಾಡಿದೆ.

ಇನ್ನುಳಿದಂತೆ ಕ್ರೌಡ್ ಮ್ಯಾನೇಜ್ಮೆಂಟ್ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸಲು, ಐಎಎಸ್ ಅಧಿಕಾರಿಗಳಾದ ಆಶಿಶ್ ಗೋಯಲ್ ಮತ್ತು ಭಾನು ಗೋಸ್ವಾಮಿ ಅವರಿಗೆ ತಕ್ಷಣವೇ ಪ್ರಯಾಗ್ರಾಜ್ ತಲುಪಲು ಸೂಚಿಸಲಾಗಿದೆ. ವಿಜಯ್ ಕಿರಣ್ ಅವರೊಂದಿಗೆ 2019ರ ಅರ್ಧ ಕುಂಭ ಮೇಳವನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಈ ಇಬ್ಬರೂ ಅಧಿಕಾರಿಗಳು ಪ್ರಮುಖ ಪಾತ್ರ ನಿರ್ವಹಿಸಿದ್ದರು. ಭಾನು ಗೋಸ್ವಾಮಿ ಅವರು ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಕುಂಭಮೇಳ ಪ್ರಾಧಿಕಾರದ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದರೆ, ಆಶಿಶ್ ಗೋಯಲ್ ಅವರು ಅಲಹಾಬಾದ್‌ನ ಕಮಿಷನರ್ ರೂಪದಲ್ಲಿ ಇಡೀ ಕುಂಭ ಮೇಳದ ನಿರ್ವಹಣೆಯ ಜವಾಬ್ದಾರಿ ಹೊತ್ತಿದ್ದರು. ಹೆಚ್ಚುವರಿಯಾಗಿ ದೊಡ್ಡ ಪ್ರಮಾಣದ ಈವೆಂಟ್‌ಗಳನ್ನು ನಿರ್ವಹಿಸುವಲ್ಲಿ ನೈಪುಣ್ಯತೆ ಪಡೆದಿರುವ ಐವರು ವಿಶೇಷ ಕಾರ್ಯದರ್ಶಿ ಶ್ರೇಣಿಯ ಅಧಿಕಾರಿಗಳನ್ನು ಮಹಾ ಕುಂಭ ಮೇಳ ಕಾರ್ಯಾಚರಣೆಗಳಿಗೆ ಸಹಾಯ ಮಾಡಲು ನಿಯೋಜಿಸಲಾಗಿದೆ. ಅಯೋಧ್ಯೆ, ಕಾನ್ಪುರ, ಫತೇಪುರ್, ಲಕ್ನೋ, ಪ್ರತಾಪ್‌ಗಢ್ ಮತ್ತು ವಾರಣಾಸಿ ಸೇರಿದಂತೆ ಪ್ರಯಾಗ್‌ರಾಜ್‌ಗೆ ಹೋಗುವ ಪ್ರಮುಖ ಮಾರ್ಗಗಳಲ್ಲಿ ಹೆಚ್ಚಿನ ಗಸ್ತು ಮತ್ತು ಸುವ್ಯವಸ್ಥಿತ ಟ್ರಾಫಿಕ್ ಹರಿವನ್ನು ಕಡ್ಡಾಯಗೊಳಿಸಲಾಗಿದೆ. ತಡರಾತ್ರಿಯ ವಿಡಿಯೋ ಕಾನ್ಫರೆನ್ಸ್‌ನಲ್ಲಿ, ಯೋಗಿ ಆದಿತ್ಯನಾಥ್ ಅವರು ಪ್ರಯಾಗರಾಜ್, ಕೌಶಾಂಬಿ, ವಾರಣಾಸಿ, ಅಯೋಧ್ಯೆ, ಮಿರ್ಜಾಪುರ, ಬಸ್ತಿ, ಜಾನ್‌ಪುರ್ ಮತ್ತು ರಾಯ್ ಬರೇಲಿ ಸೇರಿದಂತೆ ಅನೇಕ ಜಿಲ್ಲೆಗಳ ಹಿರಿಯ ಪೊಲೀಸ್ ಅಧಿಕಾರಿಗಳು ಮತ್ತು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದರು. ಕುಂಭಮೇಳ ಕಾಲ್ತುಳಿತದಲ್ಲಿ ಸಾವಿಗೀಡಾದವರಿಗೆ ತಲಾ 25 ಲಕ್ಷ ರೂ. ಪರಿಹಾರ ಘೋಷಿಸಿದ ಉ. ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ **ನ್ಯಾಯಾಂಗ ಆಯೋಗದಿಂದ ತನಿಖೆ:** ಕಾಲ್ತುಳಿತಕ್ಕೆ ದುರ್ಘಟನೆಗೆ ಕಾರಣಗಳನ್ನು ಪತ್ತೆಹಚ್ಚಲು ಮೂವರು ಸದಸ್ಯರ ನ್ಯಾಯಾಂಗ ಆಯೋಗವನ್ನು ನೇಮಿಸಿ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಆದೇಶ ಹೊರಡಿಸಿದ್ದಾರೆ. ಸಮಿತಿಯಲ್ಲಿ ನ್ಯಾಯಮೂರ್ತಿ ಹರ್ಷ್ ಕುಮಾರ್, ಮಾಜಿ ಮಹಾನಿರ್ದೇಶಕ ವಿಕೆ ಗುಪ್ತಾ ಮತ್ತು ನಿವೃತ್ತ ಐಎಎಸ್ ಅಧಿಕಾರಿ ವಿಕೆ ಸಿಂಗ್ ಇದ್ದಾರೆ. ನ್ಯಾಯಾಂಗ ತನಿಖೆಯ ಜೊತೆಗೆ ಮೃತರ ಕುಟುಂಬಗಳಿಗೆ 25 ಲಕ್ಷ ರೂಪಾಯಿ ಪರಿಹಾರವನ್ನು ಮುಖ್ಯಮಂತ್ರಿ ಘೋಷಿಸಿದ್ದಾರೆ. ಪ್ರಯಾಗರಾಜ್ ಮಹಾಕುಂಭ ಮೇಳದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 30 ಜನರು ಸಾವನ್ನಪ್ಪಿದ್ದು, ಇತರ 60 ಜನರು ಗಂಭೀರವಾಗಿ ಗಾಯಗೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು.

ವಿವಿಐಪಿ ಪಾಸ್ ರದ್ದು

ಯೋಗಿ ಆದಿತ್ಯನಾಥ್ ಪ್ರತಿಕ್ರಿಯೆ

ಕಾಲ್ತುಳಿತ ದುರ್ಘಟನೆ ಬಳಿಕ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಜನಸಂದಣಿ ನಿಯಂತ್ರಣ, ಸಂಚಾರ ನಿರ್ವಹಣೆ ಮತ್ತು ಅಂತರ-ಇಲಾಖೆಯ ಸಮನ್ವಯದ ಮೇಲೆ ಕೇಂದ್ರೀಕರಿಸುವ ಬಹು ಮಾರ್ಗಸೂಚಿಗಳನ್ನು ಹೊರಡಿಸಿದ್ದಾರೆ. ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಮೂಲಕ, ಮಹಾಕುಂಭದ ವ್ಯವಸ್ಥೆಗಳ ಪರಿಶೀಲನೆಗೆ ಸಿಎಂ ಯೋಗಿ ಆದಿತ್ಯನಾಥ್ ಆದೇಶಿಸಿದ್ದಾರೆ.

5 ಪ್ರಮುಖ ಬದಲಾವಣೆಗಳು

1. ಸಂಪೂರ್ಣ ವಾಹನ ರಹಿತ ವಲಯ: ಮಹಾ ಕುಂಭಮೇಳದ ಪ್ರದೇಶದಲ್ಲಿ ಎಲ್ಲಾ ರೀತಿಯ ವಾಹನಗಳ ಪ್ರವೇಶವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. **2. ವಿವಿಐಪಿ ಪಾಸ್ ರದ್ದು:** ಮಹಾಕುಂಭ ಮೇಳಕ್ಕಾಗಿ ವಿತರಿಸಲಾಗುವ ಯಾವುದೇ ವಿಶೇಷ ಪಾಸ್‌ಗಳು ಅಥವಾ ವಿವಿಐಪಿ ಪಾಸ್‌ಗಳನ್ನು ಹಿಂಪಡೆಯಲಾಗಿದೆ. ಯಾವುದೇ ವಿವಿಐಪಿ ವಾಹನ ಪ್ರವೇಶಕ್ಕೂ ಅನುಮತಿ ನೀಡಲಾಗುವುದಿಲ್ಲ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ. **3. ಏಕಮುಖ ಮಾರ್ಗ:** ಭಕ್ತಾದಿಗಳ ಸಂಚಾರ ಸುಗಮಗೊಳಿಸಲು ಏಕಮುಖ ಸಂಚಾರ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಯಾವುದೇ ಕಾರಣಕ್ಕೂ ಸೂಚಿಸಿದ ನಿರ್ದಿಷ್ಟ ಮಾರ್ಗವನ್ನು ಹೊರತುಪಡಿಸಿ ಅನ್ಯ ಮಾರ್ಗಗಳಲ್ಲಿ ಜನರ ಸಂಚಾರವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ. **4. ಜನದಟ್ಟಣೆ ನಿಯಂತ್ರಣ:** ತ್ರಿವೇಣಿ ಸಂಗಮದಲ್ಲಿ ಜನದಟ್ಟಣೆ ಕಡಿಮೆ ಮಾಡಲು ಅಗತ್ಯ ಭದ್ರತಾ ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಪ್ರಯಾಗ್‌ರಾಜ್‌ನಿಂದ ಆಗಮಿಸುವ ಹೆಚ್ಚುವರಿ ವಾಹನಗಳನ್ನು ಜಿಲ್ಲೆಯ ಗಡಿಯಲ್ಲೇ ತಡೆಹಿಡಿಯಲಾಗುತ್ತಿದೆ.
5. ಫೆಬ್ರುವರಿ 4ರವರೆಗೆ ಕಟ್ಟುನಿಟ್ಟಿನ ನಿರ್ಬಂಧ: ಸುಗಮ ಮಹಾಕುಂಭ ಮೇಳವನ್ನು ಖಾತರಿಪಡಿಸಿಕೊಳ್ಳಲು, ಫೆ.4ರವರೆಗೆ ನಾಲ್ಕು ಚಕ್ರದ ವಾಹನಗಳ ನಗರ ಪ್ರವೇಶವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

ವಾಷಿಂಗ್ಟನ್ ಬಳಿ ವಿಮಾನಕ್ಕೆ ಸೇನಾ ಹೆಲಿಕಾಪ್ಟರ್‌ಗೆ ಡಿಕ್ಕಿ

ಆರ್ಲಿಂಗ್ಟನ್ (ಅಮೆರಿಕ) : ವಾಷಿಂಗ್ಟನ್ ಬಳಿಯ ರೊನಾಲ್ಡ್ ರೇಗನ್ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ 60 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿ ಇದ್ದ ಜೆಟ್ ವಿಮಾನಕ್ಕೆ ಸೇನಾ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆದಿದ್ದು ಹಲವರು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

ತುರ್ತು ಪಡೆ, ರಕ್ಷಣಾ ಸಿಬ್ಬಂದಿ ಪೊಟೊಮ್ಯಾಕ್ ನದಿಯಲ್ಲಿ ಶೋಧ ಕಾರ್ಯಾಚರಣೆ ಆರಂಭಿಸಿದ್ದು, ಸಾವುನೋವುಗಳು ಅಥವಾ ಘರ್ಷಣೆಯ ಕಾರಣದ ಬಗ್ಗೆ ತಕ್ಷಣದ ಮಾಹಿತಿ ಲಭ್ಯವಾಗಲಿಲ್ಲ, ಘಟನೆ ನಂತರ ವಾಷಿಂಗ್ಟನ್ ಬಳಿಯ ವಿಮಾನ ನಿಲ್ದಾಣದಿಂದ ಎಲ್ಲಾ ವಿಮಾನಗಳ ಟೇಕ್‌ಆಫ್ ಮತ್ತು ಲ್ಯಾಂಡಿಂಗ್‌ಗಳನ್ನು ನಿಲ್ಲಿಸಲಾಗಿದ್ದು ಪ್ರದೇಶದಾದ್ಯಂತ ಬದುಕುಳಿದವರಿಗಾಗಿ ಹುಡುಕಾಟ ನಡೆದಿದೆ. ವಿಮಾನ ನಿಲ್ದಾಣದ ಉತ್ತರದಲ್ಲಿರುವ ಜಾರ್ಜ್ ವಾಷಿಂಗ್ಟನ್ ಪಾರ್ಕ್‌ವೇ ಉದ್ದಕ್ಕೂ ಪೊಟೊಮ್ಯಾಕ್ ನದಿಯಲ್ಲಿ ರಕ್ಷಣಾ ದೋಣಿಗಳು ಬಿರುಸಿನ ಕಾರ್ಯಾಚರಣೆ ಕೈಗೊಂಡಿದೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಭೀಕರ ಅಪಘಾತದ ಬಗ್ಗೆ ಆಘಾತ ವ್ಯಕ್ತಪಡಿಸಿ ದೇವರು ಅಗಲಿದವರ ಆತ್ಮಗಳನ್ನು ಆಶೀರ್ವದಿಸಲಿ ಎಂದು ಹೇಳಿದ್ದಾರೆ.ಫೆಡರಲ್ ಏವಿಯೇಷನ್ ಅಡಿನಿಸ್ಟ್ರೇಷನ್ ವಿಮಾನ ರಾತ್ರಿ 9 ಗಂಟೆಯ ಸುಮಾರಿಗೆ ಕನ್ಸಾಸ್‌ನ ವಿಚಿಟಾದಿಂದ ಹೊರಟು ರೊನಾಲ್ಡ್ ರೇಗನ್ ರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇ ಸಮೀಪಿಸುತ್ತಿದ್ದಾಗ ಅಮೆರಿಕ ಸೇನೆಯ ಬ್ಲ್ಯಾಕ್‌ಹಾಕ್ ಹೆಲಿಕಾಪ್ಟರ್‌ಗೆ ಡಿಕ್ಕಿ ಹೊಡೆದಿದೆ. ವಿಶ್ವದ ಅತ್ಯಂತ ಬಿಗಿಯಾಗಿ ನಿಯಂತ್ರಿಸಲ್ಪಟ್ಟ ಮತ್ತು ಮೇಲ್ವಿಚಾರಣೆ ಮಾಡಲಾದ ವಾಯುಪ್ರದೇಶದಲ್ಲಿ ಈ ಅಪಘಾತ ಸಂಭವಿಸಿದೆ, ಇದು ಶ್ವೇತಭವನದಿಂದ ದಕ್ಷಿಣಕ್ಕೆ ಕೇವಲ ಮೂರು ಮೈಲಿ ದೂರದಲ್ಲಿದೆ. ಅಮೆರಿಕನ್ ಏರ್‌ಲೈನ್ಸ್ ವಿಮಾನ 5342 ಸುಮಾರು 400 ಅಡಿ ಎತ್ತರದಲ್ಲಿ ಮತ್ತು ಗಂಟೆಗೆ ಸುಮಾರು 140 ಮೈಲುಗಳ ವೇಗದಲ್ಲಿ ಬರುತ್ತಿತ್ತು, ಅದರ ರೇಡಿಯೋ ಟ್ರಾನ್ ಸಪಾಂಡರ್‌ನ ಮಾಹಿತಿಯ ಪ್ರಕಾರ, ಅದು ಪೊಟೊಮ್ಯಾಕ್ ನದಿಯ ಮೇಲೆ ಅಘಾತಗೊಂಡಿದೆ.

ಕೆನಡಾದ ನಿರ್ಮಿತ ಬೊಂಬಾರ್ಡಿಯರ್ -701 ಅವಳಿ-ಎಂಜಿನ್ ಜೆಟ್ ಅನ್ನು 2004 ರಲ್ಲಿ ತಯಾರಿಸಲಾಯಿತು 70 ಜನ ಪ್ರಯಾಣಿಸಬಹುದಾಗಿದೆ. ಇಳಿಯುವ ಕೆಲವು ನಿಮಿಷಗಳ ಮೊದಲು ಅನುಮತಿ ಪಡೆದು ರನ್‌ವೇ 33ರಲ್ಲಿ ಇಳಿಯುತ್ತಿತ್ತು. ಅಪಘಾತಕ್ಕೆ 30 ಸೆಕೆಂಡುಗಳಿಗಿಂತ ಕಡಿಮೆ ಸಮಯ ಮೊದಲು, ವಾಯು ಸಂಚಾರ ನಿಯಂತ್ರಕರು ಹೆಲಿಕಾಪ್ಟರ್ ಕಾಣುತ್ತಿದೆಯೇ ಎಂದು ಕೇಳುತ್ತಾರೆ.ಆದರೆ ಕೆಲವೇ ಸೆಕೆಂಡ್ ನಲ್ಲಿ ಎರಡು ಡಿಕ್ಕಿ ಹೊಡೆದವು.

ಕ್ಸಿ ಬಗ್ಗೆ ಹೇಳು ಎಂದರೆ ನಾ ಒಲ್ಲೆ ಅನ್ನೋ ಡೀಪ್‌ಸೀಕ್

ಬೀಜಿಂಗ್: ಚೀನೀ ಕೃತಕ ಬುದ್ಧಿಮತ್ತೆ ಸ್ಟಾರ್ಟ್‌ಅಪ್ ಡೀಪ್‌ಸೀಕ್, ಇತರ ಚೀನೀ ಮಾದರಿಗಳಂತೆ ಚೀನಾ ಸರ್ಕಾರದ ಸೆನ್ಸಾರ್‌ಶಿಪ್‌ನಿಂದ ನಿರ್ಬಂಧಿತವಾಗಿದೆ ಎಂಬುದು ಇದೀಗ ಬಯಲಾಗಿದೆ.

ರಾಜಕೀಯ ಸೂಕ್ಷ್ಮ ವಿಷಯಗಳನ್ನು ಚರ್ಚಿಸಲು ಡೀಪ್‌ಸೀಕ್ ನಿರಾಕರಿಸುತ್ತದೆ. ಈ ಕುರಿತು ಕೇಳಲಾಗುವ ಪ್ರಶ್ನೆಗೆ ಕ್ಷಮಿಸಿ, ಅದು ನನ್ನ ಪ್ರಸ್ತುತ ವ್ಯಾಪ್ತಿಯನ್ನು ಮೀರಿದೆ.. ಎಂದು ಡೀಪ್‌ಸೀಕ್ ಹೇಳುತ್ತದೆ.

ವಾಯುವ್ಯ ಚೀನಾದ ಪ್ರಾಂತ್ಯದ ಕ್ಸಿನ್‌ಜಿಯಾಂಗ್‌ನಲ್ಲಿ ಉಯ್ಘರ್ ಮುಸ್ಲಿಮರ ಪರಿಸ್ಥಿತಿ ಕುರಿತು, ಡೀಪ್‌ಸೀಕ್ ಚೀನೀ ಸರ್ಕಾರದ ನಿಲುವುಗಳನ್ನೇ ಪ್ರತಿಪಾದಿಸುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ಚಾಟ್‌ಜಿಪಿಟಿ ಮತ್ತು ಜೆಮಿನಿ, ಕ್ಸಿನ್‌ಜಿಯಾಂಗ್‌ನ ಸ್ಥಳೀಯ ಜನಸಂಖ್ಯೆಯ ಸಾಮೂಹಿಕ ಬಂಧನ ಮತ್ತು ಬಲವಂತದ ಸಮೀಕರಣದ ಕುರಿತು, ಅಂತಾರಾಷ್ಟ್ರೀಯ ವರದಿಗಳ ವಿವರವಾದ ಚರ್ಚೆಗಳನ್ನು ಒದಗಿಸುತ್ತದೆ.

ಡೀಪ್‌ಸೀಕ್‌ನ ಸೆನ್ಸಾರ್‌ಶಿಪ್ ಮಾಹಿತಿ

1. ಕ್ಸಿನ್‌ಜಿಯಾಂಗ್ ಉಯ್ಘರ್ ಸಮಸ್ಯೆಗಳು: ಕ್ಸಿನ್‌ಜಿಯಾಂಗ್ ಪ್ರಾಂತ್ಯದ ಉಯ್ಘರ್ ಮುಸ್ಲಿಮರ ಸಮಸ್ಯೆಗಳ ಬಗ್ಗೆ ಪ್ರಶ್ನೆ ಕೇಳಿದರೆ, ಡೀಪ್‌ಸೀಕ್ ಪ್ರದೇಶದ ಸಾಂಸ್ಕೃತಿಕ ಇತಿಹಾಸದ ಸಾಮಾನ್ಯ ಅಂಗೀಕಾರಕ್ಕೆ ಮಾತ್ರ ಒತ್ತು ನೀಡುತ್ತದೆ. ಆದರೆ ಈ ಪ್ರಾಂತ್ಯದಲ್ಲಿ ಆಗುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯ ಆರೋಪಗಳನ್ನು ಪರಿಹರಿಸಲು ಡೀಪ್‌ಸೀಕ್ ನಿರಾಕರಿಸುತ್ತದೆ. ಈ ಕುರಿತು ಕೇಳಲಾಗುವ ಪ್ರಶ್ನೆಗೆ ಕ್ಷಮಿಸಿ, ಅದು ನನ್ನ ಪ್ರಸ್ತುತ ವ್ಯಾಪ್ತಿಯನ್ನು ಮೀರಿದೆ.. ಎಂದು ಡೀಪ್‌ಸೀಕ್ ಹೇಳುತ್ತದೆ.

ಇಕ್ಕೆಲಗಳಲ್ಲಿ ಜನಸಾಗರ, ರಾರಾಜಿಸಿದ ಫ್ಲೆಕ್ಸ್, ಕ್ಷೀರಾಭಿಷೇಕ, ಕಾರಣವೇನು?

ವಿಶಾಖಪಟ್ಟಣ: ಬಹುತೇಕ ಖಾಸಗೀಕರಣದ ಹೊಸ್ತಿಲಲ್ಲಿದ್ದ ಇಲ್ಲಿನ ರಾಷ್ಟ್ರೀಯ ಉಕ್ಕು ಕಾರ್ಖಾನೆ ಅಥವಾ ವೈಜಾಗ್ ಸ್ಟೀಲ್ ಕಾರ್ಖಾನೆಗೆ ಕೇಂದ್ರ ಸರ್ಕಾರ ?11,400 ಕೋಟಿ ಬೃಹತ್ ಪ್ಯಾಕೇಜ್ ಘೋಷಣೆ ಮಾಡಿದ ನಂತರ ಇಲ್ಲಿಗೆ ಆಗಮಿಸಿದ ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಜನತೆ ಅದ್ದೂರಿಯಾಗಿ ಸ್ವಾಗತಿಸಿದರು.

ಗುರುವಾರ ಬೆಳಗ್ಗೆಯೇ ತಿರುಮಲದಲ್ಲಿ ಕುಟುಂಬ ಸಮೇತ ಶ್ರೀ ವೆಂಕಟೇಶ್ವರ ಸ್ವಾಮಿ ಅವರ ದರ್ಶನ ಪಡೆದ ನಂತರ ವಿಶಾಖಪಟ್ಟಣಕ್ಕೆ ಆಗಮಿಸಿದ ಕೇಂದ್ರ ಸಚಿವರನ್ನು ವಿಮಾನ ನಿಲ್ದಾಣದಲ್ಲಿಯೇ ಬಿಜೆಪಿ, ತೆಲುಗು ದೇಶಂ ಪಕ್ಷಗಳ ಸಂಸದರು, ಶಾಸಕರು ಆತ್ಮೀಯವಾಗಿ ಬರಮಾಡಿಕೊಂಡರು.

ಈ ಸಂದರ್ಭದಲ್ಲಿ ಕುಮಾರಸ್ವಾಮಿ ಅವರೊಂದಿಗೆ ಉಕ್ಕು ಖಾತೆ ಸಹಾಯಕ ಸಚಿವ ಹಾಗೂ ಆಂಧ್ರದ ನರಸಾಪುರ ಲೋಕಸಭೆ ಕ್ಷೇತ್ರದ ಸಂಸದ ಭೂಪತಿರಾಜು ಶ್ರೀನಿವಾಸ ವರ್ಮ ಅವರು ಜತೆಯಲ್ಲಿ ಇದ್ದರು. ಕರ್ನಾಟಕ ಬಿಜೆಪಿಯ ಭಿನ್ನಮತದ ಬೆಂಕಿಗೆ ತುಪ್ಪ ಸುರಿದ 'ಅಧ್ಯಕ್ಷರ ಆಯ್ಕೆ' ವಿದ್ಯಮಾನ ಅಲ್ಲದೆ, ಉಕ್ಕು ಕಾರ್ಖಾನೆಯ ಸಾವಿರಾರು ಕಾರ್ಮಿಕರು ಸಚಿವರನ್ನು ಎದುರುಗೊಂಡು ಸ್ವಾಗತಿಸಿದರಲ್ಲದೆ, ಪುಷ್ಪವೃಷ್ಟಿಗರೆದು ಅಭಿನಂದನೆ ಸಲ್ಲಿಸಿದರು.

ಸಂಸದ ಶ್ರೀಭರತ್, ವಿಶಾಖಪಟ್ಟಣ ಭಾಗದ ಸುಮಾರು ಹತ್ತು ಶಾಸಕರು ಸಚಿವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು.

ಬಳಿಕ ವಿಮಾನ ನಿಲ್ದಾಣದಿಂದ ಕಾರ್ಖಾನೆವರೆಗೂ ಹದಿನಾಲ್ಕು ಕಿ.ಮೀ. ದೂರ ರಸ್ತೆಯುದ್ದಕ್ಕೂ ಜನರು ಕೇಂದ್ರ ಸಚಿವರಿಗೆ ಸ್ವಾಗತ ಕೋರಿದರು.

ಇಡೀ ರಸ್ತೆಯ ಇಕ್ಕೆಲಗಳಲ್ಲಿ ಸಚಿವರ ಕಟೌಟ್‌ಗಳು, ಫ್ಲೆಕ್ಸ್‌ಗಳು ರಾಜಿಸುತ್ತಿದ್ದರು.

ವಿಶೇಷವಾಗಿ ಗಾಜುವಾಕ ಸರ್ಕಲ್‌ನಲ್ಲಿ ಕುಮಾರಸ್ವಾಮಿ ಅವರ ಬೃಹತ್ ಕಟೌಟ್‌ಗೆ ಕ್ಷೀರಾಭಿಷೇಕ ಮಾಡಿ ಸಂಭ್ರಮಿಸಿದ ಕಾರ್ಖಾನೆ ಕಾರ್ಮಿಕರು, ವಿಶಾಖ ಉಕ್ಕು ಆಂಧ್ರುಲ ಹಕ್ಕು (ವಿಶಾಖ ಉಕ್ಕು ಆಂಧ್ರರ ಹಕ್ಕು) ನಿನಾದವನ್ನು ನಿಜ ಮಾಡಿದ ಕುಮಾರಸ್ವಾಮಿ ಅವರಿಗೆ ಧನ್ಯವಾದಗಳು ಎನ್ನುವ ಬೃಹತ್ ಬರಹಗಳು ರಾರಾಜಿಸುತ್ತಿದ್ದವು. ಗಾಜುವಾಕ ಸರ್ಕಲ್ ನಲ್ಲಿ ಬಿಜೆಪಿ ಕಾರ್ಯಕರ್ತರು, ಕಾರ್ಮಿಕ ಸಂಘಟನೆಗಳ ಸದಸ್ಯರು ಸಚಿವ ಕುಮಾರಸ್ವಾಮಿ ಅವರಿಗೆ ಬೃಹತ್ ಹಾರ ಹಾಕುವ ತಮ್ಮ ಕೃತಜ್ಞತೆ ಸಲ್ಲಿಸಿದರಲ್ಲದೆ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕುಮಾರಸ್ವಾಮಿ ಅವರ ಘೋಷಣೆಗಳನ್ನು ಕೂಗಿದರು.

2030ರ ವೇಳೆಗೆ ಭಾರತದಲ್ಲಿ ವಾರ್ಷಿಕ 300 ದಶಲಕ್ಷ ಟನ್ ಉಕ್ಕು ಉತ್ಪಾದಿಸುವ ಗುರಿ, ದೃಢ ಸಂಕಲ್ಪ ಪ್ರಧಾನಿಗಳಾದ ನರೇಂದ್ರ ಮೋದಿ ಅವರದ್ದಾಗಿದ್ದು, ಪ್ರಧಾನಿಗಳ ಆಶಯದಂತೆ ಆಂಧ್ರ ಪ್ರದೇಶದ ವೈಜಾಗ್ ಸ್ಟೀಲ್ ಪುನಶ್ಚೇತನಕ್ಕೆ ರೂ.11,400 ಕೋಟಿಗಳ ಬೃಹತ್ ಪ್ಯಾಕೇಜ್ ಘೋಷಿಸಲಾಗಿದೆ. ಇದು ಮೋದಿ ಅವರ ಸರಕಾರ ಕೈಗೊಂಡ ಐತಿಹಾಸಿಕ ನಿರ್ಧಾರವಾಗಿದೆ ಎಂದು ಹೇಳಿದರು.

ದಕ್ಷಿಣ ಸುಡಾನ್‌ನಲ್ಲಿ ಭೀಕರ ವಿಮಾನ ಅಪಘಾತ

ಜುಬಾ: ದಕ್ಷಿಣ ಸೂಡಾನ್‌ನ ಉತ್ತರ ಭಾಗದಲ್ಲಿ ಭೀಕರ ವಿಮಾನ ಅಪಘಾತ ಸಂಭವಿಸಿದ್ದು, ಈ ದುರಂತದಲ್ಲಿ ಕನಿಷ್ಠ 20 ಜನರು ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ದೃಢಪಡಿಸಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಯುನಿಟಿ ಸ್ಟೇಟ್‌ನ ವಾರ್ತಾ ಸಚಿವ ಗಟ್ವೆಚ್ ಬಿಪಲ್ ಬೋತ್, ದುರಂತಕ್ಕೀಡಾದ ವಿಮಾನದಲ್ಲಿ 21 ಜನ ಪ್ರಯಾಣಿಸುತ್ತಿದ್ದು, ಈ ಪೈಕಿ ಒಬ್ಬ ಮಾತ್ರ ಬದುಕುಳಿದಿದ್ದಾನೆ. ಎಂದು ಸ್ಪಷ್ಟಪಡಿಸಿದ್ದಾರೆ.

ಅಪಘಾತಕ್ಕೀಡಾದ ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಎಲ್ಲಾ ಪ್ರಯಾಣಿಕರು ಉಕಟಿಅ ಉದ್ಯೋಗಿಗಳಾಗಿದ್ದರು. ಇವರಲ್ಲಿ 16 ದಕ್ಷಿಣ ಸೂಡಾನ್ ಪ್ರಜೆಗಳು, ಇಬ್ಬರು ಚೀನಾ ಪ್ರಜೆಗಳು ಮತ್ತು ಒಬ್ಬ ಭಾರತೀಯ ಪ್ರಜೆ ಸೇರಿದ್ದಾರೆ.. ಎಂದು ವಾರ್ತಾ ಸಚಿವ ಗಟ್ವೆಚ್ ಬಿಪಲ್ ಬೋತ್ ತಿಳಿಸಿದ್ದಾರೆ. ತುರ್ತು ಲ್ಯಾಂಡಿಂಗ್‌ಗೆ ಮನವಿ ಮಾಡಿದ ಮರುಕ್ಷಣವೇ ವಿಮಾನ ಪತನ; ಕಝಾಕಿಸ್ತಾನದಲ್ಲಿ ಭೀಕರ ದುರಂತ! ವಿಮಾನವು ಸ್ಥಳೀಯ ಸಮಯ ಬೆಳಿಗ್ಗೆ 10.30ಕ್ಕೆ (0830 ರಾಜಧಾನಿ ಜುಬಾಗೆ ಹೊರಟ ಕೆಲವೇ ಕ್ಷಣಗಳಲ್

ರಾಮಾಯಣ ಚಿತ್ರತಂಡಕ್ಕೆ ಸೇರಿಕೊಳ್ಳಲಿದ್ದಾರೆ ಯಶ್

ಟೀಂ ಇಂಡಿಯಾಕ್ಕೆ ಸವಾಲಿನ ಕೆಲಸ

ನ್ಯಾಷನಲ್ ಸ್ಟಾರ್ ಯಶ್ 'ಟಾಕ್ಸಿಕ್' ಸಿನಿಮಾದ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆ. ಇದೆಲ್ಲದರ ನಡುವೆ ಬಾಲಿವುಡ್ 'ರಾಮಾಯಣ' ಸಿನಿಮಾದ ಬಗ್ಗೆ ಬಿಗ್ ಅಪ್‌ಡೇಟ್‌ವೊಂದು ಸಿಕ್ಕಿದೆ. ಈ ಮೂಲಕ ರಾಕಿಂಗ್ ಸ್ಟಾರ್ ಯಶ್ ಫ್ಯಾನ್ಸ್‌ಗೆ ಸಿಹಿ ಸುದ್ದಿ ಸಿಕ್ಕಿದೆ. 'ಟಾಕ್ಸಿಕ್' ಸಿನಿಮಾ ಕೆಲಸ ಭರದಿಂದ ನಡೆಯುತ್ತಿದೆ. ಮುಂಬೈ, ಗೋವಾ ಸೇರಿದಂತೆ ಹಲವೆಡೆ ಈ ಚಿತ್ರದ ಶೂಟಿಂಗ್ ಮಾಡಲಾಗುತ್ತಿದೆ. ಈ ಚಿತ್ರದ ಕೆಲಸದ ನಡುವೆ ಇದೀಗ ರಾವಣನಾಗಿ ಅಬ್ಬರಿಸಲು ಯಶ್ ತಯಾರಿ ಮಾಡಿಕೊಳ್ಳುತ್ತಿದ್ದಾರೆ. ರಣ್‌ಬೀರ್ ಕಪೂರ್, ಸಾಯಿ ಪಲ್ಲವಿ ನಟನೆಯ 'ರಾಮಾಯಣ' ಚಿತ್ರದಲ್ಲಿ ರಾವಣನಾಗಿ ನಟಿಸುವ ಬಗ್ಗೆ ಈಗಾಗಲೇ ಯಶ್ ಅಧಿಕೃತವಾಗಿ ತಿಳಿಸಿದ್ದಾರೆ. ಇದೇ ಮಾರ್ಚ್‌ನಲ್ಲಿ ಯಶ್ 'ರಾಮಾಯಣ' ಚಿತ್ರತಂಡವನ್ನು ಸೇರಿಕೊಳ್ಳಿದ್ದಾರೆ. ಅದಕ್ಕಾಗಿ ತೆರೆಮರೆಯಲ್ಲಿ ಭಾರೀ ತಯಾರಿ ನಡೆಯುತ್ತಿದೆ ಎಂದು ಮಾಧ್ಯಮವೊಂದು ತಿಳಿಸಿದೆ.

ಇನ್ನೂ 'ರಾಮಾಯಣ' ಸಿನಿಮಾಗೆ ಸಹ ನಿರ್ಮಾಪಕನಾಗಿಯೂ ಕೂಡ ಅವರು ಸಾಥ್ ನೀಡುತ್ತಿದ್ದಾರೆ. ಹಾಗಾಗಿ ಈ ಸಿನಿಮಾದ ಮೇಲೆ ಕೂಡ ಭಾರೀ ನಿರೀಕ್ಷೆಯಿದೆ.

ಡಬ್ಬಿಂಗ್ ರೈಟ್ಸ್ ಭಾರಿ ಬೆಲೆಗೆ ಮಾರಾಟ!

ನಟ ರಿಷಿ ಅಭಿನಯದ 'ರುದ್ರ ಗರುಡ ಪುರಾಣ' ಬಿಡುಗಡೆಯಾಗಿ ಸುಮಾರು ಒಂದು ವಾರ ಕಳೆದಿದೆ. ದಿನದಿಂದ ದಿನಕ್ಕೆ ಸ್ಕ್ರೀನ್ ಸಂಖ್ಯೆ ಹೆಚ್ಚುತ್ತಿದ್ದು, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗುತ್ತಿದೆ. ಚಿತ್ರದ ಈ ಯಶಸ್ಸನ್ನು ಆಚರಿಸಲು ಚಿತ್ರತಂಡ ಇತ್ತೀಚೆಗೆ ಒಂದೆಡೆ ಸೇರಿತ್ತು. ನಿರ್ಮಾಪಕ ಲೋಹಿತ್ ಮಾತನಾಡಿ, 'ಈ ಚಿತ್ರವನ್ನು ಸಾಕಷ್ಟು ಉತ್ಸಾಹದಿಂದ ಮಾಡಲಾಗಿದೆ ಮತ್ತು ಇದು ಪ್ರೇಕ್ಷಕರಿಗೆ ಇಷ್ಟವಾಗಿರುವುದನ್ನು ನೋಡುವುದು ನಿಜವಾಗಿಯೂ ಲಾಭದಾಯಕವಾಗಿದೆ. ಹೆಚ್ಚುತ್ತಿರುವ ಥಿಯೇಟರ್‌ಗಳ ಸಂಖ್ಯೆ ಅದರ ಯಶಸ್ಸಿಗೆ ಸಾಕ್ಷಿಯಾಗಿದೆ' ಎನ್ನುತ್ತಾರೆ. ನಿರ್ದೇಶಕ ನಂದೀಶ್ ಮಾತನಾಡಿ, ಈ ಚಿತ್ರದ ಯಶಸ್ಸಿಗೆ ಸಾಮೂಹಿಕ ಪ್ರಯತ್ನವೇ ಕಾರಣವಾಗಿದೆ. ಪ್ರತಿಯೊಬ್ಬ ನಟ ಮತ್ತು ತಂತ್ರಜ್ಞರು ಈ ಯೋಜನೆಗಾಗಿ ಉತ್ತಮವಾಗಿ ಕೆಲಸ ಮಾಡಿದ್ದಾರೆ. ಮಾಧ್ಯಮಗಳ ಬೆಂಬಲ ಮತ್ತು ಪ್ರೇಕ್ಷಕರ ಮೆಚ್ಚುಗೆಯ ಮಾತುಗಳು ಈ ಪ್ರಯಾಣಕ್ಕೆ ಸಹಕಾರಿಯಾಗಿದೆ' ಎಂದು ಹೇಳಿದರು. ನಟ ರಿಷಿ, ತಮ್ಮ ಕೃತಜ್ಞತೆಗಳನ್ನು ವ್ಯಕ್ತಪಡಿಸಿದರು. 'ಚಿತ್ರವನ್ನು ವಿಮರ್ಶಿಸಿದ ವಿಮರ್ಷಕರಿಗೆ ನಾನು ಮೊದಲು ಧನ್ಯವಾದ ಹೇಳಲು ಬಯಸುತ್ತೇನೆ. ಅವರ ಮಾತುಗಳು ಹೆಚ್ಚು ಪ್ರೇಕ್ಷಕರನ್ನು ಚಿತ್ರಮಂದಿರಗಳತ್ತ ಸೆಳೆದಿವೆ. ಚಿತ್ರ ಬಿಡುಗಡೆಯಾದ ಐದು ದಿನಗಳಲ್ಲಿ, ಹೆಚ್ಚಿನ ಚಿತ್ರಮಂದಿರಗಳಲ್ಲಿ ಪ್ರದರ್ಶನ ಕಾಣುತ್ತಿದೆ ಮತ್ತು ಈಗ ತೆಲುಗು ಡಬ್ಬಿಂಗ್ ಹಕ್ಕು ಹೆಚ್ಚಿನ ಮೊತ್ತಕ್ಕೆ ಮಾರಾಟವಾಗಿದೆ' ಎಂದರು.

ಮೋಕ್ಷಿತಾ ಪೈ ನಿಜವಾದ ಹೆಸರು

ಬಿಗ್ ಬಾಸ್ ಸೀಸನ್ 11ರಲ್ಲಿ ನಟಿ ಮೋಕ್ಷಿತಾ ಸ್ಟ್ರಾಂಗ್ ಕಂಟೆಸ್ಟೆಂಟ್ ಆಗಿದ್ರು. ಭಾರೀ ಪೈಪೋಟಿ ನೀಡಿ ಫಿನಾಲೆಗೆ ಬಂದಿದ್ರು. ಆದ್ರೆ ಕಪ್ ಗೆಲ್ಲಲು ಸಾಧ್ಯವಾಗಲಿಲ್ಲ. ಇದೀಗ ನಟಿ ತನ್ನ ಮೇಲೆ ಬಂದಿದ್ದ ಮಕ್ಕಳ ಕಳ್ಳಿ ಅನ್ನೋ ಆರೋಪ ಬಗ್ಗೆ ಮಾತಾಡಿದ್ರು. ಜೊತೆಗೆ ಹೆಸರು ಬದಲಿಸಿಕೊಂಡಿದ್ಯಾಕೆ ಎನ್ನುವುದನ್ನು ಕೂಡ ತಿಳಿಸಿದ್ದಾರೆ. ಬಿಗ್ ಬಾಸ್ ಫಿನಾಲೆವರೆಗೂ ಬಂದು ಕಪ್ ಗೆಲ್ಲುವ ಚಾನ್ಸ್ ಮಿಸ್ ಮಾಡಿಕೊಂಡ ಮೋಕ್ಷಿತಾ ಪೈ, ಫಿನಾಲೆವರೆಗೂ ಕರೆದಕೊಂಡು ಬಂದ ಅಭಿಮಾನಿಗಳಿಗೆ ಥ್ಯಾಂಕ್ಸ್ ಹೇಳಿದ್ರು. ಸಂದರ್ಶನವೊಂದರಲ್ಲಿ ಮಾತಾಡಿದ ಮೋಕ್ಷಿತಾ, ತನ್ನ ಮೇಲೆ ಬಂದ ಆರೋಪಗಳ ಜೊತೆಗೆ ಹೆಸರು ಬದಲಿಸಿಕೊಂಡಿದ್ಯಾಕೆ ಅನ್ನೋದನ್ನು ತಿಳಿಸಿದ್ದಾರೆ. ಮಕ್ಕಳನ್ನು ಅಪಹರಿಸಿದ ಐಶ್ವರ್ಯಾ ಎನ್ನುವ ಆರೋಪ ಹೊತ್ತಿದ್ದ ನಟಿ ಬಳಿಕ ತನ್ನ ಹೆಸರನ್ನು ಬದಲಿಸಿಕೊಂಡಿದ್ದು ಯಾಕೆ ಎನ್ನುವ ಪ್ರಶ್ನೆಗೆ ನಟಿ ಉತ್ತರ ನೀಡಿದ್ದಾರೆ. ಪಾರು ಸೀರಿಯಲ್ ಅವಕಾಶ ಸಿಕ್ಕ ಬಳಿಕ ನಾನು ಹೆಸರು ಬದಲಿಸಿಕೊಂಡೆ ಎಂದಿದ್ದಾರೆ. ಐಶ್ವರ್ಯಾ ಪೈ ಆಗಿದ್ದವರು ಬಳಿಕ ಮೋಕ್ಷಿತಾ ಪೈ ಆಗಿ ಬದಲಾದ್ರು. ಕಾರಣ ಕೂಡ ಇದೆ ಎಂದ ನಟಿ, ನನ್ನ ತಾಯಿ ನನಗೆ ಸಂಖ್ಯಾಶಾಸ್ತ್ರದ ಪ್ರಕಾರ ಹೆಸರು ಇಟ್ಟಿರಲಿಲ್ಲ ಎಂದ್ರು.

ಮದುವೆ ಬಳಿಕ ಮತ್ತೆ ಬಣ್ಣ ಹಚ್ಚಿದ ಸೋನಲ್

ಸ್ಯಾಂಡಲ್‌ವುಡ್‌ನ ನಟಿ ಸೋನಲ್ ಮಂಥೆರೋ ಮದುವೆ ಆದ್ಮೇಲೆ ಏನ್ ಮಾಡ್ತಿದ್ದಾರೆ. ಯಾವುದೇ ಸಿನಿಮಾಗಳನ್ನೆ ಒಪ್ಪಲೇ ಇಲ್ವೇ ಗಂಡ ಮತ್ತು ಮನೆ ಅಂತ ಕಳೆದು ಹೋದ್ರೇ ನೋ ವೇ ಚಾನ್ಸೆ ಇಲ್ಲ ನೋಡಿ. ಯಾಕೆಂದ್ರೆ, ಪತಿ ತರುಣ್ ಸುಧೀರ್ ಆ ರೀತಿ ಏನೂ ಇಲ್ಲ. ಸೋನಲ್ ಮಂಥೆರೋ ಕಲಾಸ್ತಕಿ ಬಗ್ಗೆ ತಿಳಿದುಕೊಂಡಿದ್ದಾರೆ. ಹೌದು, ಸೋನಲ್ ಮತ್ತು ಪ್ರಜ್ವಲ್ ದೇವರಾಜ್ ಅಭಿನಯದ ರಾಕ್ಷಸ ಚಿತ್ರ ರಿಲೀಸ್ ಅನೌನ್ಸ್ ಆಗಿದೆ. ಫೆಬ್ರವರಿ-26 ರಂದು ಈ ಚಿತ್ರ ರಿಲೀಸ್ ಆಗುತ್ತಿದೆ. ವಿಶೇಷವಾಗಿ ಈ ದಿನ ಶಿವರಾತ್ರಿ ಕೂಡ ಇದೆ. ಹಾಗಾಗಿಯೇ ಈ ಚಿತ್ರ ವಿಶೇಷ ದಿನವೇ ರಿಲೀಸ್ ಆಗುತ್ತಿದೆ ಅಂತಲೂ ಹೇಳಬಹುದು.

ಸೋನಲ್ ಮಂಥೆರೋ ಮತ್ತು ಪ್ರಜ್ವಲ್ ದೇವರಾಜ್ ಅಭಿನಯದ ಈ ಚಿತ್ರದಲ್ಲಿ ಇನ್ನು ಹಲವು ಕಲಾವಿದರು ಅಭಿನಯಿಸಿದ್ದಾರೆ. ಶೋಭಾರಾಜ್, ವತ್ಸಲಾ ಮೋಹನ್, ಸಿದ್ಲಿಂಗು ಶ್ರೀಧರ್, ಆರ್ನ ರಾಥೋಡ್ ಹೀಗೆ ಈ ಎಲ್ಲಾ ಕಲಾವಿದರು ಇದರಲ್ಲಿದ್ದಾರೆ ಅಂತಲೇ ಹೇಳಬಹುದು. ರಾಕ್ಷಸ ಚಿತ್ರಕ್ಕೆ ಜೇಬಿನ್ ಪಿ ಜೋಕಬ್ ಕ್ಯಾಮರಾವರ್ಕ್ ಮಾಡಿದ್ದಾರೆ. ವಿನೋದ್ ಸಾಹಸ ನಿರ್ದೇಶನ ಇದೆ. ವರುಣ್ ಉನ್ನಿ ಸಂಗೀತ ನಿರ್ದೇಶಕ ಮಾಡಿದ್ದಾರೆ. ಅವಿನಾಶ್ ಬಸುತ್ಕರ್ ಹಿನ್ನೆಲೆ ಸಂಗೀತ ಕೊಟ್ಟಿದ್ದಾರೆ. ಇವರೆಲ್ಲ ಈ ಚಿತ್ರದಲ್ಲಿ ಬಳಕೆ ಮಾಡಿರೋ ಟೈಮ್ ಲೂಪ್ ಕಾನ್ಸೆಪ್ಟ್ ವಿಶೇಷವಾಗಿಯೇ ಇದೆ.

ಸಿನಿ ವಾಹಿನಿ

ಹೊಸ ಸಿನಿಮಾದ ಮಾಹಿತಿ ಕೊಟ್ಟ ತರುಣ್ ಪತ್ನಿ

ನನ್ನ ಜೀವನದಲ್ಲಿ ಪ್ರತಿಯೊಬ್ಬರೂ ಸ್ಪೆಷಲ್

ಮೈಯೋಸಿಟಿಸ್ ಕಾಯಿಲೆಯಿಂದ ಬಳಲುತ್ತಿದ್ದ ನಟಿ ಸಮಂತಾ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ಚಿಕಿತ್ಸೆ ಪಡೆಯಲೆಂದು ಸ್ಯಾಮ್ ಒಂದು ವರ್ಷ ಸಿನಿಮಾಗಳಿಂದ ದೂರ ಉಳಿದಿದ್ರು. ಸ್ಯಾಮ್ ಇದೀಗ ಸರಣಿ ಚಿತ್ರಗಳಿಗೆ ಕಮಿಟ್ ಆಗ್ತಿದ್ದಾರೆ. ಟಾಲಿವುಡ್ ಸ್ಟಾರ್ ನಟಿಯಾಗಿರುವ ಸಮಂತಾ, ತೆಲುಗು ಮತ್ತು ತಮಿಳಿನಲ್ಲಿ ಸಾಕಷ್ಟು ಅಭಿಮಾನಿಗಳನ್ನು ಹೊಂದಿದ್ದಾರೆ. ತೆಲುಗಿನಲ್ಲಿ ಶಿವ ನಿರ್ವಾಣ ನಿರ್ದೇಶನದ ಖುಷಿ ಚಿತ್ರದಲ್ಲಿ ನಟಿಸಿದ್ದರು. ಈ ಚಿತ್ರದಲ್ಲಿ ನಟ ವಿಜಯ್ ದೇವರಕೊಂಡಗೆ ಸಮಂತಾ ಜೋಡಿಯಾಗಿದ್ರು.

ಈ ಚಿತ್ರ ತೆಲುಗು ಮಾತ್ರವಲ್ಲದೆ ತಮಿಳು, ಮಲಯಾಳಂ ಮತ್ತು ಕನ್ನಡದಂತಹ ಭಾಷೆಗಳಲ್ಲಿ ಬಿಡುಗಡೆಯಾಗಿ ಪ್ರೇಕ್ಷಕರ ಮನಗೆದ್ದಿತ್ತು. ಆ ಸಿನಿಮಾದ ನಂತರ ನಟಿ ಸಮಂತಾ ಆರೋಗ್ಯ ಸಮಸ್ಯೆಯಿಂದ 1 ವರ್ಷ ಸಿನಿಮಾದಿಂದ ದೂರ ಉಳಿದಿದ್ದರು. ಸಿನಿಮಾದಿಂದ ವಿರಾಮ ತೆಗೆದುಕೊಂಡರು. ಸೋಶಿಯಲ್ ಮೀಡಿಯಾದಲ್ಲಿ ಸಮಂತಾ ಆಯಕ್ಟಿವ್ ಆಗೊದ್ದಾರೆ. ಫೋಟೋಗಳು ಮತ್ತು ವಿಡಿಯೊಗಳನ್ನು ಹಂಚಿಕೊಳ್ಳುವ ಮೂಲಕ ತನ್ನ ಅಭಿಮಾನಿಗಳಿಗೆ ಹತ್ತಿರವಾಗಿದ್ದಾರೆ. ಇದೀಗ ಸ್ಯಾಮ್ ಮತ್ತೆ ಸಿನಿಮಾಗಳಲ್ಲಿ ಬ್ಯುಸಿಯಾಗಲಿದ್ದಾರೆ. ಎರಡ್ಮೂರು ಸಿನಿಮಾಗಳಿಗೆ ಗ್ರೀನ್ ಸಿಗ್ನಲ್ ಕೂಡ ಕೊಟ್ಟಿದ್ದಾರೆ. ಸ್ನೇಹಿತೆಯ ಪತಿ ಬಗ್ಗೆ ಸಮಂತಾ ಮಾಡಿರುವ ಕಮೆಂಟ್ ಗಳು ವೈರಲ್ ಆಗುತ್ತಿವೆ. ಚಿನ್ಮಯಿ ಅವರ ಪತಿ ರಾಹುಲ್ ರವೀಂದ್ರನ್ ಅವರು ಸಮಂತಾ ಅವರಿಗೆ ಆತ್ಮೀಯ ಸ್ನೇಹಿತನಾಗಿದ್ದಾರೆ. ನಾನು ಮೈಯೋಸಿಟಿಸ್ ಗೆ ಚಿಕಿತ್ಸೆ ಪಡೆಯುತ್ತಿದ್ದಾಗ ಪ್ರತಿದಿನ ತನ್ನ ಬಳಿ ನನಗೆ ಧೈರ್ಯ ಹೇಳ್ತಿದ್ರು. ನನ್ನೊಂದಿಗೆ ಸ್ವಲ್ಪ ಸಮಯ ಕಳೆದು ನನ್ನನ್ನು ಕೂಡ ನಕ್ಕು ನಲಿಸುತ್ತಿದ್ದರು. ಚಿನ್ಮಯಿ ಕೂಡ ತನ್ನ ಆತ್ಮೀಯ ಸ್ನೇಹಿತೆಯಾಗಿದ್ರು. ಜೀವನದಲ್ಲಿ ನಾನು ಅವರನ್ನು ಎಂದಿಗೂ ಬಿಟ್ಟುಕೊಡುವುದಿಲ್ಲ ಎಂದಿದ್ದಾರೆ ನಟಿ ಸಮಂತಾ.

ಟೀಂ ಇಂಡಿಯಾಕ್ಕೆ ಟೆನ್ಷನ್ ಶುರು; ಪುಣೆ, ಮುಂಬೈನಲ್ಲಿನ ಪ್ರದರ್ಶನವೇ ಇದಕ್ಕೆ ಕಾರಣ

ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯ ಮೊದಲೆರಡು ಪಂದ್ಯಗಳನ್ನು ನೀರು ಕುಡಿದಷ್ಟೇ ಸುಲಭವಾಗಿ ಗೆದ್ದುಕೊಂಡಿದ್ದ ಟೀಂ ಇಂಡಿಯಾ, ರಾಜ್‌ಕೋಟ್‌ನಲ್ಲಿ ನಡೆದ ಮೂರನೇ ಟಿ20ಯಲ್ಲಿ 26 ರನ್‌ಗಳ ಅಂತರದಿಂದ ಸೋಲನುಭವಿಸಿತ್ತು. ಗೆಲುವಿಗೆ 171 ರನ್‌ಗಳ ಗುರಿ ಬೆನ್ನಟ್ಟಿದ ಟೀಂ ಇಂಡಿಯಾಕ್ಕೆ ಬ್ಯಾಟ್ಸ್‌ಮನ್‌ಗಳ ಕಳಪೆ ಪ್ರದರ್ಶನ ಸೋಲಿನ ಆಘಾತ ನೀಡಿತು. ಇದೀಗ ನಾಲ್ಕನೇ ಮತ್ತು ಐದನೇ ಪಂದ್ಯಕ್ಕೆ ತಯಾರಿ ನಡೆಸಿರುವ ಸೂರ್ಯ ಪಡೆಗೆ ಸರಣಿ ಸೋಲಿನ ಆತಂಕ ಎದುರಾಗಿದೆ. ಇದಕ್ಕೆ ಕಾರಣ ಕೊನೆಯ ಎರಡು ಪಂದ್ಯಗಳು ನಡೆಯುವ ಮೈದಾನದಲ್ಲಿ ತಂಡದ ಕಳಪೆ ಪ್ರದರ್ಶನ.

ಪುಣೆ, ಮುಂಬೈನಲ್ಲಿ ಪ್ರದರ್ಶನ ಅಷ್ಟಕಷ್ಟೆ

ಸದ್ಯ ಇಂಗ್ಲೆಂಡ್ ವಿರುದ್ಧದ 5 ಪಂದ್ಯಗಳ ಟಿ20 ಸರಣಿಯಲ್ಲಿ ಟೀಂ ಇಂಡಿಯಾ 2-1 ಮುನ್ನಡೆ ಸಾಧಿಸಿದೆ. ರಾಜ್‌ಕೋಟ್‌ನಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ ಸೋಲನುಭವಿಸದೇ ಇದ್ದಿದ್ದರೆ ಸರಣಿ ಟೀಂ ಇಂಡಿಯಾದ ಕೈಸೇರುತ್ತಿತ್ತು. ಆದರೆ ಮೂರನೇ ಟಿ20ಯಲ್ಲಿ ಇಂಗ್ಲೆಂಡ್ ತಂಡದ ಕೆಳಕ್ರಮಾಂಕದ ಬ್ಯಾಟರ್‌ಗಳು 20 ರನ್‌ಗಳ ಜೊತೆಯಾಟ ನಡೆಸಲು ಅವಕಾಶ ಮಾಡಿಕೊಟ್ಟಿದ ಭಾರತ ತಂಡಕ್ಕೆ ಕೊನೆಯಲ್ಲಿ 26 ರನ್‌ಗಳ ಸೋಲು ಎದುರಾಗಿತ್ತು. ಒಂದು ವೇಳೆ ಆ ಜೊತೆಯಾಟ ಬರದಿದ್ದರೆ, ಟೀಂ ಇಂಡಿಯಾಕ್ಕೆ ಗುರಿ ಮತ್ತಷ್ಟು ಕಡಿಮೆಯಾಗುತ್ತಿದ್ದರಿಂದ ತಂಡ ಗೆಲ್ಲುವ ಸಾಧ್ಯತೆಗಳು ಹೆಚ್ಚಿರುತ್ತಿದ್ದವು. ಆದರೆ ತನ್ನ ತಪ್ಪಿಗೆ ಸೋಲಿನ ದಂಡ ತೆತ್ತಿರುವ ಟೀಂ ಇಂಡಿಯಾಕ್ಕೆ ಕೊನೆಯ ಎರಡು ಪಂದ್ಯಗಳನ್ನು ಸೋಲುವ ಭೀತಿ ಎದುರಾಗಿದೆ.

ಪುಣೆಯಲ್ಲಿ ಇಂಗ್ಲೆಂಡ್ ವಿರುದ್ಧ ಭಾರತ ನಾಲ್ಕನೇ ಟಿ20 ಆಡಬೇಕಿದೆ. ಆದರೆ, ಈ ಮೈದಾನದಲ್ಲಿ ಟೀಂ ಇಂಡಿಯಾದ ದಾಖಲೆ ನೋಡಿದರೆ ಗೆಲುವಿನ ಸಾಧ್ಯತೆಗಳು ತೀರ ಕಡಿಮೆ. ಏಕೆಂದರೆ ಭಾರತ ಇದುವರೆಗೆ ಪುಣೆಯಲ್ಲಿ 4 ಟಿ20 ಪಂದ್ಯಗಳನ್ನು ಆಡಿದ್ದು, 2ರಲ್ಲಿ ಸೋಲು ಕಂಡಿದೆ. ಹೀಗಿರುವಾಗ ಟೀಂ ಇಂಡಿಯಾ ಗೆಲುವಿನ ಬಗ್ಗೆ ಸಂಪೂರ್ಣ ಭರವಸೆ ನೀಡಲು ಸಾಧ್ಯವಿಲ್ಲ. ಅದರಲ್ಲೂ ಹಿಂದೆಂದೂ ಟಿ20 ಪಂದ್ಯ ಆಡದ ರಾಜ್ ಕೋಟ್‌ನಲ್ಲಿ ಇಂಗ್ಲೆಂಡ್ ತಂಡ ಪಂದ್ಯ ಗೆದ್ದು ಬರುತ್ತಿದೆ.

ಮುಂಬೈನಲ್ಲಿ ಇಂಗ್ಲೆಂಡ್ ಎದುರು ಸೋಲು

ಇದೀಗ ಪುಣೆಯಲ್ಲಿ ನಡೆಯಲಿರುವ ನಾಲ್ಕನೇ ಟಿ20ಯಲ್ಲಿ ಭಾರತ ಗೆಲುವು ಸಾಧಿಸದಿದ್ದರೆ ಸರಣಿ ಗೆಲ್ಲುವ ಆಸೆಯೊಂದಿಗೆ ಸೂರ್ಯ ಪಡೆ ಮುಂಬೈ ಅಂಗಳಕ್ಕೆ ಕಾಲಿಡಲಿದೆ. ಮುಂಬೈನಲ್ಲಿ ನಡೆಯಲಿರುವ 5ನೇ ಟಿ20 ಎರಡೂ ತಂಡಗಳಿಗೆ ನಿರ್ಣಾಯಕವಾಗಲಿದೆ. ಏಕೆಂದರೆ ಪುಣೆಯಲ್ಲೂ ಇಂಗ್ಲೆಂಡ್ ಗೆದ್ದರೆ ಸರಣಿ 2-2ರಲ್ಲಿ ಸಮಬಲವಾಗಲಿದೆ. ಈಗ ಆ ಪರಿಸ್ಥಿತಿಯಲ್ಲಿ ಮುಂಬೈನಲ್ಲಿ ಟೀಂ ಇಂಡಿಯಾ ಗೆಲುವು ದಾಖಲಿಸಲು ಸಾಧ್ಯವೇ ಎಂಬುದು ಪ್ರಮುಖ ಪ್ರಶ್ನೆಯಾಗಿದೆ.

ಪುಣೆಯಲ್ಲಿ ಗೆಲುವಿನ ಭರವಸೆ ಫಿಫ್ಟಿ-ಫಿಫ್ಟಿ!

ಶಾರ್ದೂಲ್ ಠಾಕೂರ್ ಹ್ಯಾಟ್ರಿಕ್ ವಿಕೆಟ್

ಒಂದೆಡೆ ಟೀಂ ಇಂಡಿಯಾದ ಸ್ಟಾರ್ ಆಟಗಾರರು ರಣಜಿ ಟ್ರೋಫಿಯಲ್ಲಿ ಧಯನೀಯವಾಗಿ ವಿಫಲರಾಗುತ್ತಿದ್ದರೆ, ಮತ್ತೊಂದೆಡೆ ಟೀಂ ಇಂಡಿಯಾದಲ್ಲಿ ಸ್ಥಾನ ಪಡೆಯುವ ಸಲುವಾಗಿ ಇತರೆ ಆಟಗಾರರು ಭರ್ಜರಿ ಪ್ರದರ್ಶನ ನೀಡುತ್ತಿದ್ದಾರೆ. ಅವರುಗಳಲ್ಲಿ ವೇಗದ ಬೌಲಿಂಗ್ ಆಲ್ ರೌಂಡರ್ ಶಾರ್ದೂಲ್ ಠಾಕೂರ್ ಕೂಡ ಒಬ್ಬರು. ರಣಜಿ ಟ್ರೋಫಿಯಲ್ಲಿ ತಮ್ಮ ಪ್ರದರ್ಶನದ ಮೂಲಕ ಮತ್ತೊಮ್ಮೆ ಎಲ್ಲಾರ ಗಮನ ಸೆಳೆಯುವಲ್ಲಿ ಶಾರ್ದೂಲ್ ಯಶಸ್ವಿಯಾಗಿದ್ದಾರೆ.

ರಣಜಿಯಲ್ಲಿ ಮುಂಬೈ ಪರ ಆಡುತ್ತಿರುವ ಶಾರ್ದೂಲ್ ಕಳೆದ ಪಂದ್ಯದಲ್ಲಿ ಭರ್ಜರಿ ಬ್ಯಾಟಿಂಗ್ ನಡೆಸಿದ್ದರು. ಜಮ್ಮು ಮತ್ತು ಕಾಶ್ಮೀರ ವಿರುದ್ಧದ ಪಂದ್ಯದಲ್ಲಿ ರೋಹಿತ್, ಶ್ರೇಯಸ್, ರಹಾನೆ, ಯಶಸ್ವಿ ಜೈಸ್ವಾಲ್‌ರಂತಹ ಸ್ಟಾರ್ ಆಟಗಾರರ ವೈಫಲ್ಯದ ನಡುವೆಯೂ ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕದ ಇನ್ನಿಂಗ್ಸ್ ಆಡಿದ್ದ ಶಾರ್ದೂಲ್ ಎರಡನೇ ಇನ್ನಿಂಗ್ಸ್‌ನಲ್ಲಿ ಶತಕ ಗಳಿಸಿದ್ದರು. ಆದಾಗ್ಯೂ ತಂಡದ ಸೋಲನ್ನು ತಪ್ಪಿಸಲು ಸಾಧ್ಯವಾಗಿರಲಿಲ್ಲ.

ಆದರೀಗ ಇಂದಿನಿಂದ ಆರಂಭವಾಗಿರುವ ಮೇಘಾಲಯ ವಿರುದ್ಧದ ಪಂದ್ಯದಲ್ಲಿ ಬೌಲಿಂಗ್‌ನಲ್ಲಿ ಕಮಾಲ್ ಮಾಡಿರುವ ಶಾರ್ದೂಲ್ ಹ್ಯಾಟ್ರಿಕ್ ವಿಕೆಟ್ ಪಡೆದು ಎದುರಾಳಿ ತಂಡ ಮಂಡಿಯೂರುವಂತೆ ಮಾಡಿದ್ದಾರೆ. ಶಾರ್ದೂಲ್ ಅವರ ಮಾರಕ ಬೌಲಿಂಗ್‌ಗೆ ತತ್ತರಿಸಿದ ಮೇಘಾಲಯ ತಂಡದ ಅರ್ಧದಷ್ಟು ಆಟಗಾರರು ಎರಡಂಕಿ ಮೊತ್ತ ದಾಟಲಾಗದೆ ಪೆವಿಲಿಯನ್ ಸೇರಿಕೊಂಡಿದ್ದಾರೆ.

ಈ ಮೂಲಕ ಶಾರ್ದೂಲ್ ಠಾಕೂರ್ ರಣಜಿ ಟ್ರೋಫಿಯಲ್ಲಿ ಮುಂಬೈ ಪರ ಹ್ಯಾಟ್ರಿಕ್ ವಿಕೆಟ್ ಪಡೆದ ಐದನೇ ಬೌಲರ್ ಎನಿಸಿಕೊಂಡಿದ್ದಾರೆ. ಮುಂಬೈ ಮತ್ತು ಮೇಘಾಲಯ ನಡುವಿನ ಈ ಪಂದ್ಯ ಶರದ್ ಪವಾರ್ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆಯುತ್ತಿದೆ. ಈ ಪಂದ್ಯದಲ್ಲಿ ಮುಂಬೈ ನಾಯಕ ಅಜಿಂಕ್ಯ ರಹಾನೆ ಟಾಸ್ ಗೆದ್ದು ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು. ಮುಂಬೈ ಪರ ದಾಳಿಗಿಳಿದ ಶಾರ್ದೂಲ್ ಠಾಕೂರ್ ಮತ್ತು ಮೋಹಿತ್ ಅವಸ್ಥಿ ಮೇಘಾಲಯ ಆಟಗಾರರನ್ನು ರನ್‌ಗಾಗಿ ಪರದಾಡುವಂತೆ ಮಾಡಿದರು. ಶಾರ್ದೂಲ್ ಮೊದಲ ಓವರ್‌ನ ನಾಲ್ಕನೇ ಎಸೆತದಲ್ಲಿ ನಿಶಾಂತ್ ಚಕ್ರವರ್ತಿ ಅವರನ್ನು ಔಟ್ ಮಾಡುವ ಮೂಲಕ ಮೇಘಾಲಯಕ್ಕೆ ಮೊದಲ ಹೊಡೆತ ನೀಡಿದರು. ಎರಡನೇ ಓವರ್‌ನಲ್ಲಿ ಮೋಹಿತ್ ಒಂದು ವಿಕೆಟ್ ಪಡೆದರು. ಇದಾದ ನಂತರ ಮೂರನೇ ಓವರ್‌ನ ಮೊದಲ 3 ಎಸೆತಗಳಲ್ಲಿ ಶಾರ್ದೂಲ್ 1 ರನ್ ನೀಡಿದರು. ಆ ನಂತರ ನಾಲ್ಕನೇ, ಐದನೇ ಮತ್ತು ಆರನೇ ಎಸೆತಗಳಲ್ಲಿ ಬ್ಯಾಕ್ ಟು ಬ್ಯಾಕ್ 3 ವಿಕೆಟ್ ಪಡೆದು ಹ್ಯಾಟ್ರಿಕ್ ಪೂರೈಸಿ ಮೇಘಾಲಯ ತಂಡದ ಅರ್ಧದಷ್ಟು ಆಟಗಾರರನ್ನು ಪೆವಿಲಿಯನ್‌ಗೆ ಕಳುಹಿಸಿದರು. ಇದಾದ ನಂತರವೂ ವಿಕೆಟ್‌ಗಳ ಸರಣಿ ಮುಂದುವರಿಯಿತು. ಮೊದಲ ದಿನದಾಟದಲ್ಲೇ ತತ್ತರಿಸಿ